ಧರ್ಮಶಾಲೆ



ಎಸ್. ವೆಂಕಟರಾಜ

ಧರ್ಮಶಾಲೆ

(ಸಾಮಾಜಿಕ ಕಾದಂಬರಿ)

ಎಸ್. ವೆಂಕಟರಾಜ

೧೯೫೬

ಶ್ರೀಕೃಷ್ಣಪ್ರಕಾಶನ, ಉಡುಪಿ

ಬೆಲೆ: ಹದಿನಾಲ್ಕಾಣೆ

ಮುದ್ರಕರು:
ಮೆಜಿಸ್ಟಿಕ್ ಪ್ರೆಸ್,
ಉಡುಪಿ

091334

8K3.6
VEN d

ಇದರ ಸರ್ವಸ್ವಾಮ್ಯ ಗ್ರಂಥಕರ್ತರದು.
ಬರೆದ ಕಾಲ 18—2—1948 — 23—2—1948

ಪ್ರಕಾಶಕರು:
ಶ್ರೀ ಕೃಷ್ಣ ಪ್ರಕಾಶನ
ಯೋಗೀಂದ್ರ ಸದನ
ಉಡುಪಿ.

ಮುನ್ನುಡಿ

ಸಾಹಿತ್ಯದ ಬೆಳವಣಿಗೆಗೆ ಅವಿಕಾರಮನಸ್ಸಿನ ವಿಮರ್ಶೆಯು ಅಗತ್ಯ ವಿರುವಂತೆಯೇ ಸಮಾಜದ ಉನ್ನತಿಗೂ ನಿರ್ವಿಕಾರ ಬುದ್ಧಿಯ ವಿಚಾರವು ಅತ್ಯಗತ್ಯ. ರಸದ ಸ್ಥಾನದಲ್ಲಿ ಕಸವನ್ನು ಕಂಡಾಗ ಅದನ್ನು ಗುರಿಹಿಡಿದು ಕೆಡಹುವುದು ವಿಮರ್ಶಕನ ಕುಲಧರ್ಮವಿದ್ದಂತೆಯೆ ಸಮಾಜದ ಕೊಳೆ ಕೊಳಕುಗಳ ಶಾವನ್ನು ನಿರ್ಮೂಲಗೊಳಿಸುವುದೇ ವಿಚಾರವಂತನ ನೀತಿ ಯಾಗಿದೆ. ಇದು ವ್ಯಕ್ತಿಯ ದೂಷಣೆ ಶ್ಲಾಘನೆಗಳ ಮಾತಲ್ಲ. ಇದು ಹಂಗಿನ ಹಿಡಿತವಿಲ್ಲದ ನಿರರ್ಗಳ ವೃತ್ತಿಯ ಸ್ವಯಂವ್ಯಕ್ತಿತ್ವದ ದ್ಯೋತಕವೇ ಹೊರತು ಆಪಾದನೆ ಅನುಮೋದನೆಗಳ ಸ್ವಾರ್ಥಸಮುಷ್ಟಿಯ ಕ್ಷುದ್ರ ಸ್ವರೂಪದರ್ಶನವಲ್ಲ ಹೀಗೆ ತನ್ನ ಸುತ್ತಮುತ್ತಲಿನ ವಾತಾವರಣದ ಕಲ್ಮಷವನ್ನು ತೋರಿಕೊಡುವ ಕರ್ತವ್ಯಭಾರವು ಪ್ರತಿಯೊಬ್ಬ ಸಾಹಿತಿ ಅಥವಾ ಸತ್ಪ್ರಜೆಯ ಮೇಲೆ ನಿರ್ಭರವಾಗಿದೆ.

ಹಿಂದೆ ಮಿಸ್. ಮೇಯೋ ಎಂಬಾಕೆ ತನ್ನ—ಮದರ್ ಇಂಡಿಯಾ- ಎಂಬ ಗ್ರಂಥದಲ್ಲಿ ನಮ್ಮ ಸಮಾಜದ ನಗ್ನಸ್ವರೂಪವನ್ನು ತೋರಿಸಿಕೊಟ್ಟಾಗ ನಮ್ಮ ದೇಶವೇ ಹೌಹಾರಿ ಬೊಬ್ಬಿಟ್ಟ ಪ್ರಸಂಗ ಎಂದಿಗೂ ಮರೆಯಲಾರದು. ಆದರೆ ಆಕೆಯ ಅಂತಹ ಆಪಾದನೆಗಳಿಂದ ನಮ್ಮ ಸಮಾಜ ಇಂದಾದರೂ ದೂರವಾಗಿದೆಯೇ?—ಎಂಬ ಮಾತನ್ನು ನಾವು ಈಗಲೀಗ ನಮ್ಮ ಸ್ವತಂತ್ರತೆಯ ಸರಕಿನ ಮಧ್ಯದಲ್ಲಿ ಕುಳಿತು ವಿರಾಮವಾಗಿ ವಿವೇಚಿಸಬೇಕಾಗಿದೆ. ಪರಕೀಯರು ನಮ್ಮ ಸ್ವರೂಪವನ್ನು ತೋರಿಸಿದಾಗ ನಾವು ಕೆರಳುವುದು ಆತ್ಮಾಭಿಮಾನವಿರಬಹುದು. ಆದರೆ ಯಾವ ಶಿಶುವಿಗಾದರೂ ಬೆಳವಣಿಗೆಯ ಒಂದು ಕಾಲವಿದ್ದೇಯಿದೆ. ಆ ತನಕ ಮಗುವು ನಗ್ನವೇಷದಿಂದ ತಿರುಗುತಾಯಿದ್ದರೆ ಯಾರೂ ಹೇಸಲಾರರು. ಆದರೆ ನಂತರವೂ ಹಾಗೆಯೇ ಬತ್ತಲೆ ಬರಿದು ತಿರುಗುವುದೆಂದರೆ ಅಪಹಾಸ್ಯವಾಗದಿರದು. ಅದನ್ನು ತಿದ್ದಿ ತೋರುವ ಗುರುತ್ವ ಸ್ವಂತ ಬಳಗದವರ ಮೇಲೆ ಇದ್ದೇ ಇದೆ. ಪರಕೀಯರ ಅಪಹಾಸ್ಯ ನಮಗೆ ತೀಕ್ಷ್ಣವಾಗಿ ಅಸಹನೀ

ಯವಾದರೆ ಸ್ವಕೀಯರು ಬಾಯಿ ಮುಚ್ಚಿ ಅದನ್ನೆ ಹಂಗಿಗಾಗಿ ಹಿತವೆಂದು ಬಗೆದು ಹೊಗಳುತ್ತ ಹೋದರೆ ಆಗ ಈ ಸಮಾಜಪುರುಷನ ಸ್ವರೂಪ ಸ್ಥಗಿತವಾಗಿ ಪ್ರಪಂಚವೇ ದುರ್ವಿನಯದ ಪ್ರತೀಕವಾದೀತು!


ಧರ್ಮ ಶಾಲೆಯಲ್ಲಿ ಆಕ್ಷೇಪಿಸಿರುವುದು ಧರ್ಮವನ್ನಲ್ಲ—ಧರ್ಮದ ದುಂದುಗಾರಿಕೆಯನ್ನು. ನಿರ್ಮಲವಾದ ಆಶ್ರಮ ಧರ್ಮವನ್ನಲ್ಲ—ಅದರ ಅವಹೇಳನದ ಆಭಾಸವನ್ನು! ಧರ್ಮದ ಹೂದೋಟದಲ್ಲಿ ಸತ್ಪ್ರವೃತ್ತಿಯ ಸಚ್ಚರಿತೆಯ ಸೌರಭದ ಸುಖಾಸ್ವಾದವೇ ಹಬ್ಬಬೇಕೇ ಹೊರತು ಹೊಲಸು ಹಾವಿನ ಹೆಚ್ಚಳವಲ್ಲ. ಧರ್ಮ ದೇವಾಲಯವು ಸುಭದ್ರವಾಗಿರಬೇಕಾದರೆ ಅದರ ವಿಶಾಲ ತಳಹದಿಯನ್ನು ಕೊರೆಯುತಿರುವ ಕಳಂಕದ ಕ್ರಿಮಿಕೀಟಗಳ ಕೋಟಲೆಯನ್ನು ತಡೆಗಟ್ಟಲೇಬೇಕು.

ಇದೇ ಸಾಹಿತ್ಯದ ವಿಚಾರ ಪ್ರಣಾಲಿ. ಈ ದೃಷ್ಟಿಯಿಂದ ಧರ್ಮ ಶಾಲೆಯು ವಿವೇಕಿಗಳಿಗೆ ಸಮ್ಮತವಾದೀತೆಂದು ನಂಬಿರುವೆನು.

೨೬—೭—೧೯೫೬ ಎಸ್. ವೆಂಕಟರಾಜ

ಪರಿವಿಡಿ

ಕುಸುರು		ಪುಟ
೧	ಕಟ್ಟೆಪ್ಪಣೆ	೧
೨	ಹೊರಟು ಹೋದನು	೬
೩	ಜಗವು ಸಾಗಿದೆ	೧೯
೪	ಕ್ರಾಂತಿ ವೀರರು	೨೭
೫	ಧರ್ಮದ ದುಂದುಗಾರಿಕೆ	೩೩
೬	ಹಾವಿನ ಹೆಜ್ಜೆ	೩೯
೭	ಹಾಲಾಹಲ	೪೭
೮	ಕರೆದರೆ ದನಿ ಕೇಳದೆ	೫೮
೯	ಕುರುಡು ಪ್ರಪಂಚ	೬೫
೧೦	ಧೀರೇ ಸಮಿರಾರೇ	೭೩
೧೧	ಶಾರದಾ ಪೂಜೆ	೮೧



ಶ್ರೀ. ಎಸ್. ವೆಂಕಟರಾಜರ

ಅಮೋಘ ಕೃತಿಗಳು

★

ಕಿರಿಯರ ಪ್ರಪಂಚ, ಉಡುಪಿ ಇವರಿಂದ—

೧ ರಂಗಭೂಮಿ
೨ ಆಕಾಶಗಂಗೆ
೩ ಎರಡು ಏಕಾಂಕ ನಾಟಕಗಳು
೪ ಕವಿತಾಕಾಮಿನಿ—ಭಾಗ ೧
೫ ಸಪ್ತಸಾಗರ

ಶ್ರೀಕೃಷ್ಣ ಪ್ರಕಾಶನ ಉಡುಪಿ ಇವರಿಂದ—

೬ ಅಂಬುಜಾಕ್ಷಿ
೭ ಧರ್ಮಶಾಲೆ

ಅಚ್ಚಿನಲ್ಲಿ—

೮ ತುಂಗಮ್ಮನ ತವರುಮನೆ
೯ ಕೈಲಾಸದಲ್ಲಿ ಕಮ್ಯುನಿಸ್ಟರು
೧೦ ಕಾವ್ಯಮನೋರಮಾ (ಕನ್ನಡ—ಸಂಸ್ಕೃತ)

ಧರ್ಮಶಾಲೆ

ಕುಸುರು ೧ **ಕಟ್ಟಪ್ಪಣೆ**

ಗಾಂಧಿಯಂತೆ—ಗಾಂಧಿ! ಇವರ ಮನೀ ಹಾಳಾಗ! ಈ ಪೇಟೆ ನಾಯಿಗಳು ನಮಗೆ ಬುದ್ಧಿ ಹೇಳಲಿಕ್ಕೆ ಹಳ್ಳಿಗೆ ಬಂದಿದ್ದಾವೆ. ನಮ್ಮ ನ್ನಾಳೋ ರಾಜನಿಗೆ ಎದುರು ನಿಂತು ರಾಜದ್ರೋಹದ ಪಾಪ ಕಟ್ಟಿಕೊಂಡು ಮತ್ತೆ ಇವುಗಳು ಸ್ವರಾಜ್ಯಗಳಿಸಿಕೊಳ್ಳುತ್ತಾವಂತೆ—ಸ್ವರಾಜ್ಯ! ಜಾತಿ ಬೇಡ—ನೀತಿಬೇಡ. ಬ್ರಾಹ್ಮಣನೂ ಒಂದೇ ಹೊಲೆಯನೂ ಒಂದೇ—ಈ ಕಳ್ಳ ಸೂಳಾ ಮಕ್ಕಳಿಗೆ! ಇವರ ಸ್ವರಾಜ್ಯಕ್ಕೆ ಬೆಂಕಿಹಾಕಿದರು. ಪೇಟೆ ಯಲ್ಲಿ ಬೇಳೆಬೇಯದ್ದಕ್ಕೆ ತಲೆಮರೆಸಿಕೊಂಡು ಈಗ ಹಳ್ಳಿಗೆ ಬಂದು ಉಪ ದೇಶಕ್ಕೆ ತೊಡಗಿದ್ದಾವೆ. ನಮಗೇನೂ ಬುದ್ಧಿಯಿಲ್ಲ—ಬೋಳುತಲೆ ಎಂತ ಎಣಿಸಿಕೊಂಡಿದ್ದಾವೋ ಏನೋ ಈ ಮಂಗಗಳು! ಇವರ ಅಪ್ಪನಿಗೆ ಬುದ್ಧಿ ಹೇಳಿ ಕಳುಹಿಸಲಿಕ್ಕೆ ನಮಗೆ ಗೊತ್ತಿದೆ! ಇವರ ಹಲ್ಲುಸೊಂಟ ಮುರಿಸಿ ಮುರಿಕಟ್ಟಿ ಹಳ್ಳಿಯಿಂದ ಹೊರಗೆ ಹಾಕಿಸಲಿಕ್ಕೆ ಗೊತ್ತಿದೆ. ಇವರ ಈ ಎಲ್ಲಾ ವೇಷಗಳು ಪೇಟೆಯಲ್ಲಿ ನಡೀತದಂತ ನಮ್ಮಲ್ಲಿ ಖರ್ಚಾಗಲಾರವು. ಹತ್ತು ಆಳುಕೂಡಿಸಿ ಅವರನ್ನೆಲ್ಲಾ ಹೊರಗೆ ದಬ್ಬಿಸಿ ಬಿಡಬೇಕು—ಎಂದು ಧರ್ಮನ ಹಳ್ಳಿಯ ಜಮೀನ್ದಾರ ಶ್ರೀನಿವಾಸರಾಯರು ತಮ್ಮ ಶ್ಯಾನುಭಾ ಗರಿಗೆ ಕಟ್ಟಪ್ಪಣೆ ಕೊಡಿಸಿದರು.

ಶ್ರೀನಿವಾಸರಾಯರು ಹಳೆಯ ಸಂಪ್ರದಾಯದ ಮನುಷ್ಯ. ಮನುಷ್ಯನ ಮಟ್ಟದ ಏರುತಗ್ಗುಗಳಲ್ಲಿ ಆಚಾರರೂಢಿಗಳ ಕೀಳು ಮೇಲ್ಮೆಗಳಲ್ಲಿ ಅವರಿಗೆ ಅಚಲವಾದ ವಿಶ್ವಾಸವಿದ್ದಿತು. ಈ ಅರುವತ್ತು ವರ್ಷಗಳ ಆಯುಷ್ಯದ ತನಕವೂ ಅದೇ ಸಂಸ್ಕಾರವು ಅವರ ಎದೆಹಿಡಿದು ಊದಿ ಅವರನ್ನು ಉಬ್ಬಿಸುತಿದ್ದಿತು. ಅಂತಹ ಉಬ್ಬುವಿಕೆಯಿಂದಾಗಿ ಅವರು ತನ್ನ ಜಮೀನ್ದಾರಿಕೆಯ ರಾಜ್ಯದಲ್ಲಿ ಪೇಟೆಯಿಂದ ಸಹಸಾ ಬಂದ ಹತ್ತುಮಂದಿ ಸ್ವಯಂಸೇವಕರ ದಾಳಿಯನ್ನು ಸಹಿಸಲಿಲ್ಲ. ಬಂದ ಆ ಲವಡೀ ಮಕ್ಕಳಾದರೂ ಮಾಡಿದುದೇನು? ಅಲ್ಲಿಯ ಗಡಂಗಿನ ಮುಂದೆ ಪಿಕೆಟಿಂಗ್! ಶ್ರೀನಿವಾಸರಾಯರಿಗೆ ನಿಜವಾಗಿಯಾದರೆ ಗಾಂಧಿಯ ಮೇಲೇನೂ ವಿಶೇಷ ಆಕ್ರೋಶವಿರಲಿಲ್ಲ. ಒಂದು ಬಿಳಿಟೋಪಿ ಹೇರಿಸಿ ಗೋಣೀತಟ್ಟಿನ ದಪ್ಪ ಅಂಗಿ ಹಾಕಿ ಸುತ್ತಾಡಿದ್ದರೆ ಅವರದೇನೂ ಆಕ್ಷೇಪವಿರುತಿದ್ದಿಲ್ಲ. ಆದರೆ ಆ ಮುಂಜಾನೆ ಮನೆ ಆಳು ಬೋರನು ಬಂದವನೇ ಆ ಹಿಂದಿನ ದಿನ ಬಿಳಿ ಟೋಪಿಯವರು ಗಡಂಗಿನ ಮುಂದೆ ಪತಾಕೆ ಹಿಡಿದು ನಿಂತು ತಡೆಯುತಿದ್ದರು ಎಂದಿದ್ದ. ಆದನ್ನು ಕೇಳಿದೊಡನೆಯೇ ಅವರು ಕಿಡಿಕಿಡಿಯಾದರು. ಅವರ ಹೆಂಡತಿ ಹದಿನೈದು ವರ್ಷಗಳ ಹಿಂದೆ ಸತ್ತಂದಿನಿಂದಲೂ ಅವರಿಗೆ ಮದ್ಯದ ಮೇಲೆ ವಿಶೇಷ ಮಮತೆ ಬಿದ್ದಿದ್ದಿತು. ಹೆಂಡತಿಯ ಆಂತರಿಕ ಸ್ಥಾನ ಗೌರವಗಳಲ್ಲಿ ಅದನ್ನಿರಿಸಿ ಅವರು ದಿನಾ ಸಾಕ್ಷಾತ್ಕರಿಸುತಿದ್ದರು. ಆದುದರಿಂದಲೇ ಬೆಳಗಿನ ಆ ವರ್ತಮಾನದಿಂದಾಗಿ ಅವರ ಆಕ್ರೋಶವು ಕೆರಳಿದ್ದಿತು.

—ಕುಡಿಯೋದಂತೆ—ಕುಡಿಯೋದು! ಏಕೆ ಕುಡಿಯಬಾರದಂತೆ? ಕುಡಿದು ಕುಡಿದೇ ಹಿಂದಿನವರು ಋಷಿಗಳಾಗಿದ್ದಾರೆ. ಹಾಗೆ ಕುಡಿಯುವುದಕ್ಕಾಗಿಯೇ ಅವರು ಯಜ್ಞ ಯಾಗ ಮಾಡುತಿದ್ದುದು. ದೇವತೆಗಳೆಲ್ಲಾ ಸುರೆ ಕುಡಿದು ಕುಡಿದು ಸುರರಾಗಿ ಹೋದರು. ಅದು ಸಿಕ್ಕದೆ ಹೋದುದರಿಂದ ದೈತ್ಯರು ಅಸುರರಾದರು. ಈಗ ಕುಡೀಬಾರದು ಅನ್ನುವ ಈ ಲವಡೀ ಮಕ್ಕಳು ಅಂದೇ ಹುಟ್ಟಿ ಬಲರಾಮನಿಗೆ ಬುದ್ಧಿ ಹೇಳಬೇಕಿದ್ದಿತು. ನಾನೇನೂ ಬಲರಾಮನಿಗೆ ಬಿಟ್ಟುಕೊಡುವ ಮನುಷ್ಯನಲ್ಲ! ಇವರಿಗೆಲ್ಲಾ ಒಮ್ಮೆ ಕಪಾಲಮೋಕ್ಷ ಮಾಡಿಸದಿದ್ದರೆ ಮತ್ತೇಕೆ ಇರೋದು ನಾನಿಲ್ಲಿ?

ನಮ್ಮ ಸರಕಾರವೇ ಕುಡೀ ಕುಡೀ ಅಂತ ಗುತ್ತಿಗೆ ಹಾಕಿಸಿ ಜನರಿಗೆ ಧಾರಾಳ ತುಂಬಿಸಿ ತುಂಬಿಸಿ ಕೊಡುತಿರುವಾಗ ಇವರು ಯಾರಯ್ಯ ಕೇಳಲಿಕ್ಕೆ? ನಾವು ಬೇಕಾದಾಗ ಬೇಕಾದ್ದು ಕುಡಿದೇವಲ್ಲ? ಬೆಳಿಗ್ಗೆ ಕಾಫಿ-ಮತ್ತೆ ಗಂಜಿ-ಪರಮಾನ್ನ—-ಹಾಲು ಮೊಸರು—ಹೆಂಡ ಏನುಬೇಕಾದರೂ ಕುಡಿದೇವಲ್ಲ! ಇವರಿಗೇನುಬಂತು ಕಷ್ಟ? ಅಧಿಕಪ್ರಸಂಗಿಗಳು. ಗಾಂಧಿಯೇಕೆ ಹೇಳಿಯಾನು ಕುಡೀಬಾರದೂಂತ? ಏನೋ ಕುಡಿದು ನಿಮ್ಮ ನಿಮ್ಮೊಳಗೆ ಜಗಳ ಮಾಡಿಕೊಳ್ಳಬೇಡಿ ಎಂತ ಹೇಳಿರಬಹುದು. ಒಂದು ದಿವಸ ಅವನೇ ಬಂದು ಈ ಎಲ್ಲಾ ಜನರಿಗೂ ಚೆನ್ನಾಗಿ ಕುಡಿಸಿ ಆ ಬಿಳಿ ಮುಖದವರ ಮೇಲೆ ಬಿಟ್ಟು ಬಿಡಲಿ—ಅದೇ ದಿವಸವೇ ಸ್ವರಾಜ್ಯ!

ಕೆಳಗಡೆಯ ಗದ್ದಲಕೇಳಿ ಮೇಲುಪ್ಪರಿಗೆಯಿಂದ ಕೃಷ್ಣಸ್ವಾಮಿಯು ಮೆಲ್ಲನೆ ಕೆಳಗಿಳಿದು ಬಂದನು. ಅವನನ್ನು ಕಂಡೊಡನೆ ಶ್ರೀನಿವಾಸರಾಯರು ಕೈಯೆತ್ತಿ ಹೇಳಿದರು—ಎಲೋ ಹುಚ್ಚು ಮುಂಡೆ! ನೀನೆಲ್ಲಿಯಾದರೂ ಅವರಕೂಡೆ ಸೇರಿದಿಯಾದರೆ ಜಾಗ್ರತೆ! ನಿಮ್ಮ ಗಾಂಧಿ ಗೀಂಧಿ ಎಲ್ಲ ಒಂದೇ ದಿವಸಕ್ಕೆ ಪಿತ್ತಯಿಳಿಸಿಬಿಟ್ಟೇನು!

ಕೃಷ್ಣಸ್ವಾಮಿಗೆ ಅದೇನೆಂದು ಅರ್ಥವಾಗಲಿಲ್ಲ. ಅವನು ಮುಖ ಮುಖ ನೋಡುತ್ತ ನಿಂತಿದ್ದ.

ಶ್ರೀನಿವಾಸರಾಯರು ಮತ್ತೊಮ್ಮೆ ದುರದುರನೆ ನೋಡಿ ಹೇಳಿದರು-ಸತ್ಯ ಹೇಳು, ನೀನೆಲ್ಲಿಯಾದರೂ ಆ ಕೋತಿಗಳನ್ನೆಲ್ಲಾ ಇಲ್ಲಿಗೆ ಬರಲಿಕ್ಕೆ ಹೇಳಿದ್ದೀಯಾ?

ಯಾವ ಕೋತಿಗಳು?

ನಿನ್ನ ಜಾತಿಯವುಗಳು! ತಲೆ ಮೇಲೆ ಗಾಂಧೀಟೋಪಿ ಹಾಕಿ ಬೊಬ್ಬೆ ಹಾಕುತ್ತಾ ಅಡ್ಡಾಡುತ್ತಾವಲ್ಲ ಅವೇ!

ಇಲ್ಲ, ನಾನು ಯಾರನ್ನೂ ಬರಲಿಕ್ಕೆ ಹೇಳಲಿಲ್ಲಪ್ಪ.

ಹಾ—ಹಾಗಾದರೆ ಚೆನ್ನಾಯ್ತು. ಅಲ್ಲವಾದರೆ ತಿಳಿದೀತು ಬಗೆ! ಅವುಗಳೊಂದಿಗೆ ಎಲ್ಲಿಯಾದರೂ ಕೂಡಿದಿ ಎಂದರೆ ನಾನೇನೂ ಸರಕಾರಕ್ಕೆ

ದ್ರೋಹ ಮಾಡಿ ಪಾಪ ಕಟ್ಟಿಕೊಳ್ಳಲಿಕ್ಕಿಲ್ಲ. ಇನ್ನು ಆ ಗಾಂಧೀ ಕೇಶವಯ್ಯ—ಅವನೆಲ್ಲಿಯಾದರೂ ಸೇರಿದ್ದರೆ ಚೆನ್ನಾಗಿ ಬುದ್ಧಿ ಕಲಿಸಿಯೇನು!

ಇಲ್ಲ. ಅವರಿಗೆ ಗೊತ್ತೇಯಿಲ್ಲ.

ಅದು ಹೇಗೆ ನಿನಗೆ ಗೊತ್ತು? ನಿನಗೂ ಅವರಿಗೂ ಬಹಳ ಹತ್ತಿರ ಎಂತ ತೋರುತ್ತದೆ. ತಿಳಿದುಕೋ—ಅಂಥವರ ಮಾತಿಗೆಲ್ಲಿಯಾದರೂ ಮರುಳಾಗಿ ತಲೆ ಕೆಡಿಸಿಕೊಂಡಿ ಎಂದರೆ ಮತ್ತೆ ನನ್ನನ್ನು ಅಪ್ಪ ಎಂತ ತಿಳಕೊಳ್ಳಬೇಡ. ನನಗೆ ಎಲ್ಲಾ ಗೊತ್ತಿದೆ. ನೀನು ಬರುತ್ತಾ ಬರುತ್ತಾ ರಾಯರ ಕತ್ತೆಯಾಗುತ್ತಾಯಿದ್ದಿ. ನನಗೇನು ಕೇಶವಯ್ಯ—ಅವನ ಮಗಳು ಈ ಕತೆಗೊತ್ತಿಲ್ಲ ಎಂತ ಭಾವಿಸಿದ್ದಿಯಾ? ಎಲ್ಲಾ ಗೊತ್ತು. ಮುಂದೆ ಎಲ್ಲಿಯಾದರೂ ಅವರ ಮನೆಯಕಡೆ ಹೋದಿ ಎಂದರೆ ನಿಮ್ಮೆಲ್ಲರನ್ನೂ ಥಳಿಸಿಬಿಟ್ಟೇನು!

ಕೃಷ್ಣಸ್ವಾಮಿ ಏನನ್ನೂ ಆಡಲಿಲ್ಲ. ಅದು ಮಾತಾಡುವ ಹೊತ್ತಲ್ಲವೆಂಬುದು ಅವನಿಗೆ ತಿಳಿದಿದ್ದಿತು. ತಂದೆಯ ಮನಸ್ಸಿನ ಏರಿಳಿತಗಳನ್ನೆಲ್ಲಾ ಅವನು ಚೆನ್ನಾಗಿ ಗ್ರಹಿಸಿದ್ದನು. ಆದರೆ ಕೇಶವಯ್ಯ ಮತ್ತು ಅವರ ಮಗಳು ಇವರ ಕುರಿತು ತನ್ನನ್ನು ಹೊಂದಿಸಿ ತಂದೆಯು ಹೀಗೆ ಒಮ್ಮಿಂದೊಮ್ಮೆಗೆ ಕಟ್ಟುನಿಟ್ಟಿನಿಂದ ಮಾತಾಡುವನೆಂದು ಅವನು ಎಣಿಸಿದ್ದಿಲ್ಲ. ಅದು ಆಕಸ್ಮಿಕವಾಗಿ ಸಿಡಿದು ಉರಿಕಾರಿ ಹೊರಹೊಮ್ಮಿದಂತಾದುದಕ್ಕಾಗಿ ಅವನು ಖೇದಗೊಂಡನು. ಆದರೂ ಮರುಮಾತಾಡದೆ ಮುಖ ಕೆಳಗಿಟ್ಟು ಒಂದು ಕ್ಷಣ ನಿಂತಿದ್ದು ಮತ್ತೆ ಉಪ್ಪರಿಗೆ ಏರಿದನು.

ಶ್ರೀನಿವಾಸರಾಯರು ಸ್ವಲ್ಪಹೊತ್ತು ಗುಡುಗುಡಿಸುತಿದ್ದು ಮತ್ತೆ ಜೋರನನ್ನು ಕರೆದು ಹೇಳಿದರು—ಲೋ---ನಾಳೇನೇ ರಿಪೋರ್ಟು ಕೊಡುತ್ತೇನೆ. ಪೇಟೆಗೆ ಕೊಂಡುಹೋಗಿ ಹತ್ತು ಪೋಲೀಸು ತಂದು ಆ ಕತ್ತೆಗಳಿಗೆಲ್ಲಾ ಬೇಡಿಹಾಕಿಸಬೇಕು - ಎಂದು ಅಷ್ಟು ಹೊತ್ತು ಮಾತಾಡಿದ ಶ್ರಮ ಪರಿಹಾರಕ್ಕಾಗಿ ಸ್ವಲ್ಪಹೊತ್ತು ಎದೆಹಿಡಿದುಕೊಂಡು ಕುಳಿತು ಮತ್ತೆ ಹಿಂಗಡೆಯ ಬೀರುವಿನಲ್ಲಿದ್ದ ಬಾಟ್ಲಿಯೊಂದರ ತಲೆಹಾರಿಸಿ ಅವನ್ನು ಗಂಟಲಿ

ಗಿಳಿಸಿಕೊಂಡರು. ತುಸು ಹೊತ್ತು ಆಕಡೆ ಈಕಡೆ ಅಡ್ಡಾಡುತಿದ್ದು ಮತ್ತೆ ಆರಾಮು ಕುರ್ಚಿಯಲ್ಲಿ ಕೈಕಾಲು ಬಿಟ್ಟು ಕುಳಿತು ಒಮ್ಮೆ ಅಬ್ಬರಿಸಿದರು.

....ನಾವು ಕುಡಿದೇ ಕುಡಿತೇವೆ. ಬೇಕಾದಾಗ ಬೇಕಾದ್ದು ಕುಡಿದೇ ವಲ್ಲ! ಯಾರಯ್ಯ ಕೇಳುವವರು? ಇದು ಧರ್ಮನ ಹಳ್ಳಿ. ಇಲ್ಲಿಯ ಧರ್ಮ ರಾಜ ನಾನೇ! ನಾನೇ ಧರ್ಮರಾಜ! ನಮ್ಮಲ್ಲಿ ಯಾರಿಗಾದರೂ ಒಂದೇ ನ್ಯಾಯ. ಬೇಕಾದವರು ಬೇಕಾದಷ್ಟು ಕುಡೀಬಹುದು. ಹಾಂ! ಇದು ಧರ್ಮನ ಹಳ್ಳಿಯ ಧರ್ಮಶಾಲೆ ಧರ್ಮಶಾ--ಲೆ! –ಎನ್ನುತಿದ್ದು ಮತ್ತೆ ನಾಲಗೆ ತಡವರಿಸುತ್ತ—ಧ—ರ್ಮ—ಶಾಲೆ—ಡರಂ—ಶಾಲೆ—ಡರಂ—ಶಾ—ಲೆ—!—ಎಂದು ಅಲ್ಲೇ ಒರಗಿಬಿಟ್ಟರು.

ಕುಸುರು ೨ ಹೊರಟು ಹೋದನು

ಶ್ರೀನಿವಾಸರಾಯರ ಸಿಡುಕಿನ ಸ್ವಭಾವವು ಯಾರಿಗೆ ತಾನೇ ತಿಳಿದಿಲ್ಲ? ಧರ್ಮನಹಳ್ಳಿಯು ಒಂದು ಹಳ್ಳಿಮಾತ್ರವಾದರೂ ಯಾವಾಗಲೂ ಅವರ ಸಿಡುಕಿನಿಂದಾಗಿ ಬೆಚ್ಚನೆ ಕಾದಿರುತಿದ್ದಿತು. ಅಲ್ಲೇ ಅವರ ಮೂರು ಸಹಸ್ರ ರೂಪಾಯಿಗಳ ಕಂದಾಯ ತೆರುವ ಜಮೀನು ಇದ್ದಿತು. ಅವರೇ ಅಲ್ಲಿನ ಊರಗೌಡರು. ಅವರ ವಾಕ್ಯ ಅಲ್ಲಿ ವೇದವಾಕ್ಯವಾಗಿದೆ. ಜನರು ಅವರ ಪ್ರತಾಪವ ಪ್ರಖರತೆಯ ಮುಂದೆ ನಿಲ್ಲಲು ಅಂಜಿ ಹಿಂಜರಿಯುತಿದ್ದರು. ಆ ಪ್ರತಾಪವು ಅಲ್ಲಿಂದ ಎಂಟು ಮೈಲು ದೂರದಲ್ಲಿರುವ ಪೇಟೆಯ ತನಕವೂ ಹಬ್ಬಿದೆ. ಆದರೆ ಶ್ರೀನಿವಾಸರಾಯರು ನ್ಯಾಯಬಾಹಿರರಲ್ಲ. ಸಿಡುಕು ಕಳೆದ ಮೇಲೆ ಅವರನ್ನು ಸಮುದಾರಿಯಲ್ಲಿ ಸೆಳೆದೊಯ್ಯುವುದು ಬಹಳ ಸುಲಭವಿದ್ದಿತು.

ರಾಯರ ಹೆಂಡತಿ ಇರುವ ತನಕ ಅವರ ಸ್ವಭಾವವು ಇಷ್ಟು ಒರಟಾಗಿದ್ದಿಲ್ಲ. ಅವರ ಕಠೋರ ವೃತ್ತಿಯಲ್ಲೂ ಒಂದು ನಯವಿದ್ದಿತು. ಆದರೆ ಆ ಮಾತಾಯಿ ಹಲವು ವರ್ಷಗಳ ಹಿಂದೆಯೇ ಒಬ್ಬ ಮಗನನ್ನು ಮಾತ್ರ ಮುಂದಿಟ್ಟು ತೀರಿಹೋಗಿದ್ದಳು. ರಾಯರು ಬೇರೆ ಮದುವೆಯಾಗಿದ್ದಿಲ್ಲ. ಮದುವೆಯಾಗಬೇಕೆಂದಿದ್ದರೆ ಅವರಿಗೇನೂ ಅದೊಂದು ಕಷ್ಟದ ಕೆಲಸವಾಗುತಿದ್ದಿಲ್ಲ. ಅವರ ಧನ—ದೌಲತ್ತು—ಮರ್ಯಾದೆಗಳಿಗೆ ಮನಸೋತು ಎಷ್ಟೋ ಸಂಬಂಧ ತಾನೇ ತಾನೇ ಮುನ್ನುಗ್ಗಿ ಬಂದಿದ್ದಿತು. ಆದರೂ

ಅವರು ಮದುವೆಯಾಗಿದ್ದಿಲ್ಲ. ಅದು ಅವರ ಹೆಂಡತಿಯ ಮೇಲಣ ಪ್ರೀತಿ– ಆ ಸಂತತಿಯ ಮೇಲಣ ಸಚ್ಚಿಂತನೆ. ಆದರೆ ಅಂತಹ ಪ್ರೀತಿಯ ಬಿಗಿತವು ಕಳೆದು ಬಾಳು ನಿರಾಲವಾದಾಗ ಅದರ ನೆಲೆಗಾಗಿ ಸುರೆಯ ಸೇವನೆಯ ಚಟವು ಹೊಕ್ಕಿಕೊಂಡಿತು. ಅಂದಿನಿಂದ ಅವರ ವೃತ್ತಿಯ ಮೇಲಣ ನಯವು ಕಳೆದು ಹೋಗಿ ಅದು ಒರಟಾಗಿ ಸುತ್ತಲೂ ಸಿಡಿಯುತಿದ್ದಿತು.

ಅಂತಹ ಸಿಡುಕನ್ನು ಕೃಷ್ಣಸ್ವಾಮಿಯು ನಿನ್ನೆ ಮೊನ್ನೆಯಿಂದಲ್ಲ -- ಚಿಕ್ಕಂದಿನಿಂದಲೂ ಕಾಣುತ್ತ ಬಂದಿರುವನು. ಅದರಿಂದಲೇ ಅಂತಹ ಸಂದರ್ಭಗಳನ್ನು ಬೇಕಾದಂತೆ ಹೊಂದಿಸಿಕೊಂಡು ಹೋಗುವ ಸಹನೆಯನ್ನು ಅವನು ಕಂಡುಕೊಂಡಿದ್ದನು. ಆದುದರಿಂದಲೇ ಅವನು ಈ ತನಕವೂ ತಂದೆಯ ಮನಸ್ಸನ್ನು ಕಿಂಚಿತ್ತು ನೋಯಿಸಿದ್ದಿಲ್ಲ—ಅಂತಹ ಸ್ವಭಾವವು ನೋವಿನಿಂದಲೇ ತೊಡಗಿ ಅಲ್ಲಿ ಅಭ್ಯಾಸವಾಗಿ ನಿಂತಿದೆ ಎಂಬುದು ಅವನಿಗೆ ಗೊತ್ತು. ಹೀಗಿರುತ್ತ ಅದನ್ನು ಮತ್ತಷ್ಟು ನೋಯಿಸ ಹೋದರೆ ಅದು ಅವರ ಶಕ್ತಿಗೂ ಮೀರಿ ಅನರ್ಥಕ್ಕೆ ಕಾರಣವಾದೀತೆಂಬುದು ಅವನ ಸಿದ್ಧಾಂತವಾಗಿದ್ದಿತು. ಆದುದರಿಂದಲೇ ಯಾವುದಕ್ಕೂ ಮರು ಮಾತಾಡದೆ ತಂದೆಯನ್ನು ಒಲಿಸಿದ್ದನು. ತಂದೆಯು ಮಗನ ಮುಂದೆ ಎರಡು ಬಿರುಮಾತಾಡಿದರೆ ಅದರ ಉದ್ದೇಶವು ಅಸಾಧುವಲ್ಲ. ಅದು ಸ್ವಾರ್ಥವಲ್ಲ. ಮಗನ ಅಭ್ಯುದಯದ ಹಿತಾಕಾಂಕ್ಷೆ. ಅಂತಹ ಆಕಾಂಕ್ಷೆಯು ಮನುಷ್ಯನನ್ನು ಒಮ್ಮೆ ಅಳಿಸುವುದು—ಒಮ್ಮೆ ನಗಿಸುವುದು—ಮತ್ತೊಮ್ಮೆ ರೇಗಿಸುವುದು. ಇವೆಲ್ಲವುಗಳ ಅಂತರಾರ್ಥವೂ ಒಂದೇ. ಅದು ತನ್ನ ಕರುಳಿನ ಕಡೆಗೆ ಹೃದಯವು ಹಬ್ಬಿಸುವ ಪ್ರೀತಿ. ಅಂತಹ ಪ್ರೀತಿಯ ಉತ್ಕಟತೆಯಿಂದಾಗಿ ಮಗನು ಹಲವೊಮ್ಮೆ ದಿಙ್ಮೂಢನಾಗ ಬಹುದು. ಆದರೆ ವಿವೇಕದಿಂದ ಅವುಗಳ ಹಾಸುಹೊಕ್ಕನ್ನು ಹರಹಿದಾಗ ಕಾಣಲಿರುವುದು ತಂದೆಯ ನಿರತಿಶಯವಾದ ಪುತ್ರವಾತ್ಸಲ್ಯವು ಮಾತ್ರ. ಆಗ ಅಂತಹ ರಂಗಿಗೆ ಅಪಾರ್ಥವನ್ನು ಕಲ್ಪಿಸಿ ಬೇಸರಿಸುವ ಮಕ್ಕಳು ಎಷ್ಟು ಮಂದಿ ಇಲ್ಲ? ಸಿಡುಕಿನೊಂದಿಗೆ ಸಿಡುಕು ಕೂಡಿಹೋಗುವುದಿಲ್ಲ. ಸಹನೆಯೊಂದೇ ಸಿಡುಕಿನೊಂದಿಗೆ ಕೂಡಿಅದನ್ನು ತಕ್ಕೈಸುವುದು. ಆ ಸಹನೆಯಿಂದಲೇ ಕೃಷ್ಣಸ್ವಾಮಿಯು ಐದು ವರ್ಷಗಳಲ್ಲೇ ತಾಯನ್ನು ಕಳಕೊಂಡ ದುರ್ದೈವಿ

ಯಾಗಿದ್ದರೂ ತಂದೆಯೊಡನೆ ಕೂಡಿ ಬೆಳೆದಿರುವನು. ತಂದೆಯು ತಾಯಂತೆ ನಗುತ್ತ ನಗುತ್ತ ಹಾಲುಣಿಸಲಾರ. ಅನುನಯದಿಂದ ಬೇಡಿ ಹಿತವೆಸಗಲಾರ. ಅವನದು ಆಜ್ಞೆ--ಆದೇಶ. ಆದರೆ ಅವುಗಳ ಉದ್ದೇಶವು ಒಂದೇ ತಾನೆ? ತಾಯಿಯ ಪ್ರೇಮ ಹೃದಯದೊಡನೆ ಕೂಡಿ ಹರಿಯಬಹುದು. ತಂದೆಯದು ದೇಹದೊಡನೆ ಮಾತ್ರ ಕೂಡಲಿದೆ. ತಾಯಿಯು ಪ್ರಕೃತಿಯ ಅಂತಃಸೃಷ್ಟಿ. ತಂದೆಯಿಂದಾಗಿ ಮಗನು ಎಲ್ಲವನ್ನೂ ಹೊಂದಿದ್ದರೂ ತಾಯಿಯ ಅಂತಃಕರಣದ ಲಾಲನೆಗಾಗಿ ಕಣ್ಣೀರು ಸುರಿಸದಿರಲಾರ.

ಕೃಷ್ಣಸ್ವಾಮಿಯು ಉಪ್ಪರಿಗೆಯೇರಿ ಹಾಗೆಯೇ ಖಿನ್ನನಾಗಿ ಕುಳಿತಿದ್ದನು. ದೇಶ ದೇಶಗಳಲ್ಲಿ ೧೯೪೨ರ ಸ್ವತಂತ್ರಾಂದೋಲನವು ಕಾಳ್ಗಿಚ್ಚಿನಂತೆ ಹಬ್ಬುತಿದ್ದಿತು. ಅದರಲ್ಲಿ ಆತ್ಮಾರ್ಪಣೆಗಾಗಿ ಯಾವನು ಹಾರಿಲ್ಲ? ಹಿರಿಯನೇನು--ಕಿರಿಯನೇನು--ಎಲ್ಲರೂ ತಮ್ಮ ತಮ್ಮ ಭಾಗಗಳನ್ನು ಆಹುತಿ ಹೊಯ್ದಿದ್ದರು. ಅದೇ ಆಶಂಕೆಯು ಮಗನ ಮೇಲೂ ಮೂಡಿ ತಂದೆಯು ಗದರಿಸುವುದು ಸಹಜ. ಆ ಮಾತನ್ನು ಕಣ್ಣೀರು ಸುರಿಸಿ ಹೇಳಲು ಅವನ ತಾಯಿಯಿದ್ದಿಲ್ಲ. ಆದುದರಿಂದ ತಂದೆಯೇ ಅದನ್ನು ತನ್ನ ಸ್ವಭಾವಕ್ಕನುಗುಣವಾಗಿ ಇನ್ನೊಂದು ವಿಧದಿಂದ ಪೂರೈಸಬೇಕಾಯಿತು. ಆದರೆ--ಆ ಕೇಶವಯ್ಯನವರ ವಿಚಾರ--ಅವರ ಮಗಳ ವಿಚಾರ--ಇವು ಆವನ ಎಣಿಕೆಗಿಂತಲೂ ಮುಂಚಿತವಾಗಿ ಅವನನ್ನು ಪ್ರತಿರೋಧಿಸಿದುವು. ಅವನಿನ್ನೂ ಆ ಕಡೆಗೆ ಪೂರ್ಣವಾಗಿ ತನ್ನ ಹೆಜ್ಜೆಯನ್ನಿಟ್ಟದ್ದಿಲ್ಲ. ಇಟ್ಟದ್ದರೆ ಅದು ಕಳ್ಳ ಹೆಜ್ಜೆ. ಅದನ್ನು ಎತ್ತಿ ತೋರಿಸಿದಾಗ ಅವನು ಒಮ್ಮೆಂದೊಮ್ಮೆಗೆ ಹೌಹಾರಿದನು. ಮನಸ್ಸು ಬಳ್ಳಿಯಂತೆ ಬೇಕಾದ ಕಡೆ ತೂರಿ ಬೇಕಾದಂತೆ ಬೆಳೆಯಲಿಚ್ಚಿಸುವುದು. ಆದರೆ ಅದಕ್ಕೆ ಪ್ರತಿಷೇಧವು ಬಂದಾಗ ಬಳ್ಳಿಯು ಅಲ್ಲಿಯೇ ಬೆದರಿ ಕುಸಿದು ಹೋಗುವಂತೆ ಬೆಳಕಿನ ಕಡೆ ಮುನ್ನಡೆದ ಮನಸ್ಸು ತಡೆ ಬಂದಾಗ ಅಲ್ಲಿಯೇ ಕುಗ್ಗಿಹೋಗುವುದು. ಅದರ ನೀಡಿದ್ದ ಕೈ ಅಸಹಾಯವಾಗಿ ಮುಂಬರಿಯಲಾರದೆ ಹಿಂದೆ ಸರಿಯಲೂ ಒಲ್ಲದೆ ಬಳಲಿ ಬೆಂಡಾಗಿ ಕಾತರಿಸುವುದು. ಅಂತಹ ಸಂದರ್ಭದಲ್ಲಿ ಆ ಕರುಣೆಯ ಕರೆಯನ್ನು ತಾಯಿ ಸೆಂಗರುಳಿನ ಹೊರತು ಮತ್ತಾರು

ತಿಳಿಯಲಾಪರು? ಆಗ ತಂದೆ— ನಡೆ ಈ ಕಡೆ!—ಎಂದು ಕೈ ತೋರಿಸ ಬಲ್ಲನೆ ಹೊರತು ಕೈ ಹಿಡಿದು ಸೂಕ್ತವಾಗಿ ಮುನ್ನಡೆಸಲಾರನು. ಆದು ದರಿಂದಲೇ ತಂದೆಯು ಮಗನನ್ನು ಕವಚದಂತೆ ಕಾದಿದ್ದರೆ ತಾಯಿಯು ಸದಾ ದೈವದಂತೆ ಕಾಯಬಲ್ಲಳು.

ಕೇಶವಯ್ಯನವರ ವಿಚಾರಕ್ಕೆ ಅವನೇಕೆ ಅಷ್ಟು ಸಿಡಿಮಿಡಿಯಬೇಕು? ಈ ಪ್ರಶ್ನೆಯನ್ನು ಅವನೇ ತನ್ನೊಡನೆ ಕೇಳಿಕೊಂಡನು. ಅದಕ್ಕೆ ಉತ್ತರ ಸಿಗಲಿಲ್ಲ. ಉತ್ತರದ ಸ್ಥಾನದಲ್ಲಿ ಶಾರದೆಯ ಸುಂದರ ಮೂರ್ತಿಯು ಮೇಲೆದ್ದು ಬಂದು ಮನಸ್ಸು ತುಂಬುತಿದ್ದಿತು. ಆದರೆ ಆ ಸೌಂದರ್ಯವು ಎಂದೆಂದಿಗೂ ಅವನ ಮನಸ್ಸು ತುಂಬುತಿರಲು ಸಾಧ್ಯವೆ? ಮೂರು ಸಹಸ್ರ ರೂಪಾಯಿಗಳ ಕಂದಾಯ ಕೊಡುವ ಜಮೀನ್ದಾರನ ಏಕಮಾತ್ರ ಪುತ್ರ ನಾತ— ಬರೇ ಮೂವತ್ತು ರೂಪಾಯಿಗಳ ಪೆನ್ಶನಿನ ಮೇಲೆ ಜೀವನ ಹೊಂದಿಸಿರುವ ಕೇಶವಯ್ಯನ ಮಗಳು—ಅವಳು! ಅವರ ಮಧ್ಯೆ ಎಷ್ಟು ದೊಡ್ಡ ಅಂತರವಿದೆ! ಮನಸ್ಸಿಗೆ ಮನಸ್ಸು ಹೊಂದಿದರೆ ಸಾಲದು. ಆ ಮನಸ್ಸು ಸಮಾಜಕ್ಕೂ ಹೊಂದಬೇಕು. ಸಮಾಜವು ಅಭೇದ ಜ್ಞಾನದ ಅದ್ವೈತದ ಮೇಲೆ ನೆಲೆನಿಂತಿರುವುದಿಲ್ಲ. ಅದು ಬರೇ ಗುಲ್ಲಿನ ವೇದಾಂತ ಮಾತ್ರ. ಪ್ರಪಂಚದಲ್ಲಿ ಹೊಂದಿರುವುದು ತಾರತಮ್ಯ ಜ್ಞಾನ, ಅದೇ ನಿತ್ಯ ಜಗತ್ತಿನ ನಿಯಮ.

ಈ ನಾಲ್ಕು ವರ್ಷಗಳಿಂದಲೂ ಕೃಷ್ಣಸ್ವಾಮಿಯು ಕೇಶವಯ್ಯ-- ಅವರ ಮಗಳು ಶಾರದೆಯ ಬಳಿಕೆಗೊಂಡಿರುವನು. ಅವರದು ಬಡ ಸಾತ್ವಿಕ ಸಂಸಾರ. ಕೇಶವಯ್ಯನವರು ಜೀವನದಲ್ಲಿ ಬೇಸರ ಬಂದು ಪೇಟೆಗೆ ಶರಣುಹೊಡೆದು ಹಳ್ಳಿ ಸೇರಿದವರು. ಕೃಷ್ಣಸ್ವಾಮಿಯು ಆಗತಾನೇ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು ಸೇರಿದವನು. ಅಲ್ಲಿಯ ಸೆಂಟ್ರಲ್ ಕಾಲೇಜಿನಲ್ಲಿ ಅವನ ವ್ಯಾಸಂಗವು ಸಾಗುತಿದ್ದಿತು. ಆದರೆ ಪೇಟೆಯಿಂದ ರಜೆಯ ಸಮಯ ಹಳ್ಳಿ ಸೇರಿದಾಗ ಆ ಪ್ರಕ್ಷುಬ್ಧ ವಾತಾವರಣದಿಂದ ಪ್ರಕೃತಿಯ ಶಾಂತಿಯ ಮಡಿಲು ಸೇರಿದಾಗ ಅವನಿಗೆ ಶಾರದೆಯ ಸೌಮ್ಯ ಮೂರ್ತಿಯೊಂದೇ ಮೆಚ್ಚುಗೆಯಾಗುತಿದ್ದಿತು. ಗಂಟೆ ಗಂಟೆಗಳ ತನಕ ಅವರ

ಮನೆಯಲ್ಲಿ ಕುಳಿತು ಅವಳ ಬಾಲಿಶತ್ವದೊಡನೆ ಚೆಲ್ಲಾಟವಾಡುತ್ತಿದ್ದನು. ಆದರೆ ವರ್ಷ ವರ್ಷಗಳಲ್ಲಿ ಪರಿಸ್ಥಿತಿಯು ವ್ಯತ್ಯಸ್ತವಾಗಿದೆ. ಶಾರದೆಯಿಂದು ಹನ್ನೆರಡು ವರ್ಷಗಳ ಬಾಲಿಕೆಯಲ್ಲ. ಅವಳ ಮೃದುಮೈ ತುಂಬಿ ಹಿಡಿಯ ಲಾರದಷ್ಟು ಸೌಂದರ್ಯವು ಹೊರಸೂಸತೊಡಗಿದೆ. ಈಗ ಅವನು ಅವಳೊಡನೆ ಮೊದಲಿನಂತೆ ಚೆಲ್ಲಾಟವಾಡಲಾರನು. ಪ್ರಾಯವು ಅವರ ಮಧ್ಯೆ ಪರದೆಹಿಡಿದು ಚಾ[illegible]ಸುತ್ತಿದ್ದಿತು. ಕಣ್ಣು ಕೂಡಿದೊಡನೆಯೇ ರೆಪ್ಪೆ ಮಿಟುಕುತ್ತಿದ್ದಿತು. ಉಸಿರು ಭಾರವಾಗಿ ಹೊರಹೊಮ್ಮುತ್ತಿದ್ದಿತು. ನಗೆಯು ಅಳುಕಿ ಬಳುಕಿ ಮುಖತೋರಿ ಒಡನೆಯೇ ಮಾಯವಾಗುತ್ತಿದ್ದಿತು. ಒಡನೆಯೇ ವಿವೇಕವು ಆ ಸ್ಥಳವನ್ನು ಆಕ್ರಮಿಸಿ ಸೇದೆ ಬಿಡುತ್ತಿದ್ದಿತು. ಇದು ಅಂತರ್ಯದ ವಿಚಾರ. ಆದರೆ ಹೂವು ತುಂಬಿದ ಪರಿಮಳವನ್ನು ಗಾಳಿಯು ಹತ್ತು ದಿಕ್ಕಿಗೆ ಹಸರಿಸುವುದಿಲ್ಲವೆಂದವರಾರು?

ಶ್ರೀನಿವಾಸರಾಯರಿಗೆ ಈ ಹುಡುಗಾಟವು ಬೇಕಾಗಿದ್ದಿಲ್ಲ. ಅವರ ಮನೆತನದ ಗೌರವದ ಹೊರೆಯನ್ನು ಹೊತ್ತು ಹತ್ತುಕಾಲ ಬಾಳುವ ಮಗನು ಅದಕ್ಕನುರೂಪವಾಗಿಯೇ ಹೊನ್ನು ಹೊತ್ತು ಬರುವ ಭಾಗ್ಯಲಕ್ಷ್ಮಿಯ ಕೈಹಿಡಿಯಬೇಕು. ಅದರಿಂದಾಗಿ ಮಗನ ಮನಸ್ಸಿಗೆ ನೋವಾದೀತೆಂಬ ಯೋಚನೆಯ ಪ್ರಶ್ನೆಯೇ ಅಲ್ಲಿಲ್ಲ. ಕಾರಣ–ಅಂತಹ ನೋವನ್ನು ಅವರು ಅನುಭವಿಸಿದ್ದಿಲ್ಲ. ಆದುದರಿಂದ ಅದು ಅವರಿಗೆ ಅಗೋಚರ. ಹೀಗಾಗಿ ಆ ದಿನ ಅವರು ಮಗನಿಗೆ ತಿಳಿಸಿದ ಬುದ್ಧಿವಾದವು ಗಡುಸಾಗಿ ಅವನ ಮನಸ್ಸಿಗೆ ನಾಟಿರಬಹುದು. ಆದರೆ ಅದು ಅವರ ತಪ್ಪಲ್ಲ.

ತಪ್ಪು ಯಾರದೂ ಅಲ್ಲ. ಯಾವ ತಂದೆಯೂ ಮಗನಿಗೆ ವಿಷ ಕೊಟ್ಟಿಲ್ಲ. ಆದರೆ ಕೊಟ್ಟ ಹಾಲೇ ಅಸಂದರ್ಭವಾಗಿ ಅಜೀರ್ಣಗೊಂಡು ವಿಷವಾಗಿರಬಹುದು. ಆಗ ಅದನ್ನು ತಂದೆಯು ವಿಷವೆಂದು ತಿಳಿಯಲಾರದೆ ಹಾಲೆಂದೇ ಭಾವಿಸಿ ಹೆಗ್ಗಳಿಸಬಹುದು. ಆ ಪರಿಣಾಮವಾಗಿ ಜೀವನವು ವಿರಸವಾಗುವುದಿದೆಯಲ್ಲ—ಅದೇ ಪ್ರಣಯ ದುರಂತ!

ಕೃಷ್ಣಸ್ವಾಮಿಯ ಹೃದಯವು ಕ್ಷಣಕಾಲ ಆಕಾಂಕ್ಷೆಯೊಡನೆ ಸೆಣಸಿತು. ಈ ಮಾರ್ಗದಲ್ಲಿ ಮುಂದೆ ಹೋಗಲಾರೆನೆಂದು ಕಾಲ್ಕುದುರುವ

ಕುಂಟೆತ್ತಿನ ರೀತಿ ತಂದೆಯು ತೋರಿಸಿಕೊಟ್ಟ ಕುರುಮಾರ್ಗದಲ್ಲಿ ಕಾಲಿಡಲು ಒಲ್ಲದೆ ಅವನ ಹೃದಯವು ಬಂಡಾಯಹೂಡಲು ಬಯಸಿತು. ಆದರೆ ಎಲ್ಲಾ ಸಮಯದಲ್ಲಿ ಎಲ್ಲರೊಡನೆ ಬಂಡಾಯ ಹೂಡಲು ಬರುವಂತಿಲ್ಲ. ಒಂದು ಜೀವದ ಆಕರ್ಷಣೆಯು ಮತ್ತೊಂದು ಜೀವವನ್ನು ಸ್ವಕೀಯವಾಗಿ ಬಿಗಿದಿರುವತನಕ ಅದು ಸಾಧ್ಯ ಬರುವುದಿಲ್ಲ. ಶ್ರೀನಿವಾಸರಾಯರು ಯಾರ ಯಾರ ಮಾತಿಗಾಗಿ ಮನ್ನಣೆಗಾಗಿ ತನ್ನ ಮಾತನ್ನು ಹಿಂದೆಗೆದವರಲ್ಲ. ಅದೇ ಅವರ ಸ್ವಯಂವ್ಯಕ್ತಿತ್ವ. ಆ ವ್ಯಕ್ತಿತ್ವದ ಮುಂದೆ ಮಗನೇನು? ಯಾರಾದರೂ ತಲೆ ಬಾಗಲೇ ಬೇಕು. ಅಂತೆಯೇ ಕೃಷ್ಣಸ್ವಾಮಿಯು ಈ ಸಂದರ್ಭವೇನೂ ನೆಟ್ಟಗಿಲ್ಲವೆಂದು ಬಹಳ ಹೊತ್ತಿನ ತನಕ ಮಾಳಿಗೆಯಲ್ಲಿ ತನ್ನ ಕೋಣೆಯಲ್ಲೇ ಏಕಾಂತ ವಾಸದ ಸುಖವನ್ನು ಅನುಭವಿಸಿದನು. ಆ ಏಕಾಂತವಾಸದಲ್ಲಿ ಅವನು ತನ್ನ ವಿವೇಕದೊಡನೆಯೇ ವಾದ ಹೂಡಿದನು. ಅದರಿಂದಾಗಿ ಯಾವ ನಿರ್ಧಾರವೂ ಆಗದಿದ್ದಾಗ ಮಹಡಿಯಿಳಿದು ಅಡ್ಡಾಡಲು ಹೊರ ಹೊರಟನು.

ಸಂಜೆಗಾಳಿ ಒಯ್ಯನೊಯ್ಯನೆ ಬೀಸಿ ಬದುಕಿನ ಬೆಲೆಯನ್ನು ಕ್ಷಣಿಕ ಪ್ರಪಂಚಕ್ಕೆ ತೋರಿಸಿಕೊಡುತಿದ್ದಿತು. ಕೃಷ್ಣಸ್ವಾಮಿಯು ಮುಂದಿನ ಎರಡು ಹೊಲದಾಟಿ ಮೇಲಿನ ಮಾವಿನತೋಪಿನ ಕಡೆ ನಡೆದು ಕೆಳಗಣ ಕಾಲುವೆಯತ್ತ ಸಾಗಿದ್ದನು. ಬಿಸಿಯೇರಿದ ಅವನ ತಲೆಗೆ ಕೊಂಚ ತಂಪು ತಾಗಬೇಕಾಗಿದ್ದಿತು. ಆ ತಂಗಾಳಿಯಲ್ಲಿ ಮಾವಿನ ತೋಪಿನ ತಣ್ಣೆಳಲಲ್ಲಿ ಅವನ ಭಾವನೆಯು ಈ ನಿರ್ಧಾರಕ್ಕೆ ಬಂದಿತು—ನಾಳೆಯೇ ಬೆಂಗಳೂರಿಗೆ ಹೊರಟು ಹೋಗಬೇಕು. ನವರಾತ್ರಿಯ ರಜೆಯು ತೀರಲು ಇನ್ನೂ ಕೆಲವು ದಿನಗಳು ಉಳಿದಿವೆ. ಆದರೂ ಮೇಲಿನ ಮಹಾಪರೀಕ್ಷೆಯ ಸಲುವಾಗಿ ಬೇಗನೇ ಹೋಗಬೇಕಾಗಿದೆ ಎಂದು ತಂದೆಯನ್ನು ಒಪ್ಪಿಸುವುದೇನೂ ಪ್ರಯಾಸಕ್ಕೆ ಬರಲಾರದು. ಇಲ್ಲಿಯ ವಾತಾವರಣದ ಜಂಜಡದಿಂದ ಪಾರಾಗದೆ ಹೋದರೆ ತೊಂದರೆಯಿದೆ. ಆದುದರಿಂದ ನಾಳೆಯೇ ಹೊರಟು ಹೋಗುವುದು ಕ್ಷೇಮ.

ಈ ನಿರ್ಧಾರಕ್ಕೆ ಬಂದು ಅಲ್ಲೇ ಪೊದರಿನೆಡೆಯಲ್ಲಿ ತುಸು ಕುಳಿತಿರಬೇಕೆಂದು ಹವಣಿಸಿ ಹಿಂದಿರುಗಿ ನೋಡಿದಾಗ ಶಾರದೆಯು ಒಯ್ಯನೊಯ್ಯನೆ

ಬರುತಿದ್ದಳು. ಅವಳಿಗೆ ಕೃಷ್ಣಸ್ವಾಮಿಯ ಠಾವು ಗೋಚರವಾಗದೆ ಹೋದುದರಿಂದ ಅಂತೆಯೇ ಆ ಕಡೆ ಹಾದಿ ಹಿಡಿದು ಮುಂದೆ ಸಾಗುವುದರಲ್ಲಿದ್ದಳು.

ಕೃಷ್ಣಸ್ವಾಮಿಯು ಮೆಲ್ಲ ಮೆಲ್ಲನೆ ಹಾಡಿದನು.

—ಪಟ್ಟೆದುಗುಲವನುಟ್ಟು ಬೊಮ್ಮನ
ಪಟ್ಟದರಸಿಯು ಬಂದಳು
ಸತ್ಯಲೋಕದ ರಸಾಲೋಕದ
ಹೊಸತು ಸಿರಿಯನು ತಂದಳು
ಸೃಷ್ಟಿಕರ್ತನ ಮೊತ್ತಮೊದಲಿನ
ಕೃತಿಗೆ ಭಾವವನೆರೆದಳು—
ಕತ್ತಲೆಯ ಕಿರುಗೋಣೆಯನು ಬೆಳ್
ಬೆಳಗಿ ಬಾಗಿಲತೆರೆದಳು
ಓ ಬಂದಳೋ—ಅದೊ ಬಂದಳು—

ಶಾರದೆಯು ಒಮ್ಮೆ ಗಾಬರಿಯಿಂದ ಸುತ್ತಲೂ ನೋಡಿ ಮತ್ತೆ ಅವನನ್ನು ಕಂಡು ನಾಚುಗೆಯಿಂದ ಸೆರಗು ಸೆಳೆದುಕೊಳ್ಳುತ್ತ ಓ ನೀವೋ! ನಾನು ನೋಡಲೇಯಿಲ್ಲ—ಎಂದಳು.

ಏನು ಲಗು ಆ ಕಡೆ ಹೋಗುತ್ತಾಯಿದ್ದಿ?

ಏನಿಲ್ಲ—ಕಾಂತಣ್ಣನ ಮನೆ ಕಡೆ ಹೊರಟಿದ್ದೆ.

ಏನು ಸಮಾಚಾರ?

ನಮ್ಮ ಶಾರದಾಪೂಜೆ ಬಂದಿತಲ್ಲ, ಅದಕ್ಕೆ ಕೃಷ್ಣವೇಣಿ ಕೂಡೆ ಮಾತಾಡಿ—ಅವಳಿಗೆ ಎರಡು ಹಾಡು ಹೇಳಿಕೊಟ್ಟಿದ್ದೆ—ಅದನ್ನು ಒಮ್ಮೆ ಹೇಳಿಸಿ ಬರೋಣಾಂತ ಹೊರಟಿದ್ದೆ. ನೀವು—

ಕೃಷ್ಣಸ್ವಾಮಿಯು ಸುಮ್ಮನೆ ಮುಖ ನೋಡಿ ನಕ್ಕನು.

ನೀವು ಹಾಸ್ಯ ಮಾಡುತ್ತೀರಲ್ಲ?

ಏನಿಲ್ಲ; ಶಾರದಾಪೂಜೆ ಎಂದಾಗ ನಗು ಬಂತಷ್ಟೆ!

ನಿಮಗೇನು ಹೇಳಿ! ಹೋಗಲಿ ಬಿಡಿ. ನೀವು ಮತ್ತೆ ನಮ್ಮ ಕಡೆ ಬರಲೇಯಿಲ್ಲ. ನಮ್ಮ ಪೂಜೆಯ ಯೋಚನೆಯೇ ನಿಮಗಿಲ್ಲಾಂತ ಎಣಿಸುತ್ತದೆ. ಮತ್ತೆ ನಾನೇನು ಮಾಡಲಿ—ಎಂದು ಕೊರಳು ಕೊಂಕಿಸಿದಳು.

ಕೃಷ್ಣಸ್ವಾಮಿ ಸನ್ನೆಯಿಂದ ಅವಳನ್ನು ಈ ಕಡೆ ಕರೆದು ಪಕ್ಕದಲ್ಲಿ ಕುಳ್ಳಿರಿಸಿಕೊಂಡನು. ಆ ಬಂಡೆಯ ಮೇಲೆ ಕುಳಿತಾಗ ಕೆಳಗಡೆಯ ಕಾಲುವೆಯ ದೃಶ್ಯವು ಮನೋಹರವಾಗಿ ಕಾಣುತಿದ್ದಿತು. ಅದೂ ಸಂಜೆಯ ಹೊತ್ತು; ಸೂರ್ಯನ ಕೆಂಪು ಕಿರಣಗಳು ತೆರೆ ತೆರೆಗಳಲ್ಲಿ ಓಕುಳಿ ಚೆಲ್ಲಿ ಓಲಾಡುತಿದ್ದುವು. ಪೊದೆ ಪೊದರುಗಳಲ್ಲಿ ಗೂಡಸೇರಲೆಳಸುವ ಹಕ್ಕಿಗಳ ಚಿಲಿಪಿಲಿ ಶಬ್ದ—ಆ ವಾತಾವರಣದಲ್ಲಿ ಹೊಸ ಚೈತನ್ಯವನ್ನು ತುಂಬಿತೂರಿದ್ದಿತು.

ಸೊಗಸೇನು? ಪ್ರಪಂಚವು ಸೊಗಸಾಗಿದ್ದರೆ ಸಾಲದು. ಅದನ್ನು ಕಾಣುವ ದೃಷ್ಟಿಯೂ ಸೊಗಸಾಗಿರಬೇಕು. ಬಿಂಬಿಸುವ ಮನಸ್ಸೂ ಹಸನಾಗಿರಬೇಕು—ಎಂದರೇನೇ ಅದು ಹೃದಯವನ್ನು ತುಂಬೀತು. ತುಂಬುನಗೆ ತುಂಬುಬಗೆ—ತುಂಬು ಜೀವನದ ರಸಿಕತೆಯು ಮನಸ್ಸಿನತ್ತ ಪರಿಪಕ್ವವಾದರೇನೇ ಎಲ್ಲವೂ ಸೊಗಸು. ಅಮೃತವಾದರೆ ಸಾಲದು, ಅದನ್ನು ಹಿತವಾಗಿ ಮಿತವಾಗಿ ಕುಡಿಯುವ ಬಾಯಿರುಚಿ ಬೇಕಲ್ಲ—ಅದೇ ಬಾಳಿನ ಸಮರಸದ ಸುಸಂಸ್ಕಾರ!

—ಹೊಸತೆಂದರೇನುಂಟು ಹೊಸತು ಜೀವನವಲ್ಲ
ಹೊಸತಲ್ಲ ತಿರೆನೀರು ಗಾಳಿ ಬೆಳಕು
ಹೊಸತು ಭಾವನೆಯೊಂದೆ ಬದುಕಿನಮೃತವನರಿವ
ಸೊಗಸು ಬಾಯ್‌ರುಚಿಯು ಸವಿತನದ ಮೆಲುಕು!

ನಾನೇನು ಹಾಸ್ಯವಾಡಿರುವೆನು? ನೀನೇ ಸಾಕ್ಷಾತ್ ಶಾರದೆ! ಮತ್ತೆ ಪೂಜೆ ಎಂದರೇನು ಎಂತಲೇ ನಗು ಬಂದಿತು—ಎಂದನು ಕೃಷ್ಣಸ್ವಾಮಿ.

ಹಾಗಾದರೆ ಬಿಡಿ. ನಾನು ಹೋಗುತ್ತೇನೆ—

ಇಲ್ಲ. ಹೋಗಲಿ ಬಿಡು.

ಮತ್ತೆ ಹೋದ ವರ್ಷದಲ್ಲಿ ನೀವು ತುಂಬಾ ನೆರವಾಗಿದ್ದಿರಿ—ಎಂತಲೇ ನಮ್ಮ ಪೂಜೆ ಶಾನೆ ಸೊಗಸಾಗಿ ನಡೆದಿದ್ದಿತು. ಈ ತಡವೆ ಅಪ್ಪನಂತೂ ಎಲ್ಲಾ ಭಾರ ನನ್ನ ಮೇಲೇನೇ ಹೊಂದಿಸಿ ಬಿಟ್ಟಿದ್ದಾರೆ. ನಾನೇನು ಮಾಡಲಿ? ನೀವು ಒಂದೇ ಒಂದು ಹೊಸ ಹಾಡು—ರಾಗ ಹೇಳಿ ಕೊಟ್ಟಿಲ್ಲ. ಮತ್ತೆ ಹಳೆಯದನ್ನೇ ಹಾಡಿದ್ದೇ ಹಾಡೊ ಕಿಸುಬಾಯಿ ದಾಸನ ಹಾಗೆ ಹೇಳಬೇಕು ನಾನು! ನನ್ನಿಂದಾಗದು. ವರ್ಷಕ್ಕೊಂದೆರಡು ಬಾರಿ ರಜೆಗೆ ಬಂದಾಗಲೂ ನೀವು ನಮಗೆಲ್ಲ ನೆರವಾಗದೆ ಹೋದರೆ ಮತ್ತೇನು ಮಾಡಲಿ? ---ಎಂದು ಶಾರದೆ ಸೆರಗಿನ ತುದಿ ಸುತ್ತ ತೊಡಗಿದಳು.

ಕೃಷ್ಣಸ್ವಾಮಿ ಕ್ಷಣಕಾಲ ಸುಮ್ಮನೆ ಆಕೆಯ ಮುಖವನ್ನೇ ನೋಡುತ್ತ ಕುಳಿತನು. ಅವನ ಹೃದಯದಲ್ಲಿ ಸಾವಿರ ಚೇಳು ಚುಚ್ಚಿದ ಅನಂತ ಯಾತನೆಯು ಅನುಭವವಾಗುತಿದ್ದಿತು. ಈ ಸಂದರ್ಭದಲ್ಲಿ ಅವನ ನೆರವನ್ನು ಹಾರೈಸಿದ ಜೀವದೊಡನೆ ಅವನು ಹೇಗೆ ತಾನೇ ನಾಳೇನೇ ಬೆಂಗಳೂರಿಗೆ ಹೋಗಲಿರುವೆನೆಂದು ಹೇಳಲು ಸಾಧ್ಯ? ಆ ಪೀಡೆ ಅವನ ಮನಸ್ಸಿಗೇ ಗೋಚರ. ಅದನ್ನು ಹೊರ ತೋರಿಸಬಾರದೆಂದು ಸಾಹಸಪಟ್ಟರೂ ಅದು ಸಿದ್ಧಿಸದಂತಿದ್ದಿತು. ಆ ಪ್ರೀತಿಯ ಸಖಿಯೊಡನೆ ಸುಳ್ಳು ಹೇಳಿ ವಂಚಿಸಲೂ ಅವನು ನಾಚಿದನು. ಆದುದರಿಂದಲೇ ತುಸು ಹೊತ್ತು ತಡೆದು ಮತ್ತೆ ಮೆಲ್ಲನೆ ಹೇಳಿದನು–ಇಲ್ಲ ಶಾರದಾ! ನೀನು ನನ್ನನ್ನು ಕ್ಷಮಿಸಬೇಕು.

ಏಕೆ? ಏನಾಯಿತು?

ಏನಿಲ್ಲ. ನಾನು ನಾಳೇನೇ ಪೇಟೆಗೆ ಹೋಗಬೇಕಾಗಿದೆ.

ಶಾರದೆಯು ಒಮ್ಮೆಗೇ ಕುಕ್ಕರಿಸಿ ಬಿದ್ದವಳಂತೆ ಗಾಬರಿಯಿಂದ—ಅದೇನು? ಮತ್ತೇಕೆ ಈ ಪೂಜೆ? ನೀವು--ನೀವು—ಎಂದು ಮಾತು ಕಟ್ಟಿ ಮತ್ತೆ ಅಧೋಮುಖಿಯಾಗಿ ಸುಮ್ಮನೆ ಕುಳಿತುಬಿಟ್ಟಳು. ವಿಳಂಬವಾಗಿ ಮತ್ತೆ—ನಿಮಗೆ ಪೇಟೆಯೇ ಮೆಚ್ಚು!

ಕೃಷ್ಣಸ್ವಾಮಿಯು ಉದ್ವಿಗ್ನನಾಗಿ ಎಚ್ಚರತಪ್ಪಿ ಅವಳ ಕೈಹಿಡಿದು--ಹಾಗಲ್ಲ ಶಾರೀ! ಹಾಗೆ ಹೇಳಬೇಡ—ಎಂದನು.

ಶಾರದೆಯು ಮೆಲ್ಲನೆ ಕೈಯನ್ನು ಹಿಂದಕ್ಕೆ ಸರಿಸಿಕೊಳ್ಳುತ್ತ--ಮತ್ತೆ ಹೇಗೆ? ನೀವು ಏನನ್ನೋ ಅಡಗಿಸಿಡುತ್ತೀರಿ. ನಿಮಗೆ ಶಾಲೆ ತೊಡಗಲಿಕ್ಕೆ

ಇನ್ನೂ ದಿವಸವಿದೆ. ಮತ್ತೆ ನೀವು ಸುಮ್ಮನಾದರೂ ಈ ಕಡೆಯಿಂದ ತಪ್ಪಿಸಿಕೊಂಡು ಓಡಿ ಹೋಗುತಿದ್ದೀರಿ—ಎಂದಳು.

ಅದರೊಂದಿಗೆ ಕೃಷ್ಣಸ್ವಾಮಿಯ ಮನಸ್ಸುಹೇಳತೊಡಗಿತು—ಅಹುದು. ನೀನು ತಪ್ಪಿಸಿಕೊಂಡು ಓಡಿಹೋಗುತಿದ್ದಿ. ನೀನು ಹೇಡಿ—ಅಂಜು ಬುರುಕ!—

ಅವನು ಗಲಿಬಿಲಿಯಿಂದ ಗಳಿಗೆ ಹೊತ್ತು ಮುಖ ಮುಚ್ಚಿಕೊಂಡು ಕುಳಿತಿದ್ದು ಮತ್ತೆ ಒಮ್ಮೆ ಸುತ್ತಲೂ ನೋಡಿ ಉಸಿರುಬಿಟ್ಟನು.

ಶಾರದೆ ಸ್ವಲ್ಪ ಹತ್ತಿರ ಸರಿದು ಬಂದು ಹೆಗಲ ಮೇಲೆ ಕೈಯಿಟ್ಟು ಕೇಳಿದಳು—ಏನು ನನ್ನ ಕೂಡೆ ಹೇಳಬಾರದೆ? ಯಜಮಾನರು ಏನಾದರೂ ಕೋಪಗೊಂಡರೇ?

ಆ ಮಾತಿನಲ್ಲಿ ಅಷ್ಟು ಸಮಾಧಾನವಿದ್ದಿತು. ಅಂತಹ ಹೆಂಗುಸಿನ ಮಧುರವಾದ ಮಮತೆಯ ಮುಂದೆ ಕೃಷ್ಣಸ್ವಾಮಿಯು ಚಿಕ್ಕ ಕೂಸಾಗಿ ಕಂಡುಹೋದನು. ಅವನು ಅವಳ ಕೈಯನ್ನು ತನ್ನ ಎದೆಯ ಮೇಲಿಟ್ಟು ಕೊಂಡು ಮೆಲ್ಲನೆ ಹೇಳಿದನು—ಮಕ್ಕಳಿಗೆ ತಾಯಿಯಿಲ್ಲದಿರುವುದು ಒಂದು ದೊಡ್ಡ ಶಾಪ!

ಈ ಮಾತಿನೊಂದಿಗೆ ಅವನ ಕೊರಳು ಬಿಗಿದು ಬಂದಿತು. ಹೃದಯದಲ್ಲಿ ಹುದುಗಿದ್ದ ವೇದನೆ ಹರಿದು ಹೊರಸೂಸಿದಂತಾಯಿತು. ಎದೆಯ ಮೇಲಣ ಶಾರದೆಯ ಕೈಯು ಕಣ್ಣೀರಿನಿಂದ ತೋಯ್ದು ಹೋಯಿತು. ಅದರೊಂದಿಗೆ ಅವನ ಭುಜದ ಮೇಲೆ ಮೊಗವಿರಿಸಿ ಶಾರದೆಯೂ ಕಣ್ಣೀರು ಸುರಿಸತೊಡಗಿದಳು. ಇಬ್ಬರೂ ಆಗ ತಾನೇ ತಾಯಿಯು ತೀರಿಹೋದ ತಬ್ಬಲಿಗಳಂತೆ ನೆಲೆಗಾಣದೆ ಅಳತೊಡಗಿದರು. ಆ ಅಳುವಿನಲ್ಲಿ ಕೊಚ್ಚಿ ಹೋಗದ ರೀತಿ ಇಬ್ಬರೂ ಒಬ್ಬರನ್ನೊಬ್ಬರು ಹಿಡಿದುಕೊಂಡಂತಿದ್ದರು.

ಸ್ವಲ್ಪ ಹೊತ್ತಿನ ಮೇಲೆ ಕೃಷ್ಣಸ್ವಾಮಿಯು ಕೊಂಚ ಸುಧಾರಿಸಿಕೊಂಡು—ಅಳಬೇಡ ಶಾರೀ—ಎಂದು ಅವಳ ಮುಖವೆತ್ತಿ ಟವೆಲಿನಿಂದ ಕಣ್ಣೀರೊರಸಿದನು.

ಶಾರದೆಯು ಎಂಜಲು ನುಂಗಿ—ನಾವು ತಬ್ಬಲಿಗಳು. ನಮ್ಮ ಅಳು ಯಾರು ಕೇಳುತ್ತಾರೆ?---

ಹೋಗಲಿ ಬಿಡು. ದೇವರಿದ್ದಾನೆ. ನಾವೇನೂ ನಾಸ್ತಿಕರಲ್ಲ. ನಾವು ದೇವರನ್ನು ನಂಬಿದ್ದೇವೆ. ಎಂದರೆ ದೇವರೂ ನಮ್ಮನ್ನು ನಂಬಿಸಿಯಾನು—ಎಂದು ಭರವಸೆಯಿಂದ ಕೃಷ್ಣಸ್ವಾಮಿಯು ನುಡಿದನು.

ಶಾರದೆಯು ಮೌನವಾಗಿದ್ದಳು.

ಶಾರದಾ

ಹುಁ

ನಾನು ನಾಳೆಯೇ ಹೋಗಬೇಕಾಗಿದೆ.

ಹಾಗೆ ಹೇಳಿದರೆ ಸಾಲದು. ಏಕೆ ಎಂತ ತಿಳಿಸಬೇಕು.

ನನ್ನ ಮುಂದಿನ ಬಿ. ಎ. ಪರೀಕ್ಷೆಗೆ ನಾನು ಈಗಲೇ ಸನ್ನಾಹ ಮಾಡುವುದು ಬೇಡವೆ?

ಅದು ತೀರಾ ಸುಳ್ಳು. ಅದನ್ನು ನಾನು ಒಪ್ಪಲಾರೆ. ಅಂತಹ ಸನ್ನಾಹಕ್ಕೇನು ಯುದ್ಧ ಹೂಡಬೇಕಾಗಿದೆಯೇ?

ಹೌದು.

ಯಾರೊಡನೆ?

ನನ್ನೊಡನೆಯೇ.

ನನಗೂ ಅದನ್ನೇ ತಿಳಿಯಬೇಕಾಗಿದೆ!

ಶಾರೀ

ಹುಁ

ಈ ಊರಿಗೆ ಪಿಕೆಟಿಂಗಿಗೆ ಸ್ವಯಂಸೇವಕರು ಬಂದಿದ್ದಾರೆ ಗೊತ್ತೆ?

ಕೇಳಿದ್ದೇನೆ

ನಮ್ಮ ಯಜಮಾನರಿಂದಾಗಿ ಅವರ ಮೇಲೆ ಅತ್ಯಾಚಾರವಾಗಲಿದೆ. ಅದನ್ನು ನಾನು ಕಣ್ಣಾರೆ ಕಾಣಲು ಬಯಸುವುದಿಲ್ಲ.

ಇದಾದರೆ ಸ್ವಲ್ಪ ಸ್ವಲ್ಪ ಸತ್ಯ. ಮತ್ತೆ?

ಅಲ್ಲದೆ ಇವರಲ್ಲಿ ನಿನ್ನ ತಂದೆಯವರದೂ ಕೈವಾಡವಿದೆಯೋ ಎಂದು ಯಜಮಾನರು ಹಿಡಿದುಕೊಂಡಿದ್ದಾರೆ. ನಾನು ಖಂಡಿತವಾಗಿ ಇಲ್ಲವೆಂದೆ! ಅವಕ್ಕನವರು ಬೇರೆಯೇ ಅರ್ಥ ಕಟ್ಟಿಕೊಂಡರು. ನನಗೂ ನಿನ್ನ ತಂದೆಗೂ ಬಹಳ ಬಳಕೆಯೆಂದು ಅಪಾರ್ಥ ಮಾಡಿಕೊಂಡರು! ಮತ್ತೆ—

ಸಾಕು ಬಿಡಿರಿ. ಎಲ್ಲಾ ತಿಳಿಯಿತು. ಸಹಜ ಅವರು ಹೇಳುವುದು ನ್ಯಾಯ. ನಮಗೂ ನಿಮಗೂ ಮಧ್ಯೆ ದೊಡ್ಡ ಬೆಟ್ಟವಿದೆ.

ಶಾರದಾ— ನೋಡು, ನನ್ನ ಮೇಲೆ ಈ ತಪ್ಪನ್ನು ಹೊರಿಸಬೇಡ. ಯಾವ ಬೆಟ್ಟವನ್ನಾದರೂ ನಾನು ದಾಟಿ ನಿನ್ನ ಬಳಿ ಬರಬಲ್ಲೆ!

ಬೇಡ ನನ್ನ ರಾಜ! ಅದು ನಿಮಗೆ ಹಿತವಲ್ಲ. ನಮ್ಮ ಪಾಡು ನಮಗೆ. ನೀವೇಕೆ ಇದಕ್ಕಿಷ್ಟು ಕನಿಕರ ಪಡಬೇಕು? ನಾವು ಗತಿಗೋತ್ರ ವಿಲ್ಲದ ಬಡವರು.

ಕೃಷ್ಣಸ್ವಾಮಿಯು ಅವಳ ಬಾಯನ್ನು ಕೈಯಿಂದ ಬಿಗಿ ಹಿಡಿದು— ಸಾಕು, ಆ ಮಾತು ಬೇಡ. ನನಗೂ ಆ ಬಡತನವೇ ಬೇಕಾಗಿದೆ. ಬಡವರಿಗೂ ಬಡವನಾಗಿ ನಾನು ನಿನ್ನ ಬಳಿ ಬರುವ ಕಾಲವಿದೆ. ಆಗ ನೀನು ಈ ಮಾತನ್ನು ಹೇಳಲಾರೆಯಲ್ಲ?

ನನ್ನ ದೇವರಿಗೆ ನಾನೇನನ್ನು ಹೇಳಲಿ? ಆಗ ನನ್ನ ಜನ್ಮವೇ ಸಾರ್ಥಕ ವಾಯಿತೆಂದು ನನ್ನನ್ನೇ ನಾನು ದೇವರಿಗೆ ಒಪ್ಪಿಸಿಕೊಂಡೇನು.

ಶಾರೀ

ಹೂ

ಹಾಗಾದರೆ ನಾನು ನಾಳೆ ಹೋಗಲೆ?

ನನ್ನ ಶಾರದಾಪೂಜೆ?

ಅದು ನಿನ್ನ ಶಾರದಾ ಪೂಜೆ. ನನ್ನ ಶಾರದಾ ಪೂಜೆಯ ಕಾಲ ಇನ್ನೂ ಮುಂದಿದೆ. ಆಗ ನಾನು ಬಂದೇ ಬರುವೆನು.

ನೆನಪಾದರೆ

ನೆನಪು? ಮರೆತರಲ್ಲವೆ ನೆನಪಾಗುವುದು? ಶಾರೀ—ನೀನೇ ಕೇಳು. ನನ್ನ ಮನಸ್ಸಿನೊಡನೆ ಕೇಳು. ನಾನು ಮೆಚ್ಚಿದ ಹೂವಿನೊಡನೆ ಕೇಳು. ರಾತ್ರಿ ರಾತ್ರಿಯ ಚಂದ್ರನೊಡನೆ ಕೇಳು. ಆಕಡೆಯ ಗಾಳಿಯೊಡನೆ ಕೇಳು. ನೀನು ಕೂಗಿದಾಗ ನಾನು ಬಂದೇ ಬರುವೆನು! ನನ್ನನ್ನು ನೀನು ದೇವರೆಂದಿಯಲ್ಲ?

ಅಹುದು.

ದೇವರು ಭಕ್ತ ಪರಾಧೀನ.

ಸಹಜ. ಹಾಗಾದರೆ ನಾನು ತಪಸ್ಸಿಗಾಗಿ ಹಿಮಾಲಯಕ್ಕೆ ಹೋಗಬೇಕೋ ಏನೋ!

ಏಕೆ? ಇಲ್ಲಿ ಪ್ರತ್ಯಕ್ಷವಾಗದಿದ್ದರೆ ತಾನೆ ಅಲ್ಲಿಗೆ ಹೋಗುವುದು?—ಎಂದು ಅವಳ ಗಲ್ಲಹಿಡಿದು ಹೇಳಿದನು.

ಸಂಜೆ ಕಳೆಯುತ್ತ ಕತ್ತಲಾಗುತ್ತ ಬಂದಿದ್ದಿತು. ಹಕ್ಕಿಗಳೆಲ್ಲ ಗೂಡು ಸೇರಿದ್ದುವು. ಆ ಕತ್ತಲಲ್ಲಿ ಶಾರದೆಯು ಕೃಷ್ಣಸ್ವಾಮಿಯ ಹೆಗಲಮೇಲೆ ಭಾರವಾನಿಸಿ ಮನೆಸೇರುವ ಮುಂಚೆ ಬೀಳ್ಕೊಡುತ್ತ ಹೇಳಿದಳು—

ಹಾಗಾದರೆ ಹಿಮಾಲಯಕ್ಕೆ ಹೋಗೋದಿಲ್ಲ!

ಬೇಡ. ಹಿಮಾಲಯವೇ ನಿನ್ನಬಳಿ ಬರಲಿದೆ—ಎಂದು ಅವನು ಅವಳ ಕೆನ್ನೆ ಹಿಸುಕಿ ನಗುತ್ತ ಹಕ್ಕಿಗೂ ಹಗುರವಾಗಿ ಮನೆ ಸೇರಿದನು.

ಕೃಷ್ಣಸ್ವಾಮಿಯು ಮರುದಿನವೇ ಬೆಂಗಳೂರಿಗೆ ಹೊರಟು ಹೋದನು. ಅವನ ಕ್ರೋಪಿನಕೊನೆ ಕಾಣುವ ತನಕವೂ ಶಾರದೆಯು ಮೌನವಾಗಿ ಆಕಡೆ ನೋಡುತಿದ್ದು ಮತ್ತೆ ಮನೆಸೇರಿ ತನ್ನಷ್ಟಕ್ಕೆ ತಾನೇ ಗುಣುಗುಟ್ಟಿದಳು—

ಕಣ್ಣುತುಂಬಿದರೀತಿ ಮನಸುತುಂಬಿಹುದಿಲ್ಲ
ಮನಸು ಮೌನವೆಮೌನ ನಿತ್ಯಮೌನ!
ನೆನಸಿನಲಿ ನಲಿದಾಡಿ ಕನಸಿನಲಿಕೊಂಡಾಡಿ
ಕಾಣುವಾದಿನವುಂಟೆ? ಎನ್ನ ರಮಣ!

ಕೊಸರು ೩ — ಜಗವು ಸಾಗಿದೆ!

ಶಾರದಮ್ಮ!—ಕೃಷ್ಣಸ್ವಾಮಿ ಅದೇನು ಪೂಜೆಗೆ ನಿಲ್ಲದೆ ಬೇಗನೆ ಹೊರಟುಹೋಗಿಬಿಟ್ಟ?—ಎಂದು ಕೇಶವಯ್ಯನವರು ಮಗಳೊಡನೆ ಕೇಳಿದರು.

ಏನೋ ನನಗೆ ತಿಳಿಯದಪ್ಪ—ಎಂದು ಅವಳು ಗೋಡೆಯಕಡೆ ನೋಡುತ್ತ ಹೇಳಿದಳು.

ನೀನು ನಮ್ಮ ಶಾಲೆಯ ಬಗ್ಗೆ ಆಮಂತ್ರಣ ಕೊಡಲಿಲ್ಲವೆ?

ಹೇಳಿದೆ. ಆದರೆ ಅವರಿಗೆ ಮೇಲಿನ ಪರೀಕ್ಷೆಗೆ ತಯಾರುಮಾಡಲಿದೆಯಂತೆ.

ಹೋ ಸರಿ. ಮೊನ್ನೆ ಮೊನ್ನೆ ಇಷ್ಟು ಚಿಕ್ಕವನಿದ್ದ. ಇನ್ನೇನು ಬಿ. ಎ. ಮುಗಿಸುವ ಸಮಯ ಬಂದುಹೋಯಿತು. ಚಲೋಹುಡುಗನಪ್ಪ—ಚಲೋ ಹುಡುಗ!—ಎಂದು ತಲೆದೂಗಿದರು.

ಕೇಶವಯ್ಯನರ ಸ್ವಭಾವವೆಂದರೆ ಅದೊಂದು ದೊಡ್ಡ ಸಮುದ್ರದ ಹಾಗೆ. ಅದರಲ್ಲಿ ಏನು ಕಸ ಬಿದ್ದರೂ ಅದು ಒಡನೆಯೇ ದಡಸೇರಿ ಗಂಭೀರವಾಗಿರುತಿದ್ದಿತು. ಪಾಪ! ಅವರ ಅಂತಹ ಮನಸ್ಸಿಗೆ ಸರಿಯಾಗಿ ಕೈಯೂ ತೆರಪಿದ್ದಿದ್ದರೆ ಆರೀತಿಯೇ ಬೇರೆಯಿದ್ದಿತು. ಅವರದೇನು ಪುಟ್ಟ ಸಂಸಾರ. ಆದರೆ ಪ್ರಪಂಚವೇ ಅವರ ಸಂಸಾರ!

ಮೈಸೂರು ರಾಜ್ಯದ ಅಂಚೆ ಇಲಾಖೆಯಲ್ಲಿ ಅವರ ಉದ್ಯೋಗ ವಿದ್ದಿತು. ವೇತನದ ರೂಪಾಯಿ ಅರುವತ್ತು. ಇರುವ ಸ್ವಂತ ಮನೆಯ ಹೊರತು ಮತ್ತೇನೂ ವರಮಾನವಿದ್ದಿಲ್ಲ. ಆದರೆ ಅದರಿಂದಲೇ ತೃಪ್ತರಾಗಿ ಕಾಲಕಳೆಯುತಿದ್ದರು. ಜೀವನಕ್ಕೇನು, ತೃಪ್ತಿಯೊಂದಿದ್ದರೆ ಅದು ಅಮರ ವಾಗುವುದು. ಆದುದರಿಂದಲೇ ಬಡತನವು ಅವರನ್ನು ಕಾಡಲಿಲ್ಲ. ಅಥವಾ ಕಾಡಿದ ಬಡತನವನ್ನು ಬಡತನವೆಂದು ಅವರು ದೈನ್ಯದೃಷ್ಟಿಯಿಂದ ತಿಳಿ ಯಲಿಲ್ಲ. ಅವರ ಮನಸ್ಸು ಉನ್ನತ—ಆದರ್ಶವೂ ಉನ್ನತ - ಹಾಗೆಂದೇ ಜೀವನವೂ ಉನ್ನತವಾಗಿಯೇ ಸಾಗಿದ್ದಿತು. ಗಿರಿಶಿಖರದ ನಿರ್ಝರದಂತೆ ಅದು ಸದಾ ನಿರ್ಮಲವಾಗಿದ್ದಿತು.

ಆದರೆ ದುರ್ದೈವವು ಯಾರ ಬೆನ್ನು ಬಿಟ್ಟಿದೆ? ಅವರ ಹದಿನಾರು ವರ್ಷದ ಮಗ ಮೆಟ್ರಿಕ್ ಓದುತಿದ್ದ ವೇಳೆ ಸಿಡುಬಿಗೆ ಸಿಕ್ಕಿ ತೀರಿಹೋದನು. ಆ ದುಃಖದಿಂದಲೇ ಅವರ ಹೆಂಡತಿ ಜಾನಕಿಯಮ್ಮ ಸೊರಗಿ ಸೊರಗಿಯೆ ಸತ್ತರು. ಆಗ ಶಾರದೆಗೆ ಬರೇ ಏಳು ವರ್ಷ ವಯಸ್ಸು. ಕೇಶವಯ್ಯನ ವರು ಎದೆಗುಂದದೆ ಆ ಕೂಸನ್ನು ತನ್ನ ಉದ್ಯೋಗದೊಂದಿಗೇ ಬೆಳೆಯಿಸುತ್ತ ಬಂದರು. ಅಂತಹ ದುಃಖದ ಸಮಯದಲ್ಲೂ ಅವರ ದೈನ್ಯ ಮುಖವನ್ನು ಯಾರೂ ಕಂಡಿಲ್ಲ. ಅವರಿಂದಾಗಿ ಯಾರೂ ಪ್ರತಿಹತರಾಗಿ ನಿರಾಶೆಗೊಂಡು ಹಿಂದಿರುಗಿದುದಿಲ್ಲ. ಯಾರಿಗೂ ತನ್ನ ಕೈಲಾದಷ್ಟು ಸಹಾಯವನ್ನು ಮಾಡು ತಲೇಯಿದ್ದರು. ಅವರ ಅಂತಹ ಉದಾರ ಗುಣದ ಆಶ್ರಯದಲ್ಲೇ ಶಾರ ದೆಯು ಬೆಳೆಯುತ್ತ ಬಂದಳು. ಅವಳೇನೂ ಶಾಲೆಯಲ್ಲಿ ಹಿಂದುಳಿದಿದ್ದಿಲ್ಲ. ಆದರೂ ಶಾಲೆಯಿಂದ ಬಂದೊಡನೆಯೆ ತಂದೆಯ ಸಕಲ ಕಾರ್ಯಗಳಲ್ಲಿ ಗೃಹಕೃತ್ಯಗಳಲ್ಲಿ ಕೈಗೂಡಿಸಿ ಹೆಗಲುಕೊಟ್ಟು ದುಡಿಯುತಿದ್ದಳು. ಆ ದುಡಿಮೆಯೇ ಅವಳನ್ನು ಆರೋಗ್ಯ ದೃಢ ಮನಸ್ಕಳನ್ನಾಗಿ ಮಾಡಿದ್ದಿತು. ಹೀಗೆ ತಂದೆಯೊಂದಿಗೆ ಹೊಂದಿದ ಬಾಳು ಅವನ್ನೆ ಸರ್ವಸ್ವವೆಂದು ಬಗೆದು ಒಮ್ಮೊಮ್ಮೆ ತಂದೆಯ ದುಃಖ ಸಮಯದಲ್ಲಿ ಜಾನಕಿಯಮ್ಮನ ಸ್ಮರಣೆ ಯನ್ನು ಹುಟ್ಟಿಸುತಿದ್ದಿತು.---ಹಾ ! ನೀನು ಸತ್ತೂ ಬದುಕಿದೆ ಜಾನಕಿ !- ಎಂದು ಕೇಶವಯ್ಯನವರು ಆಗಿಂದಾಗ ಉದ್ಗಾರ ತೆಗೆಯುತಿದ್ದರು.

ಆ ಮಾತೇನೂ ಸುಳ್ಳಲ್ಲ. ಶಾರದೆಯು ಜೇನು ನೊಣದಂತೆ ಕ್ಷಣವೂ ಕುಳಿತಿರದೆ ಕೋಣೆ ಕೋಣೆ ಸುತ್ತುತ ಕೆಲಸಮಾಡುತಿದ್ದಳು. ತಂದೆಯು ಆಫೀಸಿನಿಂದ ಬಂದೊಡನೆಯೇ ಕೋಟು ರುಮಾಲು ತೆಗೆದುಕೊಂಡು ಕಾಲು ತೊಳೆಯಲು ನೀರು ಕೊಡುತಿದ್ದಳು. ರಾತ್ರಿ ಮಣೆಯಿಟ್ಟು ಬಡಿಸುತಿದ್ದಳು. ತಾನು ಚಿಕ್ಕವಳೆಂಬ ಭಾವನೆಯೇ ಅವಳಿಗೆ ಮೂಡುತಿದ್ದಿಲ್ಲ. ಆದರೆ ಅವರೇ ಅವಳನ್ನು ಬಿಗಿಯಪ್ಪಿ–ಮಗೂ–ಸಾಕಮ್ಮ ಹೋಗಿ ಮಲಗು–ಎಂದು ಮುಂಡಾಡಿ ತನ್ನ ಬಳಿಯಲ್ಲೇ ಹೊದಿಸಿ ಮಲಗಿಸುತಿದ್ದರು.

ಕೇಶವಯ್ಯನವರಿಗೆ ಪೆನ್ಶನಿನ ವೇಳೆ ಬಂದಾಗ ಶಾರದೆಗೆ ಹನ್ನೆರಡು ವರ್ಷ ನಡೆಯುತಿದ್ದಿತು. ಪೆನ್ಶನಿನ ನಂತರ ಅವರು ಪೇಟೆಯಲ್ಲಿ ಉಳಿದಿರಲು ಬಯಸಲಿಲ್ಲ. ಅವರ ಆ ಅಲ್ಪವರಮಾನದಿಂದ ಪಟ್ಟಣದಲ್ಲುಳಿದು ತನ್ನ ದೈನ್ಯ ಮುಖವನ್ನು ತೋರಿಸಲು ಅವರು ಇಷ್ಟಪಡಲಿಲ್ಲ. ಅಲ್ಲದೆ ಆಗ ತಾನೇ ದ್ವಿತೀಯ ಜಾಗತಿಕ ಯುದ್ಧದ ಕಹಳೆಯ ಪ್ರತಿಧ್ವನಿಯು ಕೇಳಬರುತಿದ್ದಿತು. ಆಗ ನಿಯಂತ್ರಣ - ಹಸುಗೆ ಪದ್ಧತಿ ಇವಾವುವೂ ತೊಡಗಿರದೆ ವಸ್ತುಗಳ ಬೆಲೆಯು ಮಿತಿ ಮೀರ ತೊಡಗಿದ್ದಿತು. ಅಂತಹ ಪ್ರಪಂಚದ ತುಮುಲಿನ ಮಧ್ಯದಲ್ಲಿ ತನ್ನ ಒಡಕು ಹಡಗನ್ನು ಹಿಡಿದುಕೊಂಡು ಬಾಳುವೆಯ ಕಡಲು ದಾಂಟಲು ಕೇಶವಯ್ಯನವರು ಇಷ್ಟ ಪಡಲಿಲ್ಲ. ಅವರಿಗೆ ಬೇಕಾದುದು ಜೀವನದ ಕೊನೆಯ ಶಾಂತಿ !

ಆ ದಿನಗಳಲ್ಲಿ ತನ್ನ ಜೀವನದ ವ್ಯಾಪಕತೆಯನ್ನು ವ್ಯಕ್ತಪಡಿಸಿ ಜನ್ಮವನ್ನು ಸಾರ್ಥಕಗೊಳಿಸಲು ಬೇಕಾದ ಅಲ್ಪ ಸಂದರ್ಭ. ಅದಕ್ಕಾಗಿ ಅವರು ಹಳ್ಳಿ ಸೇರಿ ತನ್ನ ಸೇವೆಯನ್ನು ಅಲ್ಲಿ ಸಲಿಸಬೇಕೆಂದು ಹಾರೈಸಿದರು. ಪೇಟೆಗೆ ಸೇವೆಯ ಅಗತ್ಯವಿದ್ದಿಲ್ಲ. ಪೇಟೆಯು ಹಣದ ಬೆಲೆಯಿಂದ ನಡೆಯುತಿದೆ. ಪೇಟೆಯ ಉಪಕಾರವು ಉಪಕಾರವಲ್ಲ— ಪ್ರತಿಫಲ! ಸೇವೆಗೆ ಸಂಬಳವುಬೇಕು. ತ್ಯಾಗಕ್ಕೆ ಮನ್ನಣೆಯು ಬೇಕು. ಅದೇ ಅಲ್ಲಿಯ ಜೀವನ. ಇಂತಹ ತಲೆ ಚೀಟಿಗಳನ್ನೆಲ್ಲ ಬಿಟ್ಟು ವಿರಾಮವಾಗಿ ಬೇಕಾದ ಕಡೆ ತನ್ನ ನೆರವುಗೊಟ್ಟು, ಬೇಡವಾದ ಕಡೆ ಮೌನವಾಗಿರಬೇಕಾದ ಮುಚ್ಚು ಮರೆಯು ಅವರಿಗೆ ಬೇಕಾಯಿತು. ಅದಕ್ಕಾಗಿ ಅವರು ಪೇಟೆಯ ಮನೆ

ಯನ್ನು ಬಾಡಿಗೆಗೆ ಕೊಟ್ಟು ಧರ್ಮನ ಹಳ್ಳಿ ಸೇರಿದರು. ಅಲ್ಲಿ ಜಮೀನ್ದಾರರ ಗುಡಿಸಲೊಂದನ್ನು ವಹಿಸಿಕೊಂಡು ಸುತ್ತಲೂ ನೋಡಿದರು. ಆಗ ಅವರು ಅಲ್ಲಿ ಕಂಡುದೇನನ್ನು?

ಗೇದಷ್ಟೂ ಹೊಟ್ಟೆ ತುಂಬಲಾರದ ಜನಾಂಗ. ರೋಗರುಜೆಗಳಿಂದ ಹೊಟ್ಟೆ ಬೆನ್ನಿಗೆ ಹಿಡಿದ ಜನಾಂಗ. ರೈತರ ಉರುಳಿಗೆ ಸಿಲುಕಿ ಸಾಲ ಸೋಲುಗಳಿಂದ ಬೆನ್ನು ಬಾಗಿದ ಜನಾಂಗ. ದೂರದೂರದ ಪಟ್ಟಣದ ಸುಧಾರಣೆಯ ವೃಥಾನುಸರಣೆಯಿಂದ ಗತಿಗೆಟ್ಟ ಜನಾಂಗ. ಬುದ್ಧಿಯಿಲ್ಲದೆ ವಿದ್ಯೆಯಿಲ್ಲದೆ ಮೂಢ ಭಾವನೆಗಳಿಂದಾಗಿ ಪರಸ್ಪರ ಕಾದಾಡುತಿದ್ದ ಜನಾಂಗ. ಇಂತಹ ದುರ್ದೈವೀ ಜನತೆಯನ್ನು ಕಂಡು ಅವರು ಬೆಚ್ಚಿಬಿದ್ದರು. ಅವರು ಈ ತನಕ ಊಹಿಸಿದ್ದ ಆ ಪಚ್ಚೆ ಪೈರಿನ ಸಸ್ಯ ಸಂಪತ್ತಿನ, ಜನರ ಸಹನೆಯ ಮನಸ್ಸಂಪತ್ತಿನ, ಶಾಂತ ವಾತಾವರಣದ ಬೆಳವಣಿಗೆಯ ನಿರ್ಮಲ ಜೀವನದ ಆರೋಗ್ಯ ಸಂಪತ್ತಿನ ಮಾದರಿ ಕಳೆದೇ ಹೋಗಿದ್ದಿತು. ಅಲ್ಲಿ ಉಳಿದಿದ್ದುದು ಹಳ್ಳಿಯಲ್ಲ—ಹಳ್ಳಿಯ ಮೃತ ಕಳೇವರದ ಎಲುಬಿನ ಗೂಡು ಮಾತ್ರ! ಆದರೂ ಅವರು ಅದರ ಮಧ್ಯ ಮಾಂಸ ತುಂಬಿಸಿ ರಕ್ತ ಹರಿಸಿ ಉಸಿರಾಡಿಸಿ ಪ್ರಾಣಕಳೆ ತುಂಬಬೇಕೆಂದು ಉತ್ಕಟವಾಗಿ ಇಚ್ಛಿಸಿದರು. ಅದಕ್ಕಾಗಿ ಸನಿಹದ ಮತ್ತೊಂದು ಚಿಕ್ಕ ಗುಡಿಸಲನ್ನು ವಹಿಸಿಕೊಂಡು ಅದರಲ್ಲಿ ಜನರ ಅಭಿವೃದ್ಧಿಗಾಗಿ ಧರ್ಮಾರ್ಥವಾಗಿ ರಾತ್ರಿ ಶಾಲೆಯೊಂದನ್ನು ತೆರೆದರು.

ಈ ಎಲ್ಲ ಕೆಲಸಗಳಲ್ಲಿ ಶಾರದೆಯ ನೆರವು ಸಂಪೂರ್ಣವಾಗಿದ್ದಿತು. ಆ ಪುಟ್ಟ ಬಾಲಿಕೆಯು ತುಂಬು ಮನಸ್ಸಿನಿಂದ ನಗು ನಗುತ್ತ ಅವುಗಳಲ್ಲೆಲ್ಲ ಗೆಲವು ತುಂಬುವ ಅಧಿದೇವತೆಯಾಗಿದ್ದಳು. ಕೇಶವಯ್ಯನವರಿಗೆ ತಮ್ಮ ಸಹನೆಯಿಂದ ಸಾಧಿಸಲು ಸಾಧ್ಯವಿಲ್ಲದುದನ್ನು ಅವಳು ತನ್ನ ಮುದ್ದು ನಗೆಯಿಂದ ಸಾಧಿಸುತಿದ್ದಳು. ಜಮೀನ್ದಾರರ ಅರಮನೆಯಿಂದ ಬಡವರ ಜೋಪಡಿಯ ತನಕವೂ ಅವಳು ವ್ಯಾಪಿಸಿ ಅವರೆಲ್ಲರೊಡನೆಯೂ ನಯನುಡಿಗಳಿಂದ ಲೀನವಾಗುತಿದ್ದಳು. ಸಿಡುಕಿನ ಸ್ವಭಾವದ ಶ್ರೀನಿವಾಸರಾಯರೂ ಎಷ್ಟೋ ತಡವೆ ಅವಳಿಂದಾಗಿ ಸೌಮ್ಯತೆಯ ಪಾಠವನ್ನು ಕಲಿಯುತಿದ್ದರು.

ಕೃಷ್ಣಸ್ವಾಮಿಯು ರಜೆಯವೇಳೆ ಊರಿಗೆ ಬಂದಾಗಲೆಲ್ಲಾ ಅವರೊಡನೆ ಕೂಡುತ್ತಿದ್ದನು. ಅವರ ಆ ಸಮಯದ ವಿಶೇಷ ಕಾರ್ಯಕ್ರಮ ಪೂಜೆ ಭಜನೆಗಳಲ್ಲಿ ಭಾಗವಹಿಸಿ ಆಸಕ್ತಿಯಿಂದ ತಾನೂ ಅವರವನಂತೆಯೇ ಭಾವಿಸಿ ಸಹಭಾಗಿಯಾಗುತಿದ್ದನು. ಇವನ ಸೂಕ್ತ ಸಲಹೆಗಳಿಂದಾಗಿ ಅವರ ಎಷ್ಟೋ ಕೆಲಸಗಳು ಯಶಸ್ವಿಯಾಗಿವೆ. ಅವರ ಸರಳ ಜೀವನದ ಸಂಪರ್ಕದಿಂದಾಗಿ ಇವನ ಎಷ್ಟೋ ಚಟಗಳು ಮಾಯವಾಗಿ ಬಾಳನ್ನು ಹೊಸ ನೋಟದಿಂದ ಕಾಣುವ ಸಮಾಧಾನದ ಹೊಸ ಹುರುಪು ಹೆಚ್ಚಿದೆ. ಇದು ಜೀವನದ ಪರಸ್ಪರ ಸುಖವಿನಿಮಯವು. ಬದುಕಿನ ಅಭಿಲಾಷೆಗಳು ಸಮಹಂತವಾಗಿದ್ದಲ್ಲಿ ಇದು ನಡೆದೇ ನಡೆಯುವುದು. ಆಗ ಮೇಲು ಕೀಳು—ಧನಿಕ ದರಿದ್ರನೆಂಬ ಭೇದಭಾವನೆಯು ಅಳಿದು ಮನುಷ್ಯನು ಮನುಷ್ಯನೊಡನೆ ಸಂಬಂಧ ಬೆಳೆಯಿಸಲು ಯತ್ನಿಸುವನು. ಮಾನವತೆಯು ಪಾಶವಿಕ ಪ್ರವೃತ್ತಿಯಿಂದ ಮೇಲೆದ್ದು ಬಂದು ಹೊಸ ಮಾರ್ಗದಲ್ಲಿ ಹೊಸ ಮಂತ್ರದ ಅನುಷ್ಠಾನಕ್ಕೆ ತೊಡಗುವುದು. ಆಗ ಅಲ್ಲಿ ಉಳಿಯುವುದು ಬಡವ—ಹಣವಂತನೆಂಬ ವ್ಯತ್ಯಾಸವಲ್ಲ. ಮನುಷ್ಯ—ಮೃಗವೆಂಬ ಎರಡೇ ಅಂತರ. ಮನುಷ್ಯರೆಲ್ಲ ಒಂದೇ ಕುಟುಂಬದವರಂತೆ ಕೂಡಿ ಒಬ್ಬರನ್ನೊಬ್ಬರು ಮೇಲೆತ್ತಿಕೊಳ್ಳಲು ಯತ್ನಿಸುವರು. ಅಲ್ಲವಾದರೆ ಬಿದ್ದಲ್ಲೇ ಬೊಗಳಿ ಹಲ್ಕೆರೆದು ಹೊರಳಾಡುತಿರುವರು!

ರಜೆಯ ವೇಳೆ ಬೆಂಗಳೂರಿನಿಂದ ಬರುತಿದ್ದಾಗಲೆಲ್ಲಾ ಕೃಷ್ಣಸ್ವಾಮಿಯು ಶಾರದೆಗಾಗಿ ಹೊಸ ಹೊಸ ಪತ್ರಿಕೆಗಳನ್ನು ಪುಸ್ತಕಗಳನ್ನು ತರುತಿದ್ದನು. ಹೊಸ ಹೊಸ ದಾಟಿಯಲ್ಲಿ ತಾನೇ ಪದ್ಯಗಳನ್ನು ರಚಿಸಿ ಅವಳಿಂದ ಹೇಳಿಸುತಿದ್ದನು. ಹೊಸ ಜಗತ್ತಿನ ಹೊಸ ಭಾವನೆಗಳನ್ನು ಅವಳ ಹೃದಯದಲ್ಲಿ ಬಿಂಬಿಸಿ ಪ್ರಪಂಚದ ನಿತ್ಯ ಪರಿವರ್ತನೆಗಳನ್ನು ಅವಳಿಗೆ ವಿಶದೀಕರಿಸುತಿದ್ದನು. ಇವೆಲ್ಲವುಗಳಿಂದಾಗಿ ಅವನಿಗೆ ರಜೆ ಕಳೆದ ವಿಚಾರವೇ ಗೋಚರವಾಗುತಿದ್ದಿಲ್ಲ. ಮತ್ತೆ ಶಾಲೆಗೆ ಹೊರಟುಹೋಗುವ ವೇಳೆ ಚಿಕ್ಕ ಮಕ್ಕಳಂತೆ ಚಟಪಟಿಸುತಿದ್ದನು

ಹೀಗೆಯೇ ಮೂರು ವರ್ಷಗಳೂ ಕಳೆದುಹೋಗಿವೆ. ಆ ಮೂರು ವರ್ಷಗಳ ಅಲ್ಲಿನ ಶಾರದಾಪೂಜೆಯಲ್ಲಿ ಅವನ ಅಂಗವಿದ್ದೇಯಿದ್ದಿತ್ತು. ಆದು

ದರಿಂದಲೇ ಕೇಶವಯ್ಯನವರು ಆತಡವೆ ಕೃಷ್ಣಸ್ವಾಮಿಯೇಕೆ ಪೂಜೆಗೆ ನಿಲ್ಲಲಿಲ್ಲವೆಂದು ತರ್ಕಿಸಲು ಕಾರಣ. ಆದರೆ ಅವರು ಆ ಕುರಿತು ದೀರ್ಘ ಪರಾಮರ್ಶೆಗೆ ಹೋಗಲಿಲ್ಲ. ಎಂದರೆ ಅದೇ ಅವರ ಲಘು ಸ್ವಭಾವ! ಚಿಕ್ಕ ಪುಟ್ಟ ಕಾರಣಗಳಿಗಾಗಿ ಅವರೆಂದೂ ತಲೆಸುತ್ತುತಿದ್ದಿಲ್ಲ.

ಆದರೆ ಕಾರಣಗಳಿಗಾಗಿ—ಸಂದರ್ಭಗಳಿಗಾಗಿ ತಲೆಸುತ್ತುವ ಕಾಲವು ಬಂದೊದಗುವುದಿಲ್ಲವೆ? ಅವರು ತನ್ನ ಕಣ್ಣಿನಿಂದಲೇ ನೋಡುತಿರುವರು. ಶಾರದೆಯು ಈಗ ಮೊದಲಿನ ಹನ್ನೆರಡು ವರ್ಷಗಳ ಹುಡುಗಿಯಲ್ಲ. ವಿನಾ ಕಾರಣವಾಗಿ ಆ ಕಡೆ ಈ ಕಡೆ ಸುತ್ತುವ ಉದಾಸಳಾಗುವ ಮುಂಜಾನೆಯ ಪಾತರವಕ್ಕಿಯಲ್ಲ. ಅವಳಿಗೀಗ ವಯಸ್ಸು ತುಂಬಿದೆ. ಅಂತೆಯೇ ಮನಸ್ಸು ತುಂಬಿದೆ. ಅವಳ ತುಂಬಿದ ಮನಸ್ಸಿನ ಅಭಿಲಾಷೆಯನ್ನು ತಿಳಿದು ಕಾಲೋಚಿತವಾಗಿ ಅದನ್ನು ಕೂಡಿಸಿಕೊಡುವುದು ತಂದೆ ಯಾದವನ ಕರ್ತವ್ಯ. ಅಂತಹ ಕಾರಣಗಳಿಗಾಗಿ ಕೇಶವಯ್ಯನವರು ತಲೆ ಸುತ್ತಲೇ ಬೇಕಾಯಿತು. ಮಗಳನ್ನು ತನ್ನ ಧರ್ಮಪತ್ನಿಯ ಅವಶೇಷವನ್ನಾಗಿ ತಿಳಿದು ಯೋಗ್ಯ ಮಂಟಪದಲ್ಲಿರಿಸುವ ಸಲುವಾಗಿ ನಾಲ್ಕೂ ಕಡೆ ದೃಷ್ಟಿ ಬೀರಲೇ ಬೇಕಾಯಿತು. ಆದರೆ ಯಾವುದರಿಂದಲೂ ಅವರ ಮನಸ್ಸು ತೃಪ್ತವಾಗಲಿಲ್ಲ. ಹುಡುಗಿಯೊಂದಿಗೆ ಮತ್ತೇನನ್ನು ಕೂಡಿಸಿ ಕೊಡುವಿರೆಂಬ ವಾದವು ಬಂದಾಗಲೆಲ್ಲ ಅವರು ಹಿಂಜರಿಯುತಿದ್ದರು. ಹುಡುಗಿಯ ಸಲುವಾಗಿ ಮತ್ತೇನನ್ನು ಕೊಡಬೇಕಾಗಿದೆ? ಅವೆಲ್ಲವನ್ನು ಹುಡುಗಿಯೇ ಹೊತ್ತಿರುವಳು. ವಿದ್ಯೆ—ವಿನಯ—ರೂಪ ಇವುಗಳೆಲ್ಲವನ್ನೂ ಅವಳೇ ತುಂಬಿಕೊಂಡಿರುವಳು. ಮತ್ತೇನು ತುಂಬ ಬೇಕಾಗಿದೆ? ಮತ್ತೆ ತುಂಬಿದ ಪಾರ್ಥಿವ ವಸ್ತುಗಳಿಂದ ಜನತೆಯು ತಣಿಯುವುದಾದರೆ ಅಂತಹ ತಣಿಕೆಯು ಬರೇ ಕ್ಷಣಿಕ. ಅಂತಹ ಸಂಪರ್ಕವು ಬೇಡವೆಂದೇ ಅವರು ಹೋದ ಕಡೆಯಿಂದೆಲ್ಲಾ ಹಿಂದೆ ಬರುತಿದ್ದರು.

ಕೇಶವಯ್ಯನವರ ಆಯ್ಕೆಯಲ್ಲಿ ದುರುದ್ದೇಶವಿದ್ದಿಲ್ಲ. ಕೈಗೆಟಕದ ತುತ್ತತುದಿಗೆ ಅವರು ಕೈನೀಡಲು ಹವಣಿಸಲಿಲ್ಲ. ಅರಮನೆಯತ್ತ ಅವರ ದೃಷ್ಟಿಪಾತವಾದುದಿಲ್ಲ. ಅವರಿಗೆ ಬೇಕಾದುದು ಜೋಪಡಿಯೆ. ಆ

ಜೋಪಡಿಯ ತಿರುಕನೆ ಅವರ ಮಗಳ ರಾಜ. ಆದರೆ ಅವನಿಗೆ ಹಣದ ತಿರುಪೆ ಬೇಕಾದುದಲ್ಲ. ಸೌಜನ್ಯದ ಬೆಲೆಯರಿತು ನೋಡುವ ನಗೆ ನೋಟ– ಸೌಂದರ್ಯದ ಅಂತಸ್ಸ್ರೋತವನ್ನು ಆರಾಧಿಸುವ ವಿಶಾಲ ಹೃದಯ—ಮನಸ್ಸಿಗೆ ಮನಸ್ಸು ಕೂಡಿಸಿ ಬಾಳಲಿರುವ ಮನುಷ್ಯತ್ವ—ಇವಿಷ್ಟು ಇದ್ದರೆ ಸಾಕು. ಅಂತವನಿಗೇ ಅವರ ಶಾರದೆಯು ಮೀಸಲು!

ಇವೆಲ್ಲವನ್ನೂ ಶಾರದೆಯು ಅರಿತೇಯಿರುವಳು. ಮೌನವಾಗಿ ಒಮ್ಮೆ ಉಸಿರುಬಿಟ್ಟು ತನ್ನ ನಿತ್ಯ ಕೆಲಸಗಳಲ್ಲಿ ಮನಸ್ಸಿಡುತಿದ್ದಳು. ಅವಳದು ಕ್ರಾಂತಿಯ ಬದುಕಲ್ಲ—ಕರುಣೆಯದು! ಸಹನೆಯೇ ಅವಳ ನಿತ್ಯಧರ್ಮ. ತಂದೆಯೇ ಅವಳ ಪರದೈವ. ಅವರ ಆಶೆಯೆ ಅವಳ ಅಭಿಲಾಷೆ. ಆದರೆ ಅಂತಹ ವರ್ತನೆಗಳ ಆವರ್ತದಲ್ಲಿ ಒಮ್ಮೊಮ್ಮೆ ಸಣ್ಣ ತೆರೆಯೊಂದು ಹೊಯ್ದು ಸಪ್ಪಳಗುಡುವುದಿದೆ—ಅದು ಅವಳ ಕೃಷ್ಣಸ್ವಾಮಿಗಾಗಿ!

ಬಡವರಾಗಿ ಹುಟ್ಟುವುದು ತಪ್ಪೊ ಸರಿಯೊ ತಿಳಿಯದು. ಆದರೆ ಬಡವನಾದಮೇಲೆ ಆದರ್ಶವಿರುವುದಂತೂ ತಪ್ಪೇ ತಪ್ಪು. ಏನೇಯಿರಲಿ, ಬಡತನವನ್ನು ಅಲ್ಲಗಳೆದು ಆಡಂಬರವನ್ನು ಅಪ್ಪುವ ದೌರ್ಜನ್ಯವನ್ನು ಮಾತ್ರ ಸರ್ವಥಾ ಕೊಡಬೇಡ ನನ್ನ ಸ್ವಾಮಿ! ನಾವು ಬಡವರಾಗಿಯೇ ಸಂತೋಷದಿಂದ ಬಾಳಬಲ್ಲೆವು. ಹಣದ ಬಿಸಿಲ್ಗುದುರೆಯು ನಮಗೆ ಬೇಡ. ನಾವು ಯಾರಿಗೂ ಏನೂ ದ್ರೋಹವೆಣಿಸಿದ್ದಿಲ್ಲ. ನಮ್ಮ ಸ್ವಾಮಿಯೂ ನಮಗೆ ದ್ರೋಹವೆಸಗಲಾರನು. ನನಗೆ ಸಹನೆಯಿದೆ—ಸಮಾಧಾನವಿದೆ. ಆ ತನಕವೂ ಯೋಗ್ಯತೆಗಾಗಿ ಕಾದಿರುವೆನು. ಅಂತೂ ಅಯೋಗ್ಯನು ನಮ್ಮ ಮುದ್ದು ಶಾರದೆಯನ್ನು ಕೊಳ್ಳೆಹೊಡೆಯುವುದು ಬೇಡವೇ ಬೇಡ. ನಮ್ಮ ಪಾಡಿಗೆ ನಾವು—ಈ ನಮ್ಮ ಶಾಲೆ—ಧರ್ಮಶಾಲೆ!—ಇದೇ ಕೇಶವಯ್ಯನವರ ನಿತ್ಯ ಪ್ರಾರ್ಥನೆ.

ಆ ವರ್ಷದ ನವರಾತ್ರಿ ಪೂಜೆಯಲ್ಲಿ ಶಾರದೆಯು ಕೃಷ್ಣಸ್ವಾಮಿಯು ಬರೆದುಕೊಟ್ಟ ಚಿಕ್ಕ ಹಾಡನ್ನು ಹಾಡಿದಳು.

ಹಣದ ಹೆಗಲಮೇಲೆ ಕುಳಿತು
ಜಗವು ಸಾಗಿದೆ--ಈ
ಜಗವು ಸಾಗಿದೆ.
ಸುಖದ ಸುಳ್ಳು ನಗೆಯತೋರಿ
ಜಗವು ಸಾಗಿದೆ—ಈ
ಜಗವು ಸಾಗಿದೆ!
ಕತ್ತಲುಂಟು ಆಚೆಕಡೆ
ಇತ್ತಕಡೆ ಝುಗ ಝುಗ
ದುಃಖ ದೈನ್ಯಗಳನು ಮುಚ್ಚಿ
ಹೊಟ್ಟೆಯೊಳಗೆ ಧಗ ಧಗ
ಹಣದ ಹೆಗಲ ಮೇಲೆ ಕುಳಿತು
ಜಗವು ಸಾಗಿದೆ—ಇಂತು
ಜಗವು ಸಾಗಿದೆ
ಹೆಣದ ಹೆಣದ ಮೇಲೆ ಕುಣಿದು
ಜಗವು ಸಾಗಿದೆ—ಇಂತು
ಜಗವು ಸಾಗಿದೆ!

ಈ ಪದಕ್ಕಾಗಿ ಎಲ್ಲರೂ ಚಪ್ಪಾಳೆ ಬಡಿದರು. ಆದರೆ ಪ್ರಪಂಚವು ಮತ್ತೂ ಹಾಗೇನೇ ಸಾಗುತಿದ್ದಿತು. ಹಾಗೆ ಸಾಗುವ ಪ್ರಪಂಚದಲ್ಲಿ ಕೇಶವಯ್ಯನವರು ಸುತ್ತುತ್ತಲೇ ಇದ್ದರು. ಕಾರಣ—ಬಡವರಿಗೆ ದೇವರೂ ಮೆಚ್ಚುವುದಿಲ್ಲ. ಎಂತಲೇ ವರಪ್ರಾಪ್ತಿಯಾಗುವುದಿಲ್ಲ. ಪಾಪ! ದೇವರು ಹಣದ ತಲೆದಿಂಬಿನ ಮೇಲೆ ಯೋಗನಿದ್ರೆಯಡರಿ ಗೊರಕೆ ಹೊಡಿಯುತಿದ್ದ! ಹೀಗಾಗಿ ಕೇಶವಯ್ಯನವರ ಗೋಳು ಅವನ ಬಳಿಯಿಂದ ಬೆಕ್ಕಿನ ಪಿಳ್ಳೆಯಂತೆ ಸದ್ದಿಲ್ಲದೆ ನುಸುಳಿಯೇ ಹೋಯಿತು!

ಕುಸುರು ೪ ಕ್ರಾಂತಿವೀರರು

ನಲ್ವತ್ತೆರಡರ ಆಗೋಸ್ತು ತಿಂಗಳ ಮೊದಲಿಗೆ ದೇಶಕ್ಕೆ ದೇಶವೇ ಕಾವಲಿಯಂತೆ ಕಾದು ಬೆಂಕಿಯುರಿಯತೊಡಗಿತು. ಕಾಂಗ್ರೆಸ್ ಕಾರ್ಯಕರ್ತರ—ಪೂಜ್ಯಬಾಪೂಜಿಯ ಚಲೇಜಾವ್ ನಿರ್ಣಯದಿಂದಾಗಿ ದೇಶದಲ್ಲಿ ಕ್ಷೋಭೆಯೆದ್ದು ಕಾಳ್ಗಿಚ್ಚಿನಂತೆ ಹಬ್ಬಿತು. ಸಂಕ ಕಂಬಿಗಳೆಲ್ಲ ಕಡಿದು ಹಾಕಲ್ಪಟ್ಟುವು. ಸರಕಾರವು ಒಮ್ಮಿಂದೊಮ್ಮೆಗೆ ಸ್ತಬ್ಧವಾದಂತಾಗಿ ಕಚೇರಿಗಳೆಲ್ಲಾ ಲೂಟ ಮಾಡಲ್ಪಟ್ಟುವು. ಕಡಿವಾಣ ಬಿಟ್ಟಿದ್ದ ಕುದುರೆಯಂತೆ ಆಗಿನ ಸ್ವಾತಂತ್ರ್ಯದ ರಥವೂ ಯಾವ ಕಡೆಗೆ ನಡೆದಿದ್ದಿತೆಂಬುದೇ ಗೋಚರವಿದ್ದಿಲ್ಲ.

ದೇಶದ ಹೋರಾಟದ ಕರೆಯು ಮೈಸೂರು ಸೀಮೆಯನ್ನೂ ಮುಟ್ಟದಿರಲಿಲ್ಲ. ಮೈಸೂರಿನ ಚಿನ್ನದ ಗಣಿಯಿಂದ—ಮೈಸೂರಿನ ಗಂಧದ ಗುಡಿಯಿಂದ—ಮೈಸೂರಿನ ನಂದನವನಗಳಿಂದ ಜನಜನತೆಯು ಸಿಡಿದು ಮೇಲೆದ್ದಿತು. ಗಡಂಗುಗಳೆಲ್ಲ ಮುಚ್ಚಲ್ಪಟ್ಟುವು. ರಾಷ್ಟ್ರವು ಸಿಪಾಯಿಗಳ ರಾಜ್ಯವಾಯಿತು. ಆದರೆ ಆ ಕರೆಗೆ ಓಕೊಡದವನಾವನು? ಶಾಲಾಮಕ್ಕಳು ಶಾಲೆಯುಳಿದು ಬೀದಿಯ ಮೇಲೆ ಸಾಮ್ರಾಜ್ಯ ನಾಶಕ್ಕಾಗಿ ಬೊಬ್ಬಿಟ್ಟವು. ಅದರ ಪರಿಣಾಮವಾಗಿ ಕೈಮುರಿದು ತಲೆಯೊಡೆದು ರಕ್ತಕಾರಿದ ದೃಶ್ಯ ಸೀಮೆಯ ಚರಿತ್ರೆಯನ್ನು ಕೆಂಪುಗೊಳಿಸಿತು. ದೇಶಮಾತೆಯ ರೂಕ್ಷ ಲಲಾಟದಲ್ಲಿ ಅದೇ ಒಂದು ರಕ್ತ ಕುಂಕುಮವಾಗಿ ಶೋಭಿಸಿತು. ಆದರೂ ಆ ಹೋರಾಟವು ಸಾಗುತಲೇಯಿದ್ದಿತು!

ನವರಾತ್ರಿಯ ಉತ್ಸವದ ಸಂತೋಷದ ಸುಖಪ್ರಸವದ ವೇದನೆಯು ಇನ್ನೂ ಕಳೆದಿದ್ದಿಲ್ಲ. ಕೃಷ್ಣಸ್ವಾಮಿಯು ಊರಿನಿಂದ ಬೆಂಗಳೂರು ಸೇರಿ ಮೂರು ತಿಂಗಳೂ ಕಳೆದಿದ್ದಿಲ್ಲ. ಆಗ ಬೆಂಗಳೂರಿನ ಕೋಲೇಜಿನ ಅಖಂಡ ವಿದ್ಯಾರ್ಥಿ ಸಂಘವು ರಾಜ್ಯದ ದಬ್ಬಾಳಿಕೆಗಳನ್ನು ಪ್ರತಿಷೇಧಿಸಿ ಠರಾವು ಮಂಡಿಸಿತು. ಅದರ ನಿಷೇಧಾರ್ಥವಾಗಿ ವಿದ್ಯಾರ್ಥಿಗಳ ವಾಕ್ ಸ್ವಾತಂತ್ರ್ಯಕ್ಕಾಗಿ ಮೆರವಣಿಗೆ ಹೊರಡಿಸಿತು. ಆಗ ಎಲ್ಲರ ರಕ್ತವೂ ಕುದಿದಿದ್ದಿತು. ಬಡವರು ಬಲ್ಲಿದರು ಎಂಬ ಭೇದವಿದ್ದಿಲ್ಲ. ಎಲ್ಲರ ಉದ್ದೇಶವೂ ದೇಶದ ಸ್ವಾತಂತ್ರ್ಯಸೇವೆ!

ಸೇವೆಯ ಮುಂದೆ ಲಾಠಿಯೇನು---ಗುಂಡೇನು-ಗುಡುಗಾಟವೇನು? ಶಕ್ತಿಯನ್ನು ಪ್ರತಿಗಾಮಿಶಕ್ತಿಯು ಎಂದಿಗೂ ಹಿಂದೆ ದಬ್ಬಲಾರದು. ಹೊಡೆ ಹೊಡೆದಷ್ಟು ಅದು ಚೆಂಡಿನಂತೆ ಪುಟಪುಟಿದು ಹಾರುವುದು. ಆ ವೇಳೆಯಲ್ಲಿ ಎಷ್ಟೋ ವಿದ್ಯಾರ್ಥಿಗಳ ದಿಗ್ಬಂಧವಾಯಿತು. ಅವರಲ್ಲಿ ಕೃಷ್ಣಸ್ವಾಮಿಯೂ ಒಬ್ಬನು.

ಅದಕ್ಕಾಗಿ ಕೃಷ್ಣಸ್ವಾಮಿಯು ಕಳವಳಗೊಳ್ಳಲಿಲ್ಲ. ಅದು ಅವನು ನಿರ್ಧಾರವಾಗಿ ಇಟ್ಟದ್ದ ಹೆಜ್ಜೆ. ಅದನ್ನು ಹಿಂದೆಗೆಯುವ ಪ್ರಸಂಗವೇ ಇದ್ದಿಲ್ಲ. ಅದಕ್ಕಾಗಿ ದುಃಖಿಸುವ ಅಥವಾ ಕ್ಷಮೆ ಕೇಳುವ ವಿಚಾರವೇ ಇದ್ದಿಲ್ಲ. ಸತ್ಯವು ಎಂದಿಗೂ ಸಾಯಲಾರದೆಂದು ಕೇಶವಯ್ಯನವರು ಹೇಳುತಿದ್ದ ಮಾತು ಅವನಿಗೆ ಗಂಭೀರವಾಗಿ ಕೇಳಿಸುತಿದ್ದಿತು. ಶಾರದೆ--ಆ ಶಾರದೆ! ಪಾಪ ಆ ಹೆಣ್ಣುಮಗಳು ಜನರ ಸೇವೆಗಾಗಿ ಎಷ್ಟು ಕಷ್ಟ ಪಡುತಿದ್ದಿಲ್ಲ? ಸೇವೆಯಲ್ಲಿ ಅವಳು ಏನು ಸುಖವನ್ನು ಕಂಡಿರುವಳು ? ಹಾಗಾದರೆ ಅದೇ ಆತ್ಮ ಸುಖವು ತನಗೂ ನಿಲುಕಲಾರದೆ ? ಸುಖವು ಶಾಶ್ವತವಾಗಿರುವುದು ಭೋಗದಲ್ಲಿಯಲ್ಲ—ತ್ಯಾಗದಲ್ಲಿ! ವಿಶ್ವದಲ್ಲಿಯ ಭೋಗಮೂರ್ತಿಗಳು ಬಾಳಿಬದುಕಿಲ್ಲ. ಆದರೆ ತ್ಯಾಗಮೂರ್ತಿಗಳು ಮಾತ್ರ ಯುಗಯುಗಗಳ ಮೇಲೂ ಚಿರಸ್ಮರಣೀಯರಾಗಿರುವರು ಅಂತಹ ತ್ಯಾಗದ ವಿಶ್ವರೂಪದಲ್ಲಿ ಅವನದೂ ಒಂದು ಸೇವೆಯು ಮಳಲ ಕಣವಾಗಿ ಮುಂದಿನ ಸಚ್ಚರಿತ್ರೆಯ ತಳಹದಿಗೆ ಒದಗಿ ಬರಲಾರದೆ?

ಈ ಹುರುಪಿನ ಪ್ರಚೋದನೆಯಿಂದಾಗಿ ಅವನು ಶಾರದೆಗೆ ಒಂದು ಕಾಗದ ಬರೆದನು. ಶಾರದೆಗೆ ಕಾಗದ ಬರೆಯಲು ಆಗಲಾಗ ತಾನು ಯೋಗ್ಯನೆಂಬ ಹುಮ್ಮಸವೇ ಅದಕ್ಕೆ ಕಾರಣವಿದ್ದಿತೋ ಏನೊ!

ಪ್ರಿಯಳಾದ ಶಾರದಾದೇವಿಗೆ—

ಈ ಕಾಗದವು ಕೈಸೇರುವ ವೇಳೆಗೆ ನಾನು ಪ್ರಾಯಶಃ ಜೈಲಿನೊಳ ಗಿರಬಹುದು. ಅದಕ್ಕಾಗಿ ನೀನು ಸಂತೋಷಪಡಬೇಕೇ ಹೊರತು ದುಃಖಿ ಸಬಾರದು. ಕಾರಣ—ಈ ಬಂದೀವಾಸದಲ್ಲಿ ನನಗೆ ತುಂಬಾ ಹೆಮ್ಮೆ ಯಿದೆ. ಆದರೆ ನೀನು ಕೇಳಿ ದುಃಖಿಯಾದಿಯೆಂದು ತಿಳಿದು ಬಂದರೆ ಮಾತ್ರ ನನಗೆ ಅನಂತ ಯಾತನೆಯಾಗಲಿದೆ. ಮೊನ್ನೆ ಮೊನ್ನ ಇಲ್ಲಿ ನಡೆದ ಮೆರವಣಿಗೆಯ ಪ್ರಕರಣವನ್ನು ನೀನು ನಿನ್ನ ತಂದೆಯ ಮುಖಾಂತರ ಪತ್ರಿಕೆ ಗಳಿಂದ ತಿಳಿದಿರಬಹುದು. ಆ ವರ್ತಮಾನ ಅದರ ಒಂದುಭಾಗ ಮಾತ್ರ. ಅದೆಂತೇಯಿರಲಿ. ನಾನು ಅದಕ್ಕಾಗಿ ನಾಚುವುದಿಲ್ಲ. ನನ್ನ ಕಿಂಚಿತ್ ಸೇವೆಯು ನಮ್ಮ ದೇಶಕ್ಕೆ ಕೂಡಿಬಂದಿತಲ್ಲ—ಎಂಬ ಅಭಿಮಾನದಿಂದ ನನ್ನ ಎದೆಯು ತುಂಬಿ ಬಂದಿದೆ.

ಆದಿನ ನಾನು ನಿನ್ನನ್ನು ಕೊನೆಯದಾಗಿ ಕಂಡಾಗ ನೀನು ಹೇಳಿದ ಮಾತು ಇನ್ನೂ ನೆನಪಿನಲ್ಲಿದೆ. -ನೀವೇನು ಈಕಡೆಯಿಂದ ತಪ್ಪಿಸಿಕೊಂಡು ಓಡುತಿದ್ದೀರಿ!—ಈಕಡೆ ಬಂದ ಮೇಲೆ ನನ್ನ ಮನಸ್ಸೇ ನಾಚಿ ಅಣಕಿಸು ತಿದ್ದಿತು. ನಾನು ಹೇಡಿ—ಅಂಜುಬುರುಕ! ಸಂದರ್ಭಗಳನ್ನು ಇದಿರಿಸ ಲಾರದೆ ಈಕಡೆ ಓಡಿಬಂದವನು. ಆದರೆ ಕೊನೆಗೆ ಆ ಮಾತೇ ನನಗೆ ಮಾರ್ಗದರ್ಶಿಯಾಯಿತು. ಆದುದರಿಂದಲೇ ನನ್ನ ಈ ಪರೀಕ್ಷಾ ಕಾಲ ದಲ್ಲಿ ನಾನು ಅಂಜಲಿಲ್ಲ. ನಿನ್ನ ಹೆಸರನ್ನು ಧ್ಯಾನಿಸಿ ಧ್ಯಾನಿಸಿ ಧೈರ್ಯ ಗೊಂಡಿದ್ದೇನೆ. ನಿನ್ನ ರೂಪವು ನನ್ನ ಮುಂದೆ ಮುಂದೆ ನಡೆದು ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲೂ ನನ್ನನ್ನು ಹುರಿದುಂಬಿಸಿರುವುದು. ಆ ನಿನ್ನ ಉಪಕಾರವನ್ನು ನಾನು ಹೇಗೆ ತೀರಿಸಲಿ?

ಶಾರೀ—ಈಗ ನನ್ನ ಮನಸ್ಸು ಹೇಳುತ್ತಿದೆ—ಬಡವರ ಬಡವನಾಗಿ ರುವುದು ಎಷ್ಟು ಸಂತೋಷ! ನಮ್ಮ ಜಗದ್ಗುರು ಗಾಂಧೀಜೀಯ ಆ ಪರಮ

ಮಾತ್ರ—ಆ ದರಿದ್ರ ನಾರಾಯಣನ ಸೇವೆಯೊಂದೇ ಇಂದಿನ ತುಮುಲ ಜಗತ್ತಿಗೆ ತಾರಕ ಮಂತ್ರವಾಗಿದೆ! ಅಂತಹ ಭಾಗ್ಯ ನನಗೂ ಲಭಿಸಿತಲ್ಲ—ಇದೇ ನನ್ನ ಪುಣ್ಯ!

ನಿಜವಾಗಿಯೂ ನನ್ನ ಶಾರಿಯು ಇದಕ್ಕಾಗಿ ಅಳಲಾರಳೆಂದು ನಾನು ಖಚಿತವಾಗಿ ತಿಳಿದಿದ್ದೇನೆ. ನನ್ನ ಶಾರಿಯು ಅತ್ತರೆ ನಾನೆಲ್ಲಿ—ನನ್ನ ನಿರ್ಧಾರವೆಲ್ಲಿ?

ಹೆಚ್ಚೇನು ಬರೆಯಲಿ? ಮೊತ್ತ ಮೊದಲಿಗೆ ನಿನಗೆ ಕಾಗದ ಬರೆಯುವ ಈ ಸುಮುಹೂರ್ತಕ್ಕಾಗಿ ನಾನು ತುಂಬಾ ಸಂತುಷ್ಟನಾಗಿದ್ದೇನೆ. ಪೂಜ್ಯರಾದ ಕೇಶವಯ್ಯನವರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿಬಿಡು.

ಬೆಂಗಳೂರು, ಬಾಕಿ ಸಂಗತಿ ಮುಖತಃ

೨೮—೧—೧೯೪೩ ಇತಿ ನಿನ್ನವನಾದ—ಸ್ವಾಮಿ.

ಈ ಕಾಗದವು ಶಾರದೆಯ ಕೈಸೇರಿದಾಗ ಅವಳು ಬೆಚ್ಚಿಬಿದ್ದಳು. ಅವಳಿಗಾಗಿ ಯಾರೂ ಈ ತನಕ ಪತ್ರ ಬರೆವ ಕೃಪೆ ಮಾಡಿದ್ದಿಲ್ಲ. ಮತ್ತೆ ಇದು ಯಾರ ಕಾಗದ? ಏಕೆ ಬಂದಿದೆ? ಇವರಲ್ಲೇನು ಹುದುಗಿದೆ? ಎಂದು ಪಂಜರದೊಳಗಣ ಹುಲಿಯನ್ನು ಕಂಡು ಅಂಜಿದಂತೆ ಬೆದರಿದಳು. ಮತ್ತೆ ಆ ಕಡೆ ಈ ಕಡೆ ಲಕೋಟೆಯನ್ನು ತಿರುಗಿಸಿ ಅದರ ಮೇಲಣ ಬೆಂಗಳೂರಿನ ಮುದ್ರೆಯನ್ನು ಓದಿಕೊಂಡಳು. ಓದಿ ಚಿಗರೆಯಂತೆ ನೆಗೆದು ತೋಪಿನಕಡೆ ಓಡಿಹೋದಳು.

ಬಹಳ ಹೊತ್ತಿನ ತನಕ ಅವಳು ಹಿಂದೆ ಬರಲಿಲ್ಲ. ಹಿಂದೆ ಬಂದಾಗ ಕಣ್ಣು ಊದಿಕೊಂಡಿದ್ದಿತು. ಕೈಕಾಲುಗಳು ನಡುಗುತಿದ್ದುವು. ಪ್ರಾಯಶಃ ಅವಳ ಅಭ್ಯಾಸ ಬಲವು ಮಾತ್ರ ಅವಳನ್ನು ಹಿಂದಕ್ಕೆ ಮನೆಯಕಡೆ ಸೆಳೆದು ತಂದಿದ್ದಿತು.

ಅವಳ ಆದಿನದ ಅಸಂಬದ್ಧ ಸ್ವರೂಪವನ್ನು ಕಂಡು ಕೇಶವಯ್ಯನವರು ಕೇಳಿದರು— ಏನು ಶಾರದಮ್ಮ ತುಂಬಾ ಕಾತರಗೊಂಡಿದ್ದಿ? ಏನಾಯಿತು? ಮೈ ಚೆನ್ನಾಗಿಲ್ಲವೆ?

ಏನಿಲ್ಲ ಅಪ್ಪ, ಎಲ್ಲಿ? ಚೆನ್ನಾಗಿದ್ದೇನಲ್ಲ!

ಕೇಶವಯ್ಯನವರು ಮತ್ತೆ ಮಾತಾಡಲಿಲ್ಲ. ಆದರೆ ರಾತ್ರಿಯೆಲ್ಲ ಮಲಗಿದಾಗ ಹೊದಿಕೆಯೊಳಗೆ ಹೊರಳಾಡಿ ಶಾರದೆಯು ಸೇದೆಬಿಡುವುದನ್ನು ಕೇಳುತಿದ್ದರು. ಆದರೂ ಸುಮ್ಮನಿದ್ದರು. ಏಕೆಂದರೆ ಅದೇ ಅವರ ಸ್ವಭಾವ.

ಮರುದಿನ ಮುಂಜಾವ ಕೇಶವಯ್ಯನವರಿಗೆ ಇದರ ನೆಲೆಯನ್ನು ಕಂಡು ಹಿಡಿಯಲು ಕಷ್ಟವಾಗಲಿಲ್ಲ. ಕಾರಣ—ಆದಿನ ಬೆಳಿಗ್ಗೆ ರಾಯರ ಮನೆಯ ಕಡೆಯಿಂದ ಬಾರೀ ಗದ್ದಲವಾಗುತಿದ್ದಿತು. ಶ್ರೀನಿವಾಸರಾಯರು ತುಪಾಕಿ ಹೊಡೆದಂತೆ ತಮ್ಮ ಉಚ್ಚ ಕಂಠದಿಂದ ಒಂದೇಸವನೆ ಆರ್ಭಟಿಸುತಿದ್ದರು. ಆ ಆರ್ಭಟವು ಹಳ್ಳಿಮೀರಿ ಕಾಡಿನತ್ತ ಪ್ರತಿಧ್ವನಿಸುತಿದ್ದಿತು.

—ಆ ಮುಠ್ಠಾಳ! ಅವನ ಹಣೆಬರಹ ನನಗೆ ಈ ಮೊದಲೇ ತಿಳಿದಿತ್ತು. ಆ ಮೂರು ಕಾಸಿನ ರಾಜಬಂದಿ ನನ್ನ ಮಗನೇ ಅಲ್ಲ. ಇಂದಿನಿಂದ ನನಗೆ ಮಗನಿಲ್ಲವೆಂದೇ ತಿಳಿದು ಕೊಂಡಿದ್ದೇನೆ—

ಜಮೀನ್ದಾರರ ಮಗನಿಗೆ ಆರು ತಿಂಗಳ ಗಾಂಧಿ ಶಿಕ್ಷೆಯಾಯಿತೆಂದು ಒಂದು ಕ್ಷಣದೊಳಗೆ ಊರಿಗೆ ಊರೇ ಮಾತಾಡತೊಡಗಿತು. ಬೆಂಗಳೂರಿನಿಂದ ರಾಯರಿಗೆ ಬೇಕಾದವರು ಕೊಟ್ಟ ತಂತಿ ಆಗತಾನೇ ಬಂದಿತೆಂದು ಜನರು ಆಡಿಗೊಂಡರು.

ಅದನ್ನು ಕೇಳಿ ಕೇಶವಯ್ಯನವರು ತಲೆದೂಗಿ ತನ್ನಷ್ಟಕ್ಕೆ ನುಡಿದರು —ಪ್ರವಾಹದಲ್ಲಿ ಯಾವುದು ತಾನೇ ಕೊಚ್ಚಿಹೋಗುವುದಿಲ್ಲ? ಅದಕ್ಕಾಗಿ ಅಳಬೇಕಾಗಿಲ್ಲ. ಹೆಮ್ಮೆ ಪಡಬೇಕು. ನಮ್ಮವರ ಕಡೆಯಿಂದ ಇಷ್ಟಾದರೂ ಸೇವೆಸಂದಿತಲ್ಲ—ಎಂದು ಅಭಿಮಾನ ಪಡಬೇಕು. ನನಗೆ ಈ ಮೊದಲೇ ಗೊತ್ತು—ಕೃಷ್ಣಸ್ವಾಮಿ ಚಲೋ ಹುಡುಗನಪ್ಪ ಚಲೋ ಹುಡುಗ! ಸಾರ್ಥಕವಾಯಿತು. ಆ ತಂದೆಯ ಜನ್ಮ ಸಾರ್ಥಕವಾಯಿತು!

ಶಾರದೆಯು ಒಳಗಡೆಯಿಂದ ನಿನ್ನೆಯ ಕಾಗದವನ್ನು ತಂದು ತಂದೆಯ ಮುಂದಿಟ್ಟಳು. ಕೇಶವಯ್ಯನವರು ಅದರ ಮೇಲ್ವಿಳಾಸವನ್ನು ಓದಿ

—ಸಾಕು. ಇದು ನಿನ್ನ ಕೂಡೇನೇಯಿರಲಿ! ನನಗೆ ಇದು ಬೇಕಾಗಿಲ್ಲ. ನನಗೆ ನನ್ನ ಶಾರದಮ್ಮನ ಮೇಲೆ ತುಂಬಾ ಭರವಸೆಯಿದೆ–ಎಂದು ಅದನ್ನು ಅವಳ ಕೈಗೇ ಹಿಂದೆ ಕೊಟ್ಟರು.

ಶಾರದೆಯು ಮೆಲ್ಲನೆ–ಅದರಲ್ಲಿ ನಿಮಗೆ ಸಾಷ್ಟಾಂಗ ನಮಸ್ಕಾರವನ್ನು ತಿಳಿಸಲು ಬರೆದಿದೆ—ಎಂದಳು.

ಸರಿ—ಬಂದಿತು. ನನ್ನ ಆಶೀರ್ವಾದವು ಯಾವಾಗಲೂ ಅವನ ಕಡೆ ಯಿದೆ. ನೀನು ಏನೂ ಯೋಚಿಸಬೇಡ. ಏನು ಆಗಬೇಕೋ ಅದು ಆಗಿಯೇ ತೀರುತ್ತದೆ. ಅದೇ ಕಾಲಮಹಿಮೆ. ಅವರೇ ಕ್ರಾಂತಿವೀರರು! ಹೊಸ ಯುಗದ ಪ್ರವರ್ತಕರು!

ಶಾರದೆಯು ಕಾಗದವನ್ನು ಒಳಗೆ ಕೊಂಡೊಯ್ದು ಭಕ್ತಿಭಾವದಿಂದ ಎದೆಗೆ ಒತ್ತಿಕೊಂಡು ತನ್ನ ಪೆಟ್ಟಿಗೆಯ ಸುರಕ್ಷಿತವಾದ ಭಾಗದಲ್ಲಿರಿಸಿ ಕೈಮು ಗಿದು ಪ್ರಾರ್ಥಿಸಿದಳು—ದೇವರೇ! ನನ್ನ ಸ್ವಾಮಿಯನ್ನು ಕಾದು ಸುಖವಾಗಿ ಮನೆಗೆ ತಂದುಬಿಡು. ಅವರ ಒಂದು ಕೂವಲಿಗೂ ಹಾನಿಬರವಂತೆ ಕಾಪಾಡು. ನೀನೇ ಅವರ ತಾಯಿ—ತಂದೆ. ನೀನಲ್ಲದೆ ಮತ್ತೆ ಯಾರು ಗತಿ? ಎಂದು ಅಂಗಲಾಚಿ ಬೇಡಿ ಕಣ್ಣೀರು ಸುರಿಸಿದಳು.

ಕುಸುರು ೫ ಧರ್ಮದ ದುಂದುಗಾರಿಕೆ

ಆಷಾಢ ಮಾಸದ ಪ್ರಥಮದಿನಗಳು. ಪ್ರಪಂಚದ ಮನೋಭಾವನೆಯೇ ಮೂರ್ತಿಮತ್ತಾದಂತೆ ಆಕಾಶದತ್ತ ತುಂಬು ಮೋಡಗಳು ತೆರೆಮುಚ್ಚಿ ಕತ್ತಲು ತುಂಬುತಿದ್ದುವು. ಹಳ್ಳಿ ಹಳ್ಳಿಗರು ಆಶಾದೃಷ್ಟಿಯಿಂದ ಮೇಲೆ ನೋಡಿದರು. ಏರುಮರದ ತುತ್ತತುದಿಯ ಚಾತಕವು ಆ ಕಡೆ ನೀಳ್ಕರಿಸಿತು. ಕವಿ ಹೃದಯವು ಭಾವದೀಪ್ತಿಯಿಂದ ಮೋಡದತ್ತ ಕಣ್ಣು ಹಾಯಿಸಿ ಕಾತರತೆಯಿಂದ ಕನವರಿಸಿತು—

—ತಸ್ಮಿನ್ನದ್ರೌ ಕತಿಚಿದಬಲಾ ವಿಪ್ರಯುಕ್ತಃ ಸ ಕಾಮೀ
ನೀತ್ವಾಮಾಸಾನ್ ಕನಕವಲಯಭ್ರಂಶರಿಕ್ತಃ ಪ್ರಕೋಷ್ಠಃ
ಆಷಾಢಸ್ಯ ಪ್ರಥಮ ದಿವಸೇ ಮೇಘಮಾಶ್ಲಿಷ್ಟ ಸಾನುಂ
ವಪ್ರಕ್ರೀಡಾ ಪರಿಣತಗಜಪ್ರೇಕ್ಷಣೀಯಂ ದದರ್ಶ—

ನಾಲ್ಕು ತಿಂಗಳುಗಳ ಮೇಲೆ ಶಾರದೆಯ ಮೌನ ಭಾವನೆಯು ಮುಖರಿತವಾಗಿ ಗುಣುಗುಟ್ಟಿತು.

ಮನಸು ಮಂಜುಳವಾಗಿ ಹಾಡಬೇಕೆಂಬಾಸೆ
ಆಸೆ ಬಿಗಿದಾ ಬೀಣೆ ಮಿಡುಕಲಿಲ್ಲ
ದೇಶ ದೇಶದ ಸುತ್ತ ಕವಿದ ಕಟ್ಟಿರುಳಿನಲಿ
ಹುಗಿದ ಹೊಂಬೆಳಗು ಕೈಗೆಟಕಲಿಲ್ಲ!—

ಈ ಮಾವಿನ ತೋಪಿನಲ್ಲಿ ನಿಂತು ಕೆಳಗಡೆಯ ಕಾಲುವೆಯತ್ತ ನೋಡು ತಿದ್ದಂತೆ ಅವಳ ಹೃದಯವೂ ಉಕ್ಕಿ ತೆರೆಯೆದ್ದು ಮಂಜು ಕವಿದು ಕಂಬನಿ ಯುದುರಿತು. ಅಂದು ಕೃಷ್ಣಸ್ವಾಮಿಯೆಂದ ಮಾತು—ಮಕ್ಕಳಿಗೆ ತಾಯಿ ಇಲ್ಲದಿರುವುದು ಒಂದು ಶಾಪ!–ಅದನ್ನು ಸುಯ್ಯನೆ ತೀಡಿದ ತಂಪುಗಾಳಿಯು ನೆನಪುಗೊಟ್ಟಿತು. ತಂದೆಯು ಗುಡುಗಾಡಬಲ್ಲನು. ಅಂತಹ ಗುಡುಗಾಟದಿಂದ ಬೆಚ್ಚಿದ ಮನಸ್ಸಿಗೆ ತಂಗಾಳಿಯಂತೆ ತಂಪು ನೀಡಲು ತಾಯಲ್ಲದೆ ಮತ್ತಾರು? ಆ ನೆನಪಿನೊಂದಿಗೆ ಅವಳ ಹೃದಯವೂ ತುಂಬಿಬಂದು ಪ್ರತಿ ಸ್ಪಂದಿಸಿತು. ತಾನೇನೂ ತಾಯಲ್ಲ. ಆದರೆ ತಾಯಿಯ ಹೆಣ್ತನವು ತನ್ನಲ್ಲಿದೆ. ಅಂತಹ ಹೆಣ್ತನದ ಸೌಹಾರ್ದವೇ ಸ್ವಾಮಿಯನ್ನು ಕಾಯಲಿ–ಎಂದು ನಿಟ್ಟುಸಿರು ಬಿಟ್ಟಳು.

ನಿಟ್ಟುಸಿರುಬಿಟ್ಟು ಹಿಂದಿರುಗುವ ವೇಳೆ ಉತ್ತರ ದಿಕ್ಕಿನಿಂದ ರಣಗಳೆಯ ಶಬ್ದವಾಯಿತು. ಕೇಶವಯ್ಯನವರು ಆ ದಿಕ್ಕಿನಿಂದ ಓಡಿಬರುತಿದ್ದ ಹಳ್ಳಿಗನೊಬ್ಬನೊಡನೆ ಕೇಳಿದರು—

ಏನದು ಗದ್ದಲ?

ಯಾರೋ ಸ್ವಾಮಿಗಳು ಬಂದರಂತೆ!

ಯಾವ ಸ್ವಾಮಿ?

ಶಾರದೆಯು ಆಶ್ಚರ್ಯದಿಂದ ಅವನ ಮುಖ ನೋಡುತ್ತ ನಿಂತಳು.

ಯಾರೊ ಮಠದವರಂತೆ—

ಓ—ಮಠದ ಸ್ವಾಮಿಗಳು! ಬಂದಾರಲ್ಲ ನಮಗೇನು ಬಂತು?—ಎಂದರು ಕೇಶವಯ್ಯನವರು. ಆಳು ಜಮಿೀನ್ದಾರರ ಮನೆಯ ಕಡೆ ಓಡುತ್ತ ಹೋದನು.

ಆ ದಿನ ಸಂಜೆಯೇ ದೇವಸ್ಥಾನದತ್ತ ನಗಾರಿ ಹೊಡೆದಾಗ ಸ್ವಾಮಿಗಳ ಬರವಿನ ಸುದ್ದಿ ಹಳ್ಳಿಹಳ್ಳಿಗೇ ಹಬ್ಬಿಹೋಯಿತು. ಆ ತಾಳ ಆ ಗಂಟೆ ಆ ಸಂಕೀರ್ತನೆ ಇವುಗಳ ಗದ್ದಲ ರಣಗಳೆಯ ಕೂಗು ಈ ಮೂಲೆಯಿಂದ ಆ ಮೂಲೆಯ ತನಕ ಅದನ್ನೇ ಸಾರಿಸಾರಿ ಹೇಳಿತು.

ಮರುದಿನ ಮುಂಜಾವವೇ ಹಳ್ಳಿಗರೆಲ್ಲ ಗುಂಪು ಗುಂಪಾಗಿ ಆ ಕಡೆ ದಾರಿಹಿಡಿದಿದ್ದರು. ಕಾರಣ—ಧರ್ಮದ ಹೆಸರಿನಲ್ಲೇ ಆಕರ್ಷಣೆಯಿದೆ. ಧರ್ಮಕ್ಕೆ ವಿಚಾರವಿಲ್ಲ. ಆದುದರಿಂದ ವಿಚಾರವಿಲ್ಲದ ಜನಕ್ಕೆ ಧರ್ಮವೇ ಬೇಕಿದ್ದಿತು. ಯಾರ ಮಾತನ್ನೂ ನಂಬದಾತ ಧರ್ಮದ ಮಾತನ್ನು ನಂಬಿರುವನು. ಯಾರಿಗೂ ಚಿಕ್ಕಾಸು ಬಿಡದ ಕಡುಲೋಭಿ ಧರ್ಮದ ಕೈಯಲ್ಲಿ ಜುಟ್ಟು ಕೊಟ್ಟಿರುವನು. ಧರ್ಮಕ್ಕೂ ಸ್ವಾರ್ಥಕ್ಕೂ ನಿಕಟ ಸಂಬಂಧವಿದೆ. ಯಾವನೂ ತುಂಬಿಕೊಡಲಾರದ ಸ್ವಾರ್ಥವನ್ನು ಧರ್ಮವು ತುಂಬಿಕೊಟ್ಟಿದೆ. ನಿನ್ನನ್ನು ನೇರವಾಗಿ ಸ್ವರ್ಗಕ್ಕೆ ಕಳುಹುವೆನೆಂದು ಯಾವಾತನು ಧೈರ್ಯವಾಗಿ ಹೇಳಬಲ್ಲ? ಹೇಳಿದರೆ ಯಾವಾತನು ನಂಬಬಲ್ಲನು? ಆದರೆ ಧರ್ಮವು ಹಾಗೆ ಹೇಳಿದೆ. ಅದನ್ನು ಜನ ನಂಬಿದೆ! ಅಂತಹ ಪುರಾಣ ಧರ್ಮಗಳ ಮರೆಯಲ್ಲಿ ನಿಂತು ಸ್ವಾರ್ಥ ಜಗತ್ತು ಎಲ್ಲರನ್ನೂ ಸಮಜಾಯಿಸಿ ಸೂರೆಗೊಂಡಿದೆ. ದುಃಖೀ ಜನಾಂಗದ ರೂಪರೇಖೆಗಳನ್ನು ಒಮ್ಮೆಯಾದರೂ ಕಣ್ಣೆತ್ತಿನೋಡದಾತನು ಧರ್ಮದ ಹೆಸರಿನಿಂದ ಪ್ರಪಂಚವನ್ನು ತಿದ್ದಲು ಹೊರಟಿರುವನು. ಸಮಾಜನೀತಿಯ ಒಂದೇ ಒಂದು ನೂಲೆಳೆಯನ್ನು ರಕ್ಷಿಸದಾತನು ಆ ಧರ್ಮದ ಹೆಸರಿನಿಂದಲೆ ಜಗದ್ಗುರುವಾಗಿರುವನು. ಇಂತಹ ಧರ್ಮವು ಯಾರಿಗೆ ಬೇಕಾಗಿಲ್ಲ? ಕೆಲಸ ಮಾಡದ ಸೋಮಾರಿಗೆ ಬೇಕು. ಊರೂರು ಸುತ್ತುವ ಮೈಗಳ್ಳನಿಗೆ ಬೇಕು. ಬೇರೆಯವರನ್ನು ವಂಚಿಸುವ ಮೋಸ ಜೀವಿಗೆ ಬೇಕು. ಈ ಧರ್ಮದ ಪವಿತ್ರ ಹೆಸರಿನಿಂದ ನಡೆದಷ್ಟು ಕೊಲೆ ಸುಲಿಗೆ ಹಾದರಗಳು ಇನ್ನಾವುದರಿಂದಲೂ ನಡೆದಿಲ್ಲ. ಆದರೂ ಧರ್ಮ—ಆ ಹೆಸರಿನಲ್ಲೇ ಆಕರ್ಷಣೆಯಿದೆ! ಅದು ಪ್ರಪಂಚದ ಪತಂಗಗಳಿಗಿಟ್ಟ ದೀಪದಂತೆ ಜಗತ್ತಿನ ಸಾತ್ವಿಕ ಜೀವಿಗಳಿಗಿಟ್ಟ ಗಾಳದಂತೆ ಸತ್ಯ ಸುಂದರವಾಗಿದೆ—ನಿತ್ಯ ಗಹನವಾಗಿದೆ! ಅದರ ಹೆಸರಿಟ್ಟು ಅದರ ಮುಸುಕು ಹೊದಿಸಿ ಅದರ ಬಾವುಟವೇರಿಸಿ ದಿಗ್ವಿಜಯಗೊಂಡ ಮಹಂತರು ಮಹಾರಾಜರಿಗೂ ಸರಿ ಮಿಗಿಲೆನಿಸಿರುವರು. ಆ ಸಲುವಾಗಿ ಶ್ರೀಮತ್ ೧೦೮ ಧರ್ಮ ಪ್ರವಚನ ತೀರ್ಥ ಶ್ರೀಪಾದಂಗಳವರು ಸಂಚಾರಾರ್ಥವಾಗಿ ಆ ಹಳ್ಳಿಯ ದೇವಾಲಯದಲ್ಲಿ ತಳವೂರಿರುವರು. ತಮ್ಮ ಅಗಾಧವಾದ ೨೦೮ ರಾತಲಿನ ಪವಿತ್ರವಾದ ದೇಹಭಾರವನ್ನು ಹೊತ್ತು ಧರ್ಮ ಪ್ರಚಾರಾರ್ಥವಾಗಿ ಆ ಹಳ್ಳಿಗೆ ಆಗಮಿಸಿರುವರು!

ಮರುದಿನ ಸಂಜೆಯೇ ಶ್ರೀಶ್ರೀಗಳವರು ಸಭೆಕೂಡಿಸಿ ಅಪ್ಪಣೆ ಕೊಡಿಸಿದರು—

ಧರ್ಮಏವ ಹತೋಹಂತಿ ಧರ್ಮೋರಕ್ಷತಿ ರಕ್ಷಿತಃ

ತಸ್ಮಾದ್ಧರ್ಮಂ ನತ್ಯಜೇಮ ಮಾನೋಧರ್ಮೋಹತೋವಧೀತ್—

—ಕೃತಯುಗದಲ್ಲಿ ನಾಲ್ಕು ಕಾಲುಗಳಲ್ಲಿ ನಿಂತಿದ್ದ ಧರ್ಮಪಶುವು ತ್ರೇತಾಯುಗದಲ್ಲಿ ಮೂರು ಕಾಲುಗಳಿಂದಲೂ ದ್ವಾಪರದಲ್ಲಿ ಎರಡುಕಾಲುಗಳಮೇಲೂ ಈ ಕಲಿಯುಗದಲ್ಲಿ ಒಂಟಿಕಾಲಿನ ಮೇಲೂ ನಿಂತಿರುತ್ತದೆ. ಕಲಿ ಪ್ರಪಂಚದ ಪಾಪಭಾರವು ಹೆಚ್ಚಿ ಧರ್ಮವು ನಿಶ್ಶೇಷ್ಟವಾಗುತ್ತಿದೆ. ವರ್ಣ ಸಾಂಕರ್ಯಗಳಿಂದ ಶಾಸ್ತ್ರಗಳ ತಿರಸ್ಕಾರದಿಂದ ಧರ್ಮವು ನಾಶವಾಗುತ್ತಿದೆ. ಕರ್ಮಲೋಪ ವಾಕ್ ಲೋಪ ಇವುಗಳಿಂದಾಗಿ ದುಃಖವು ಹೆಚ್ಚಿ ಶಾಶ್ವತ ಸುಖವು ಸಂಪೂರ್ಣವಾಗಿ ನಶಿಸುತ್ತಿದೆ. ಯತ್ ಸರ್ವಂ ಸುಖಮಿಚ್ಛಂತೇ—ಎಲ್ಲರೂ ಸುಖವೇ ಸಿಗಬೇಕೆಂದು ಹವಣಿಸುತಿದ್ದಾರೆ. ಆದರೆ ಪಾಪ ಪ್ರವೃತ್ತಿಯಿಂದ ಎಂದಿಗೂ ಸುಖವು ಸಿಗಲಾರದು. ಅಂತಹ ಸುಖವು ಅಭಿಭವ ಮಾತ್ರ. ನಿತ್ಯಸುಖವು ಸಂತೆಯ ವಸ್ತುವಿನಂತೆ ಸಿಗಲಾರದು. ಅದು ಪರಮಾತ್ಮನ ಸೇವೆಯಿಂದ–ಭಕ್ತಿಯಿಂದ ಮಾತ್ರ ಲಭ್ಯವಾಗಿದೆ. ಆ ಸುಖವೇ ಪರಮಾತ್ಮನ ದಯೆ! ಅದೇ ಧರ್ಮ! ಅದನ್ನೇ ನಮ್ಮ ಮಠ ಗುರುಗಳಾದ ಆಚಾರ್ಯವರೇಣ್ಯರು ಅಪಾರವಾದ ತಮ್ಮ ತಪಃ ಶಕ್ತಿಯಿಂದ ಸಾಧಿಸಿ ಮೂಢಜನಾಂಗದ ಉದ್ಧಾರಕ್ಕಾಗಿ ಜಗತ್ತಿಗೆ ಒಪ್ಪಿಸಿಕೊಟ್ಟಿದ್ದಾರೆ. ಜನರನ್ನು ಅಜ್ಞಾನದಿಂದ ಪಾರುಗೊಳಿಸುವುದಕ್ಕಾಗಿ ಧರ್ಮವು ಪ್ರವರ್ತಮಾನವಾಗಿದೆ. ಧರ್ಮವೇ ಜಗತ್ತಿನ ಮೂಲ. ಧರ್ಮದ ನಾಶವೇ ಜಗತ್ತಿನ ನಾಶ! ಅದಕ್ಕಾಗಿಯೇ ನಾವು ಶ್ರೀ ಪರಮಾತ್ಮನ ಪ್ರೇರಣೆಯಿಂದ ಈ ಕಡೆ ಬಂದು ನಮ್ಮ ಚಾತುರ್ಮಾಸ್ಯಾವಧಿಯನ್ನು ಇಲ್ಲೇ ತೀರಿಸಿ ಸಂಸಾರಿಕ ಜನರಲ್ಲಿ ಭಗವದ್ಭಕ್ತಿ ಹೆಚ್ಚಿಸುವ ಸಲುವಾಗಿ ದಿನವಹಿ ಪುರಾಣ ಪ್ರವಚನ-ಹರಿಕಥೆ-ಉಪನ್ಯಾಸಗಳ ಸಪ್ತಾಹವನ್ನು ತೊಡಗಬೇಕೆಂದು ಸಂಕಲ್ಪಿಸಿರುವೆವು. ಅಲ್ಲದೇ ನಮ್ಮ ಮಠದ ಪಾಠಪ್ರವಚನಗಳಿಗಾಗಿ ಇಲ್ಲಿ ವೈದಿಕ ಧರ್ಮಶಾಲೆಯನ್ನು ಆರಂಭಿಸಬೇಕೆಂದೂ ಯೋಚಿಸಿರುವೆವು. ಇದಕ್ಕಾಗಿ ಎಲ್ಲಾ ಧಾರ್ಮಿಕ ಶ್ರದ್ಧಾಳುಗಳು ಮುಂದೆಬಂದು ನೆರವಾಗಬೇಕೆಂದು ಅಪೇಕ್ಷಿಸುವೆವು—

ಶ್ರೀಗಳವರ ಉದ್ದೇಶವನ್ನು ಎಲ್ಲರೂ ಹೊಗಳಿದರು. ಅವರ ಧಾರ್ಮಿಕ ಪ್ರವೃತ್ತಿಯನ್ನು ಮನಸಾರೆ ಕೊಂಡಾಡಿದರು. ಉಪನ್ಯಾಸ ಮುಗಿಯಿತು. ಹರಿಕಥೆಗೆ ಮೊದಲಾಯಿತು. ಓಹೋ!—ಏನು ಜನ! ಏನು ಭಕ್ತಿ! ಹರಿದಾಸರ ವಾಕ್ಚಾತುರ್ಯಕ್ಕೆ ಹಾಡುಗಾರಿಕೆಗೆ ಹಳ್ಳಿಗೆ ಹಳ್ಳಿಯೇ ಮೆಚ್ಚಿಹೋಯಿತು! ಹಳ್ಳಿಯೆಂದೇನು? ಪೇಟೆಯಿಂದಲೂ ಜನರ ಗುಂಪು ಗುಂಪೇ ಬಂದು ಕೂಡತೊಡಗಿತು.

ನಾಲ್ಕು ದಿನಗಳ ಮೇಲೆ ಕೇಶವಯ್ಯನವರು ಮಗಳೊಡನೆ ನಸು ನಗುತ್ತ ಹೇಳಿದರು—ಏನಿದು ತಮಾಷೆ! ನೋಡು—ಜಗತ್ತು ಹೀಗೆಯೇ ಸಾಗುತ್ತಿದೆ. ಡಂಭಾಚಾರವಿಲ್ಲದೆ ಧರ್ಮವಿಲ್ಲ. ಧರ್ಮಕ್ಕೆ ಈ ತಲೆಪಟ್ಟಿಗಳೆಲ್ಲಾ ಬೇಕಾಗಿಲ್ಲ. ಆದರೆ ಮನುಷ್ಯನಿಗೆ ಸ್ವಾರ್ಥಕ್ಕಾಗಿ ಬೇಕಾಗಿದೆ ಈ ವ್ಯವಸಾಯ. ಸನ್ಯಾಸಿಗೆ ತನ್ನ ಆತ್ಮೋದ್ಧಾರಕ್ಕಾಗಿ ಯಮ ನಿಯಮ ಪ್ರಾಣಾಯಾಮಗಳು ಬೇಕಾಗಿಲ್ಲ — ಬೇರೆಯವರಿಗಾಗಿ ಉಪನ್ಯಾಸವು ಬೇಕಾಗಿದೆ. ಇಡೀ ರಾತ್ರಿ ಉಪದೇಶ ಮಾಡುವ ಹರಿದಾಸನಿಗೆ ಭಕ್ತಿಯು ಬೇಕಾಗಿಲ್ಲ—ಮನೋರಂಜನೆಯು ಬೇಕಾಗಿದೆ. ಬೆಳಗ್ಗಿನ ಪುರಾಣಿಕನಿಗೆ ಪುರಾಣವು ಆಚರಣೆಗಾಗಿ ಬೇಕಾಗಿಲ್ಲ—ಇದಿರಿನ ಹರಿವಾಣ ತುಂಬುವುದಕ್ಕಾಗಿ ಮಾತ್ರ! ಜನರಿಗೆ ಇದಾವುದೂ ಬೇಕಾಗಿಲ್ಲ—ಮಧ್ಯಾಹ್ನದ ಮೃಷ್ಟಾನ್ನ ಭೋಜನ ಮಾತ್ರ!

ಎನ್ನುತಿದ್ದಂತೆ ಮಠದ ಕಡೆಯಿಂದ ಒಬ್ಬನು ಬಂದು—ನಮಸ್ಕಾರ ಕೇಶವರಾಯರೆ! ಏನು? ನೀವು ನಮ್ಮತ್ತ ಕಡೆ ಬಂದಂತೆಯೇಯಿಲ್ಲ. ನಮ್ಮ ಸ್ವಾಮಿಗಳವರು ಈ ದಿನಾಚರಣೆಗಳ ಉಪಯೋಗ ಎಲ್ಲರಿಗೂ ಸಿಕ್ಕಿ ಸಾರ್ಥಕವಾಗಬೇಕೆಂದು ಅಪೇಕ್ಷೆಯಲ್ಲಿದ್ದಾರೆ. ಅದಕ್ಕಾಗಿ ನಿಮ್ಮನ್ನು ಈ ಮಧ್ಯಾಹ್ನ ಪ್ರಸಾದಕ್ಕೆ ಬರಲೇಬೇಕೆಂತ ತಿಳಿಸಲಿಕ್ಕೆ ಹೇಳಿದ್ದಾರೆ. ಎಷ್ಟಾದರೂ ದೇವರ ಪ್ರಸಾದ ದೊಡ್ಡದು. ಅಲ್ಲದೆ—ನಿಮ್ಮ ಮನೆಯವರನ್ನೂ—ಎಂದು ಶಾರದೆಯ ಕಡೆ ಸಾಕೂತವಾಗಿ ಕಣ್ಣು ಹಾಕಿ—ಇವು ನಿಮ್ಮ ಮಗಳಿರಬಹುದು. ಅವರನ್ನೂ ಅವಶ್ಯವಾಗಿ ಕರೆದುಕೊಂಡು ಬರಲೇ

ಬೇಕು. ನಾನಿನ್ನು ಬರಲೆ! ನಮಸ್ಕಾರ—ಎಂದು ಮತ್ತೊಮ್ಮೆ ಶಾರದೆಯ ಕಡೆ ವಕ್ರದೃಷ್ಟಿ ಬೀರಿ ಹೊರಟು ಹೋದನು.

ಅವನು ಹೋದ ಮೇಲೆ ಕೇಶವಯ್ಯನವರು ನಸುನಕ್ಕು—ಇದೇ ನಮ್ಮ ಧರ್ಮ! ಹೀಗಿದ್ದರೆ ಇವರ ಪರಿಣಾಮ ಎಂದೂ ನೆಟ್ಟಗಾಗಲಾರದು-ಎಂದರು.

ಆದರೆ ಊರಜನರು ಅದನ್ನು ಆ ರೀತಿಯಾಗಿ ಗ್ರಹಿಸಲಿಲ್ಲ. ಓಹೊ!-ಏನು ಸಂಭ್ರಮವಪ್ಪ ಏನು ಸಂಭ್ರಮ!—ಎಂದು ತಲೆದೂಗುತಿದ್ದರು. ಆದುದರಿಂದಲೇ ಶ್ರೀಗಳವರ ಭಂಡಾರವೂ ಬೇಕಾದಂತೆ ತುಂಬುತಿದ್ದಿತು. ಮೂಡುಮನೆ ತಿಪ್ಪಾಜೋಯಿಸ ಈ ದಿನದ ಸಮಾರಾಧನೆ ತನ್ನದೆಂದ. ತೆಂಕುತೋಟದ ಶ್ಯಾಮಶಾಸ್ತ್ರಿ ಈ ಹರಿಕಥೆ ತನ್ನ ಸೇವೆಯೆಂದ. ಮತ್ತೊಬ್ಬನ ಲೆಕ್ಕದಿಂದ ಭಾಗವತ ಪುರಾಣವು ಸಾಂಗವಾಯಿತು. ಹೀಗೆಂದು ಧರ್ಮದ ದುಂದುಗಾರಿಕೆಯು ನಡೆದೇಯಿದ್ದಿತು. ಕಾರಣ—ದೇವಸ್ಥಾನದ ಸುತ್ತಲಿನ ಬ್ರಾಹ್ಮಣ್ಯಕ್ಕೆ ಅದೊಂದು ದೊಡ್ಡ ಮೋಜಾಗಿದ್ದಿತು.

ಕುಸುರು ೬ ಹಾವಿನ ಹೆಜ್ಜೆ

ಥು—ಅಪ್ರಯೋಜಕ ರಂಡೇದು! ಯಾಕೋ ನಿನಗೆ ಈ ಮಠದ ಕೆಲಸ? ಪಾರುಪತ್ತ್ಯೇದಾರ-ಪಾರುಪತ್ತ್ಯ! ಇಂತಹ ಪಾರುಪತ್ತ್ಯ ಯಾರೂ ಕೊಟ್ಟರೆ ನೋಡಿಯಾರು! ಇಲ್ಲೇನು ಜನ ಇಲ್ಲಂತ ಇಂತಹ ದೊಡ್ಡ ಪಾರುಪತ್ತ್ಯ ನಿನಗೆ ಕೊಟ್ಟದ್ದೇವೆಂತ ತಿಳಿದಿದ್ದೀಯ? ಇಲ್ಲಿಗೆ ಬಂದು ಇಷ್ಟು ದಿವಸವಾಯಿತಲ್ಲ—ಒಂದೇ ಒಂದು ಸಾಧಿಸಲಿಕ್ಕೆ ನಿನ್ನಿಂದ ಸಾಧ್ಯವಾಯಿತೊ?—ಎಂದು ಶ್ರೀ ಶ್ರೀಗಳವರು ಮಠದ ಪಾರುಪತ್ತ್ಯೇದಾರ ವಿಠಲಾಚಾರ್ಯರನ್ನು ತಮ್ಮ ಖಾಸಗಿ ಕೋಣೆಯಲ್ಲಿ ಅಬ್ಬರಿಸುತಿದ್ದರು.

ವಿಠಲಾಚಾರ್ಯರು ಕೈಮುಗಿದು--ಇಲ್ಲ ಸ್ವಾಮಿ. ಇಲ್ಲಿ ಎಲ್ಲಾ ಚೆನ್ನಾಗಿಯೇ ಕೆಲಸ ನಡೆದಿದೆ. ಜಮೀನ್ದಾರರಲ್ಲಿಗೂ ನಿನ್ನೆ ಹೋಗಿ ಬಂದಿದ್ದೆ. ಅವರೂ ತಮ್ಮನ್ನು ಕರೆಸಿಕೊಳ್ಳುವ ಪ್ರಸ್ತಾಪದಲ್ಲಿದ್ದಾರೆ ಮತ್ತೆ-

ಮತ್ತೆ ನೀನೊಂದು ಕತ್ತೆ! ಹೇಳಿದರೆ ತಿಳಿಯದವರ ಹಾಗೆ ಮಾತು ಮರೆಸುತ್ತಾನೆ! ನಮಗೇನು ಊರಕಡೆ ಜಮೀನು ಹಣಕಾಸು ಇಲ್ಲಂತ ಅಡ್ಡಾಡುತ್ತ ಹಳ್ಳಿ ಹಳ್ಳಿಗೆ ಬಂದಿದ್ದೇವೆಂತ ತಿಳಿದಿದ್ದೀಯ? ನಮಗೆ ಬೇಕಾದುದು ಬರೇ ಕಾಂಚನವಲ್ಲ—ಕಾಂಚನ ಪುಷ್ಪ! ಪುಷ್ಪ ಅದರ ಮಕರಂದ ಸಹ! ಈಗಲಾದರೂ ತಿಳೀತೆ?

ಈಗ ತಿಳೀತು ಬುದ್ಧಿ. ಆದರೆ—

ಆದರೆ ಗೀದರೆ ಬೇಡ. ನಿನ್ನಿಂದ ಸಾಧಿಸಲಿಕ್ಕೆ ಬರುತ್ತದೋ ಇಲ್ಲವೋ ಹೇಳಿಬಿಡು.

ಹಾಗಲ್ಲ ಬುದ್ಧಿ. ಎಂದರೆ ಇದು ಚಿಕ್ಕ ಊರು. ಗೊಂದಲಹತ್ತಿದರೆ ಬಹಳ ತೊಂದರೆ. ದೊಡ್ಡ ದೊಡ್ಡ ಶಹರು ಪ್ರಾಂತ್ಯವಾದರೆ ಹೇಗಾದರೂ ತಿಳಿಯುವುದಿಲ್ಲ. ಇಲ್ಲಿ ಇರುವುದೇ ಹತ್ತು ಮಂದಿಯಾದರೆ ಹೇಗೆ ಸುಧಾರಿಸಬೇಕೂಂತ ತಿಳಿಯುವುದಿಲ್ಲ.

ತಿಳಿಯದಿದ್ದರೆ ನಮ್ಮ ಗುಂಡಾಚಾರಿಯ ಹತ್ತರ ಸ್ವಲ್ಪ ಕಲಿತುಕೋ.

ಅಲ್ಲ ಬುದ್ಧಿ. ಇದು ಜಮೀನ್ದಾರರ ಊರು. ಅವರಿಗೆಲ್ಲಾದರೂ ಸೋವು ಹತ್ತಿದರೆ ಬಹಳ ರಗಳೆ. ಅವರ ಸಂಗತಿಯೇ ಹುಲಿಯ ಹಾಗೆ! ಮತ್ತೆ ಹಳ್ಳಿಯ ಹೆಂಗಸರೂ ಏನೂ ಪರಿಷ್ಕಾರವಲ್ಲ. ಬಹಳ ಸಪ್ಪೆ. ಅವರ ಕೂಡೆ ಮಾತನಾಡುವುದೇ ಕಷ್ಟ. ಅವರಿಗೆ ಹಣಬೇಡ—ಊಟಬೇಡ—ಸುಖಬೇಡ—ಏನೂ ಬೇಡ! ಮತ್ತೆ ನಾವೆಲ್ಲಾದರೂ ಹೊರಗೆ ಚೆಲ್ಲಿ ಕೊನೆಗೆ—

ಹೋಗೋ! ನನಗೆ ತಿಳಿಸಲಿಕ್ಕೆ ಹೊರಟಿದ್ದಾನೆ. ನಾನೇನೂ ಮಗುವಲ್ಲ. ನಿನ್ನಿಂದ ಸಾಧ್ಯವಿಲ್ಲಾಂತ ಹೇಳು. ನಿನ್ನಿಂದ ಪೂರೈಸದಿದ್ದರೆ ಬೀಗದ ಕೈ ಕೆಳಗಿಟ್ಟು ಆಚೆಹೋಗು. ನಮ್ಮ ಗಿಂಡಿಮಾಣಿ ಗುಂಡಾಚಾರಿಯೂ ಇಂತಹ ಪಾರುಪತ್ಯನೋಡಿಯಾನು! ಅಲ್ಲವೋ ಮಾಣೀ?

ಗಿಂಡಿಮಾಣಿ ಗುಂಡಾಚಾರಿಯು ಮುಂದೆ ಬಂದು ತಡವರಿಸುತ್ತ—ಹೌದು ಬುದ್ಧಿ. ನಾನು ಯಾವಾಗಲಾದರೂ ತಮ್ಮ ಮಾತಿಗೆ ಎರಡು ಹೇಳಿದ್ದಿಲ್ಲ! ಆ ದಿವಸ ತಾವು ಹೇಳಿದಿರೆಂತ ಮದುವೆಯೂ ಮಾಡಿಕೊಂಡೆ. ಮತ್ತೆ ನನ್ನ ಅಕ್ಕ—ನನ್ನ ತಂಗಿ—ಎಲ್ಲರೂ ತಮ್ಮ ಅನುಗ್ರಹದಿಂದಲೇ ಉದ್ಧಾರವಾಗಿದ್ದಾರೆ ಪರಾಕೆ!

ಸರಿ ಸರಿ. ನೀನೇ ಯೋಗ್ಯ! ಮತ್ತೆ ಈ ಮುತ್ಸಾಳ ಕೆಲಸಕ್ಕೆ ಬಾರದವ. ಹೂಟೆಗೆ ಹೊರಟರೆ ದನ ಎನ್ನುತ್ತಾನೆ-ಹಾಲು ಕರೆಯುವ ಹೊತ್ತಿಗೆ ಎತ್ತು ಎನ್ನುತ್ತಾನೆ. ನಿಷ್ಪ್ರಯೋಜಕ ರಂಡೇಮು! ಇಂತವನಿಗೆ ಪಾರುಪತ್ಯ! ನಗಾರಿ ಹೊಡೆಯುವ ಚೆನ್ನಯ್ಯನೂ ಇದಕ್ಕಿಂತ ವಾಸಿ! ಹೆಂಡತಿ

ಇಲ್ಲ. ಮಕ್ಕಳು ಊಹೂಂ ಬೇರೆ ಬಳಗ ಕೇಳಬೇಡ. ಬೀಗದಕೈ ಇಟ್ಟು ನಡಿಯೋ ಆಚೆ! ನಿನ್ನ ಮುಖಾವಲೋಕನಮಾಡಲಿಕ್ಕಿಲ್ಲ! ಗುಂಡಾ! ತೆಗೆದುಕೋ. ಎಲ್ಲಾ ನೀನೇ ಇವತ್ತಿನಿಂದ ಸುಧಾರಿಸಬೇಕು. ನಿನ್ನ ಮೇಲೆ ದೇವತಾನುಗ್ರಹ ಉಂಟು. ನಮ್ಮ ಅನುಗ್ರಹವೂ ಪರಿಪೂರ್ಣ ಉಂಟು—ಎಂದು ಶ್ರೀಗಳವರು ಗಿಂಡಿಮಾಣಿ ಗುಂಡಾಚಾರಿಯನ್ನು ಪಾರು ಪತ್ತ್ಯದ ಪಟ್ಟಕ್ಕೇರಿಸಿದರು!

ವಿಠಲಾಚಾರ್ಯರು ಎಂಟು ವರ್ಷಗಳ ಹಿಂದೆಯೇ ಮಠ ಸೇರಿದವರು. ಅವರ ಸಂಸಾರ ಛಿನ್ನಭಿನ್ನವಾದ ಮೇಲೆ ಹೆಂಡತಿ ಸತ್ತು ಒಬ್ಬಳೇ ಮಗಳು ತೀರಿಹೋದ ಮೇಲೆ ಇದ್ದ ಆಸ್ತಿ ಪಾಸ್ತಿಗಳನ್ನು ಕುಟುಂಬಕ್ಕೆ ಹೋಗಲೀ ಸದೆ ಭಂಡಾರಕ್ಕೆ ಧಾರೆಯೆರೆದು ಮಠ ಸೇರಿದವರು. ಆದುದರಿಂದಲೇ ತುಸು ವಿವೇಕವಿಟ್ಟು ಕೆಲಸಮಾಡುತಿದ್ದರು. ಆದರೆ ಧರ್ಮಕ್ಕೆ ವಿವೇಕವೇಕೆ ಬೇಕು? ಆದುದರಿಂದ ಅವರ ಸೇವೆಯು ಮುಗಿದ ಮೇಲೆ ಶ್ರೀ ಶ್ರೀಗಳವರು ಆ ಪ್ರಾಣಿಯನ್ನು ಬಿದ್ದ ಹೂವನ್ನು ಬಿಡುವ ತುಂಬಿಯಂತೆ ಬಿಟ್ಟು ಬಿಡು ವುದರಲ್ಲಿ ನ್ಯಾಯವೇಯಿದ್ದಿತು. ಆದರೆ ವಿಠಲಾಚಾರ್ಯರು ಹೊರಡುವ ಮುಂಚಿತವಾಗಿ ಸ್ವಾಮಿಗಳೊಡನೆ ಕೇಳಿದರು--ಹಾಗಾದರೆ ನನ್ನ ಆಸ್ತಿ ನನಗೆ ಹಿಂದೆ ಕೊಟ್ಟುಬಿಡಿ.

ಓಹೋ ಆಸ್ತಿ! ನಿನ್ನ ಆಸ್ತಿಯನ್ನೇನೂ ನಮ್ಮ ಹೆಸರಿಗೆ ಕೊಡಲಿಲ್ಲ. ದೇವರಿಗೆ ಕೊಟ್ಟಿದ್ದರೆ ಅದಕ್ಕೆ ದೇವರೇ ಗತಿ! ದೇವರ ಕೂಡೆ ಕೇಳಿಕೋ— ಹೋಗು ಕುಟುಂಬ ದ್ರೋಹಿ!—ಎಂದು ಶ್ರೀಗಳವರು ಚೌಕಶುದ್ಧವಾಗಿ ಅಪ್ಪಣೆ ಕೊಡಿಸಿದರು.

ನಿರಾಶೆಯಿಂದ ವಿಠಲಾಚಾರ್ಯರು ಅಲ್ಲಿಂದ ಹೊರಬಿದ್ದರು. ಪೇಟೆಯ ಕಡೆ ದಾರಿ ಹಿಡಿದು ಹೋಗುತ್ತ ಅವರು ಯೋಚಿಸತೊಡಗಿದರು—ಇದೇಕೆ ಹೀಗಾಯಿತು? ಆ ಗುಂಡ ಏನೋ ತಂತ್ರಹೂಡಿರಬೇಕು. ಎಲ್ಲೋ ಕಣ್ಣು ಹಾಕಿ ಕಿವಿಯೂದಿರಬೇಕು. ಈ ಸನ್ಯಾಸಿಗಳಿಗೆ ಮೊದಲೇ ತಲೆ ಯಿಲ್ಲ. ಆದರೆ ನಾನೀಗ ಈ ಸೋಲನ್ನು ಇಷ್ಟರಲ್ಲೇ ಒಪ್ಪಿಕೊಂಡು ಸುಮ್ಮನೆ ಹೊರಟು ಹೋದರೆ ಏನು ಬಂದಂತಾಯಿತು? ಆದುದರಿಂದ ಇದರ ನೆಲೆ

ತಿಳಿಯಲೇ ಬೇಕು. ಮತ್ತೆ ಸಮಯ ಸಾಧಿಸಿ ಆ ಸನ್ಯಾಸಿಗೆ ಒಂದು ಗುಟುಕು ಬೇವಿನ ಕಷಾಯ ಕುಡಿಸಲೇ ಬೇಕು! —ಎಂದು ಅಲ್ಲಿಂದಲೇ ಹಿಂದಿರುಗಿ ಹಿಂದಿನ ಮಾತುಗಳನ್ನೆಲ್ಲಾ ಅಲ್ಲಿಂದಲ್ಲಿಗೇ ಮರೆತು ಬಿಟ್ಟು ಕೊಟ್ಟವರಂತೆ ಮಠಸೇರಿ ಬೆಚ್ಚನೆ ಕುಳಿತು ಬಿಟ್ಟರು.

ಶ್ರೀಗಳವರು ಮೆಲ್ಲನೆ ಗುಂಡಾಚಾರಿಯ ಕಿವಿಯಲ್ಲಿ ಹೇಳಿದರು— ನೋಡು ಅವನು ಇಲ್ಲೇ ಬಿದ್ದುಕೊಂಡಿರಲಿ. ನಾವು ಒಂದು ಹಿಡಿ ಅನ್ನಕ್ಕೆ ಆಸೆ ಮಾಡುವುದು ಬೇಡ. ಇಲ್ಲವಾದರೆ ಅವನು ಹೊರಬಿದ್ದು ಪಿಕಲಾಟ ಮಾಡಿಯಾನು. ಆದರೆ ನಮ್ಮ ಯಾವ ಸುದ್ದಿಯೂ ಅವನಿಗೆ ತಿಳಿಯದಂತೆ ನೋಡಿಕೊ!— ಎಂದು ಒಂದು ಚಿಕ್ಕಿಲಿಯನ್ನು ಅಕ್ಕಿಗೋಣಿಯೊಳಗಿಟ್ಟು ಬಾಯಿ ಹೊಲಿದು ತಾವೇ ಬುದ್ಧಿವಂತರೆಂದು ಭುಜತಟ್ಟಿಕೊಂಡರು!

ಈ ಸನ್ಯಾಸಿಗೆ ಒಂದು ಗುಟುಕು ಬೇವಿನ ಕಷಾಯ ಕುಡಿಸಲೇಬೇಕೆಂದ ವಿಠಲಾಚಾರ್ಯರು ಗುಂಡನ ಆಕರ್ಷಣೆ ಏನಿರಬಹುದೆಂಬುದನ್ನು ತಿಳಿಯುವುದಕ್ಕಾಗಿ ಹಳ್ಳಿಯ ಆಕಡೆ ಈಕಡೆ ಸುತ್ತಾಡತೊಡಗಿದರು. ಆ ಮಾವಿನ ತೋಪಿನೆಡೆಗೆ ಬಂದು ಅಲ್ಲಿ ತರಗೆಲೆ ಹೆಕ್ಕುತಿದ್ದ ಶಾರದೆಯನ್ನು ಕಂಡು— ಇದೇಯೋ ಏನೋ—ಎಂಬ ಸಂಶಯದಿಂದ ಅವಳನ್ನೇ ಹಿಂಬಾಲಿಸಿ ಅವರ ಮನೆಯ ಕಡೆ ಬಂದರು. ಇದೇ ಗುಂಡಾಚಾರಿಯ ಬೇಟೆಯಾಗಿದ್ದರೆ ಚೆನ್ನಾಯಿತು. ಇದು ನಿಜವಾದ ಗಾಳ– ಎಂದು ಜಗಲಿ ಹತ್ತಿ ಕುಳಿತಿದ್ದ ಕೇಶವಯ್ಯನವರಿಗೆ ವಂದಿಸಿದರು.

ಕೇಶವಯ್ಯನವರು ಕೇಳಿದರು—ನನಗೆ ಪರಿಚಯವಾಗಲಿಲ್ಲವಲ್ಲ! ಈ ದಿನಗಳಲ್ಲಿ ಬಹಳ ಮಂದಿ ಅಪರಿಚಿತರು ಬಂದು ಅನಾವಶ್ಯಕವಾಗಿ ನಮಗೆ ತೊಂದರೆ ಕೊಡುತಿದ್ದಾರೆ. ಇವರೇಕೆ ನಮ್ಮನ್ನು ನಮ್ಮ ಪಾಲಿಗೆ ಬಿಡದೆ ಸುಮ್ಮನೆ ದಯೆ ತೋರಿಸಿ ತ್ರಾಸಕೊಡುತ್ತಾರೋ ತಿಳಿಯುವುದಿಲ್ಲ. ನೀವೂ ಅವರಂತೆಯೇ ಒಬ್ಬರೋ ಏನೋ!

ವಿಠಲಾಚಾರ್ಯರು ಸತ್ಯ ಸ್ಥಿತಿಯನ್ನು ತಿಳಿದು ಕೊಂಡಂತಾಯಿತು. ಮತ್ತೊಮ್ಮೆ ಶಾರದೆಯ ಕಡೆ ನೋಡಿದರು.

ಈ ನೋಟ ನಮಗೆ ಬೇಕಾಗಿಲ್ಲ. ನೀವೆಲ್ಲರೂ ಉಪಕಾರ ಮಾಡಿ ನಮ್ಮ ಮನೆ ಕಡೆ ಬರದಿದ್ದರೆ ಬಹಳ ಕ್ಷೇಮವಾಗುವುದು. ನಿಮ್ಮ ಮಠ ಮಂದಿರಗಳ ಧರ್ಮಪ್ರವರ್ತನೆ ನಮಗೆ ಬೇಕಾಗಿಲ್ಲ. ನಮ್ಮ ಧರ್ಮ ನಮ್ಮೊಡನೆ ಪರಿಪೂರ್ಣವಾಗಿದೆ. ಮತ್ತೆ ನಿಮ್ಮ ಕಡೆಯ ಔತಣ—ಉಪ ಚಾರ—ಸೇವೆಸಂದಾಯ—ಇವುಗಳಿಗಾಗಿ ಆಮಂತ್ರಣ ಬಂದೂ ಬಂದೂ ನಾವು ಸೋತಿರುವೆವು. ನಾವು ಬಡವರು, ನಮ್ಮ ಧರ್ಮವೇ ಬೇರೆಯಿದೆ. ಅದರ ಗೊಡವೆ ನಿಮಗೆ ಬೇಕಾಗಿಲ್ಲ—ಎಂದು ವ್ಯಸ್ತರಾಗಿ ಕೇಶವಯ್ಯನ ವರು ನುಡಿದರು.

ವಿಠಲಾಚಾರ್ಯರು ಒಮ್ಮೆ ಉಸಿರುಬಿಟ್ಟು—ನೀವು ನನ್ನನ್ನು ಮಠದ ಕಡೆಯಿಂದ ಬಂದುದಾಗಿ ಗ್ರಹಿಸಿದಂತಿದೆ—

ಅಹುದು. ನಾವು ಎಷ್ಟೋ ವರ್ಷಗಳಿಂದಲೂ ಇಲ್ಲಿರುವೆವು. ಆದರೆ ಯಾರೂ ನಮ್ಮ ಮೇಲೆ ತಮ್ಮ ಘನವಾದ ಕೃಪೆಯನ್ನು ಹೊಂದಿ ಸಲು ಬಂದಿಲ್ಲ. ಮತ್ತೆ ನಿಮ್ಮ ಸ್ವಾಮಿಗಳೊಬ್ಬರು ಬಂದು ನಮ್ಮ ಮೇಲೆ ಏಕೆ ಕನಿಕರಗೊಳ್ಳಬೇಕು?

ಏಕೋ ನಿಮ್ಮನ್ನು ಉದ್ಧಾರ ಮಾಡಬೇಕೆಂದು ಭಗವಂತನ ಸತ್ಪ್ರೇ ರಣೆಯಾಗಿರುವುದೋ ಏನೋ!

ಇಲ್ಲ ಸ್ವಾಮಿ ಇಲ್ಲ. ನಮ್ಮನ್ನು ನಾವೇ ಉದ್ಧಾರ ಮಾಡಿಕೊಂಡಿ ದ್ದೇವೆ. ನಮ್ಮ ಅಭ್ಯುದಯವನ್ನು ನಾವು ಇನ್ನೊಬ್ಬರ ಕೈಯಲ್ಲಿ ಕೊಡಲು ಬಯಸುವುದಿಲ್ಲ. ಇವೆಲ್ಲಾ ಸುಳ್ಳು. ನೀವು ನಾಗಲೋಕದವರು. ತುಸು ಆ ಕಡೆ ಸರಿದು ಹೋದರೆ ನಮಗೆಲ್ಲರಿಗೂ ಕ್ಷೇಮವಿದೆ!

ದೇವರು ದೊಡ್ಡವ. ಗುರು ಪೀಠವೂ ದೊಡ್ಡದು. ಶ್ರೀಗುರುಗಳ ಅನುಗ್ರಹವಾದರೆ—

Nonsense ! ಎಂದು ಕೇಶವಯ್ಯನವರು ಮೇಜು ಬಡಿದರು!
ಆ ನಿರ್ಧಾರದಿಂದಾಗಿ ವಿಠಲಾಚಾರ್ಯರು ಸಂತೋಷಗೊಂಡು ಹೇಳಿದರು—
ರಾಯರೇ ! ತಾವು ತಪ್ಪು ತಿಳುವಳಿಕೆಗೆ ಬಂದಿದ್ದೀರಿ. ನಾನು ಇಷ್ಟೆಲ್ಲಾ

ಮಾತನಾಡಿದರೂ ನನ್ನನ್ನು ಮಠದ ಸಾಲಿನಲ್ಲಿ ಕೂಡಿಸಬಾರದು. ಒಂದು ಸಮಯ ನಾನೂ ಮಠ—ಸಂಸ್ಥಾನ—ಸೇವೆ—ಅನುಗ್ರಹ ಎಂಬುದಾಗಿ ಹೆಗ್ಗಳಿಸಿಕೊಂಡಿದ್ದೆ. ಆದರೆ ಈಗ ಆ ಪಾಪದ ಪ್ರಾಯಶ್ಚಿತ್ತಕ್ಕಾಗಿ ಹಾತೊರೆದಿದ್ದೇನೆ. ಕ್ಷಮಿಸಬೇಕು. ಅವಳು ನಿಮ್ಮ ಮಗಳು?

ಅಹುದು ಶಾರದ

ಒಬ್ಬಳೇ ಮಗಳು?

ಅಹುದು. ಏಕೆ?

ತಾಯಿಯಿಲ್ಲದವಳು—ಅಲ್ಲವೆ?

ಸಹಜ.

ಹಾಗಾದರೆ ಅವಳು ನನಗೂ ಮಗಳಿದ್ದಂತೆ!

ಅದೇನು ಸ್ವಾಮಿ?

ನಾನೂ ಹೆಂಡತಿಯನ್ನು ಕಳೆದುಕೊಂಡು ಒಬ್ಬಳೇ ಮಗಳನ್ನು ಸಾಕುತಿದ್ದೆ. ಆದರೆ ನನ್ನ ಭಾಗ್ಯ ಅಷ್ಟರಲ್ಲೇ ತೀರಿಹೋಯಿತು. ಆ ವೈರಾಗ್ಯದಿಂದ ಎಲ್ಲವನ್ನೂ ಮಠದ ಭಂಡಾರಕ್ಕೆ ಧಾರೆಯೆರೆದು ಬಿಟ್ಟೆ. ಹಾಗೆ ಧಾರೆಯೆರೆದು ಮಹಾಧಾರ್ಮಿಕನಾದೆನೆಂದು ಭಾವಿಸಿಕೊಂಡೆ. ಆದರೆ—

ಆದರೆ ಏನಾಯಿತು? ಏಕೆ ನೀವು ಕಣ್ಣೀರು ತುಂಬುತಿದ್ದೀರಿ?

ಏನೂ ಆಗಲಿಲ್ಲ. ಆದರೆ ಧರ್ಮವು ಈ ಎಲ್ಲಾ ಲೋಕ ಸಂಸ್ಥೆಗಳಿಂದ ಮಠ ದೇವಾಲಯಗಳಿಂದ ದೂರ ದೂರದಲ್ಲೇ ಸರಿದುಹೋಗಿದೆ. ಅಲ್ಲಿ ಈಗ ನಾವು ಅದರ ಬರೇ ಕರಿನೆರಳಿನ ಕಾರ್ಯಭಾರವನ್ನು ಕಾಣುತಿದ್ದೇವೆ. ಅಂತಹ ಕಗ್ಗತ್ತಲಲ್ಲಿ ಅದು ಕಣ್ಣು ಕಾಣಿಸದೆ ಕೊಳೆತು ನಾರುತಿದೆ. ಆದರೂ ಅದನ್ನು ಸಮಾಜವು ನಂಬಿ ತನ್ನ ಸ್ವಾರ್ಥಕ್ಕಾಗಿ ಬೇಯಿಸುತಿದೆ. ಸ್ವಾರ್ಥಕ್ಕಾಗಿ ಅದರ ಪುನರ್ನಿರ್ಮಾಣವಾಗಿದೆ. ದೇವರ ಆವಾಹನೆ ನಿತ್ಯ ಪೂಜೆ ನಡೆದಿವೆ. ಆ ದೇವರ ಹೆಸರಿನಿಂದ ಜನರ ಮೂಢ ಭಕ್ತಿಯನ್ನು ಹೆಚ್ಚಿಸಿ ಮತ್ತೆ ತಾನೇ ಬೆಳೆದು ದೇವರನ್ನೇ ರಸಾತಳಕ್ಕೆ ತಳ್ಳುತಿದೆ. ಆದರೆ ನಿಮ್ಮನ್ನು ನೋಡಿ ಸಂತೋಷವಾಯಿತು. ನನ್ನ

ಶಾರದಮ್ಮನನ್ನು ನೋಡಿ ಸಂತೋಷವಾಯಿತು. ನನ್ನನ್ನು ನಿಮ್ಮ ಬಳಗ ದವನೆಂದೇ ತಿಳಿಯಿರಿ. ನಾನೇನೂ ಕೈಕಡಿಯುವ ಹಾವಲ್ಲ. ಕೈಕಡಿ ಯುವ ಹಾವುಗಳು ಇನ್ನೂ ಇನ್ನೂ ಹೆಚ್ಚು ಹೆಚ್ಚಾಗಿ ನಿಮ್ಮ ಕಡೆ ಬರ ಲಿವೆ!--ಜಾಗ್ರತೆ! ನಾನು ಯಾವತ್ತಿಗೂ ನಿಮ್ಮ ಶಾರದಮ್ಮನ ಕಾವಲಿಗಿ ದ್ದೇನೆ. ನೀವು ಅಂತಹ ಹಾವುಗಳಿಗಾಗಿ ಹೆದರಬೇಕಾಗಿಲ್ಲ—ಅವುಗಳಿಗೆ ಬೇಕಾದ ಗರುಡಮಂತ್ರ ನನ್ನ ಕೂಡೆ ಧಾರಾಳವಿದೆ!--

ವಿಠಲಾಚಾರ್ಯರು ಅಲ್ಲಿಂದ ಹೊರಬಿದ್ದ ಸ್ವಲ್ಪ ಹೊತ್ತಿನಲ್ಲೇ ಮತ್ತೊಂದು ಹಾವು ಆ ಕಡೆ ನುಸುಳಿ ಬಂದಿತು. ಅದು ಬೇಟೆಯ ಆಕರ್ಷಣೆಗಾಗಿ ಮಾಣಿಕ್ಯವನ್ನು ತಲೆಯಲ್ಲಿ ಹೊತ್ತು ತಂದಂತೆ ಹೂ ಹಣ್ಣು ಪ್ರಸಾದ ಪಂಚಕಜ್ಜಾಯಗಳನ್ನು ಮುಂದಿರಿಸಿ ದೇಶಾವರದ ನಗೆ ಬೀರುತ್ತ ಹೇಳಿತು—

ನಮುಸ್ಕಾರ ಸ್ವಾಮಿ ನಮುಸ್ಕಾರ! ನೀವು ನಮ್ಮ ಕಡೆ ಬರಲೇಯಿಲ್ಲ. ನಮ್ಮ ಸ್ವಾಮಿಗಳು ಎಲ್ಲಾ ಊರವರನ್ನು ಬರಮಾಡಿಸಬೇಕೆಂದು ನಮಗೆ ಕಟ್ಟಾಜ್ಞೆ ಕೊಟ್ಟಿದ್ದಾರೆ. ಪೇಟೆಯ ಎಲ್ಲಾ ಸಾಹುಕಾರರೂ ಬಂದಿದ್ದಾರೆ. ಆದರೆ ನೀವು ಬಹಳ ಉದಾಸೀನ ಮಾಡಿಬಿಟ್ಟಿರಿ. ಕೊನೆಗೆ ನಾನೇ ಪ್ರಸಾದ ತೆಗೆದುಕೊಂಡು ಬಂದೆ.

ಪ್ರಸಾದ ದೇವರು ಕೊಡಬೇಕು—

ಸಹಜ ಸ್ವಾಮಿ. ಆದರೆ ಅದಕ್ಕೂ ಹೇತು ಬೇಕಲ್ಲ? ಅದಕ್ಕಾ ಗಿಯೇ ಗುರುಗಳು. ನಾನು ನಿಮ್ಮ ವಿಚಾರವೆಲ್ಲಾ ಶ್ರೀಗಳವರಿಗೆ ತಿಳಿಸಿ ದ್ದೇನೆ. ಅವರಿಗೆ ನಿಮ್ಮನ್ನು ನೋಡಬೇಕೆಂದು ತುಂಬಾ ಆಸೆಯಿದೆ. ನಾಳೆಯಾದರೂ ಮನೆಯವರನ್ನು ಕರೆದುಕೊಂಡು ಒಂದು ಕ್ಷಣ ಪ್ರಸಾದಕ್ಕೆ ಬಂದುಬಿಡಿರಿ. ನಿಮಗೆ ಶ್ರೇಯಸ್ಸು! ನಿಮ್ಮ ಮಗಳಿಗೆ ಪಾಪ!—ಇನ್ನೂ ವಿವಾಹವಾಗಿಲ್ಲವೆಂದು ತೋರುವುದು – ಅವಳಿಗೂ ಶ್ರೇಯಸ್ಸು. ದೇವರು ಕಲ್ಯಾಣಮಾಡುವನು!—ಎಂದು ತಲೆದೂಗಿತು.

ನೋಡಿ. ನಮ್ಮ ಶ್ರೀಗಳವರು ಮೊನ್ನೆ ಮೊನ್ನೆ ದೇವನಹಳ್ಳಿಗೆ ಸಂಚಾರಕ್ಕೆ ಹೋದಾಗಲೂ ನಿಮ್ಮ ಹಾಗಿದ್ದ ಒಬ್ಬ ಮಹನೀಯರನ್ನು

ನೋಡಿದರು. ಅವರಿಗೆ ಮೊತ್ತಮೊದಲು ಶ್ರೀಗಳವರೆಂದರೆ ಏನೂ ಸೇರು ತಿದ್ದಿಲ್ಲ. ಅವರು ನಿಮ್ಮ ಹಾಗೇನೇ ಬ್ರಹ್ಮಸಮಾಜದವರು—

ಸ್ವಾಮಿ! ಕ್ಷಮಿಸಬೇಕು. ನಾನೇನೂ ಬ್ರಹ್ಮಸಮಾಜದವನಲ್ಲ.

ಹಾಗಾದರೆ ಆರ್ಯಸಮಾಜ—

ಅದೂ ಅಲ್ಲ. ನಾನು ದರಿದ್ರ ಸಮಾಜದವ—

ಹೋ! ಹಾಗಾದರೆ ನೀವು ಗಾಂಧೀಜನರು—ತಿಳಿಯಿತು. ಅವರೂ ಹಾಗೇನೇ ಮೊದಮೊದಲು ನಮ್ಮ ಸ್ವಾಮಿಗಳನ್ನು ಬಹಳ ತಾತ್ಸಾರ ಮಾಡಿದರು. ಮತ್ತೆ ಒಮ್ಮೆ ಅಕಸ್ಮಾತ್ ನೋಡಿ ಮಾತಾಡಿದ ಮೇಲೆ ತುಂಬಾ ಭಕ್ತರಾಗಿ ಬಿಟ್ಟರು. ನಮ್ಮ ಸ್ವಾಮಿಗಳ ವಿಷಯ ನಿಮಗೆ ತಿಳಿಯದು—ಅವರ ಉದ್ದೇಶ—ಮಾತು—ಕೆಲಸವೆಂದರೆ ಅಷ್ಟೊ ಸ್ವಾರಸ್ಯ! ಮೈಸೂರು ಮಹಾರಾಜರವರು ಮೊನ್ನೆ ಭೇಟಿಕೊಟ್ಟಾಗ ಬಹಳ ಸಂತೋಷ ಪಟ್ಟು ಹೊಗಳಿದ್ದಾರೆ! ಅದನ್ನು ನೀವೇ ನಿಮ್ಮ ರೇಡಿಯೋದಲ್ಲಿ ಕೇಳಿರ ಬಹುದು! ನೀವು ಬಂದು ನೋಡಿ ಸ್ವಾಮಿ! ಏನೂ ಅಂಜಬೇಕಾಗಿಲ್ಲ. ಅವರಿಗೆ ದೊಡ್ಡವರು ಬಡವರು ಎಂಬ ಭೇದಭಾವನೆಯೇಯಿಲ್ಲ. ನೀವು ಸೇವೆ ಕೊಟ್ಟರೂ ಒಂದೇ ಅಲ್ಲವಾದರೂ ಒಂದೇ—ಅಂತೂ ಅಗತ್ಯ ಬಂದು ದೇವರ ದರ್ಶನ ತೆಗೆದುಕೊಂಡು ಹೋಗಬೇಕು! ನಾಳೆ ಸಂಕ್ರಮಣ—ದೊಡ್ಡ ದಿವಸ—!

ಆ ಹಾವು ತೊಲಗಿ ಹೋದ ಮೇಲೆ ಕೇಶವಯ್ಯನವರು ಒಮ್ಮೆ ಉಸಿರು ಬಿಟ್ಟು—ನಮ್ಮಪ್ಪ—ವೆಂಕಟರಮಣ! ನೀನೇ ಕಾಪಾಡಬೇಕು—ಎಂದರು. ಆದರೂ ಅವರ ಮನಸ್ಸಿನಲ್ಲಿ ಏನೋ ಒಂದು ವಿಧದ ಭೀತಿ ಹೊಕ್ಕಿದಂತಿದ್ದಿತು. ಮತ್ತೆ ಮಗಳನ್ನು ಕುರಿತು—ಶಾರದಮ್ಮ—ನೀನು ಶಾಲೆಯ ಕಡೆ ಆಚೆ ಈಚೆ ಹೋಗುವುದು ಬೇಡ. ಎಲ್ಲಾ ನಾನೇ ನೋಡಿಕೊಳ್ಳುತ್ತೇನೆ. ನೀನು ಮನೆಯಲ್ಲೇ ಇದ್ದು ಬಿಡು. ಇದು ಬಹಳ ಕೆಟ್ಟ ಕಾಲವಾಗಿ ಕಾಣಿಸುತ್ತದೆ—ಎಂದರು.

ಮೇಲಿನ ಸಂಜೆ ಮಾವಿನ ತೋಪಿನ ಕಡೆ ಬಹಳ ಸದ್ದಾದಂತಾಯಿತು. ಸ್ವಲ್ಪ ಹೊತ್ತಿನಲ್ಲಿ ಒಬ್ಬ ಹುಡುಗನು ಓಡುತ್ತ ಬಂದು ಕೇಶವಯ್ಯನವರೊಡನೆ—ಶ್ರೀಗಳವರು ಹೀಗೆ ಅಡ್ಡಾಡುತ್ತ ಆ ಕಡೆ ಹೋಗುವವರು ನಿಮ್ಮ ಶಾಲೆ ನೋಡಬೇಕೆಂದು ನಿಂತಿದ್ದಾರೆ. ಒಂದು ಕ್ಷಣಬರಬೇಕು-ಎಂದನು. ಸ್ವಲ್ಪ ಹೊತ್ತಿನ ಮೇಲೆ ಮತ್ತೊಬ್ಬನು ಬಂದು—ನೀವು ಎರಡು ತೆಂಗಿನಕಾಯಿಯಿಟ್ಟು ನಮಸ್ಕರಿಸಿರಿ. ಏನಾದರೂ ಆ ಜಾಗದಲ್ಲಿ ಪಾದಪೂಜೆಯು ಶಾಸ್ತ್ರ ತೀರಿಸುವುದು ನಿಮಗೇ ಉತ್ತರೋತ್ತರ ಶ್ರೇಯಸ್ಸು—ಎಂದನು.

ಕೇಶವಯ್ಯನವರು ಇಷ್ಟವಿಲ್ಲದಿದ್ದರೂ ಉಪಾಯಗಾಣದೆ ಆ ಕಡೆ ತೆರಳಿದರು. ಶ್ರೀಗಳವರ ಭೇಟಿಯಾಯಿತು. ಶಾಲೆಯ ಸಂದರ್ಶನವಾಯಿತು. ಆದರೆ ಎಣಿಕೆಯಂತೆ ಪಾದಪೂಜೆ ನಡೆಯಲಿಲ್ಲ. ತೆಂಗಿನಕಾಯಿಗಳು ಮುಂದೆ ಬರಲಿಲ್ಲ. ದಕ್ಷಿಣೆಯು ಕೈಹತ್ತಲಿಲ್ಲ. ಆದರೂ ಶ್ರೀಗಳವರು ಬಹಳ ಉದಾರತೆಯಿಂದ ಕೇಶವಯ್ಯನವರನ್ನು ಹೊಗಳುತ್ತ-ನಿಮ್ಮ ಸಾಹಸ ನೋಡಿ ನಮಗೆ ಬಹಳ ಸಂತೋಷವಾಯಿತು. ನಮಗೇನೂ ಗಾಂಧಿಭಕ್ತರ ಮೇಲೆ ದ್ವೇಷವಿಲ್ಲ. ನಿಮ್ಮದು ದೇಶಸೇವೆ. ನಮ್ಮದು ಈಶಸೇವೆ—ಧರ್ಮಸೇವೆ! ದೇಶವೂ ಧರ್ಮವೂ ಒಂದೊಂದಿಗೇ ನಡೆಯುತ್ತಿರಬೇಕು. ಒಂದನ್ನೊಂದು ಬಿಟ್ಟಿರಲು ಸಾಧ್ಯವಿಲ್ಲ. ಅದು ರಥದ ಎರಡು ಗಾಲಿಯಿದ್ದಹಾಗೆ. ನೀವು ಹೀಗೆ ಸ್ವಾರ್ಥವನ್ನೆಣಿಸದೆ ಧರ್ಮಾರ್ಥವಾಗಿ ಶಾಲೆಯನ್ನು

ನಡೆಯಿಸುತ್ತಿರುವುದು ಬಹಳ ಸಂತೋಷ. ಅದಕ್ಕಾಗಿ ನಾವು ಏನಾದರೂ ನಿಮಗೆ ಸಹಾಯ ಮಾಡಬೇಕೆಂದಿದ್ದೇವೆ. ನೀವು ನಮಗೆ ಯಥಾವಕಾಶ ದಲ್ಲಿ ಸಿಕ್ಕಿದರೆ ಎಲ್ಲ ಮಾತಾಡೋಣ—ಎಂದು ಅಪ್ಪಣೆಕೊಟ್ಟರು. ಮತ್ತೆ ಅವರ ಮನೆಯ ಕಡೆಯಿಂದ ಹಾದು ಹೋಗುತ್ತ ನಾಲ್ಕು ಕಡೆ ಇಣಿಕಿ ನೋಡಿದರು. ಆದರೆ ಅವರಿಗೆ ಬೇಕಾದುದು ನೋಡಸಿಗಲಿಲ್ಲ.

ಅಷ್ಟರಲ್ಲಿ ಯಾರೋ ಸಂಭಾವಿತರು ಒಬ್ಬರು—ಎಲ್ಲಿ ನಿಮ್ಮ ಮಗಳು? ಶ್ರೀಗಳವರಿಗೆ ನಮಸ್ಕಾರ ಮಾಡಿಸಿರಿ—ಎಂಬ ಸಲಹೆಯನ್ನು ಕೊಟ್ಟರು. ಆದರೆ—ಇಲ್ಲ. ಇವಳು ಎಲ್ಲಿಗೋ ಕೊಳದ ಕಡೆ ಹೋಗಿದ್ದಾಳೆ—ಎಂಬ ಹಾರಿಕೆಯ ಮಾತಿನಿಂದಾಗಿ ಅದು ಸಾರ್ಥಕವಾಗಲಿಲ್ಲ. ಶ್ರೀಗಳವರು ಮತ್ತೆ ನಿರಾಶರಾಗಿ ಮುನ್ನಡೆದರು.

ಮರುದಿನ ಆಷಾಢ ಬಹುಳ ಪಾಡ್ಯ. ಆ ದಿನ ಜಮೀನ್ದಾರರಲ್ಲಿ ಶ್ರೀಗಳವರಿಗೆ ಭಿಕ್ಷೆಯು ಸಂಕಲ್ಪಿಸಲ್ಪಟ್ಟಿದ್ದಿತು. ಆಸಲುವಾಗಿ ಕೇಶವಯ್ಯ ನವರಿಗೆ ಖುದ್ದು ಆಮಂತ್ರಣ ಬಂದಿದ್ದಿತು. ಜಮೀನ್ದಾರರಲ್ಲಿಗೆ ಬಂದೇ ಬರುವರೆಂದು ಎಲ್ಲರೂ ಎಣಿಸಿದ್ದರು. ಆದರೆ—ಮಗಳಿಗೆ ಮೈಸೌಖ್ಯವಿಲ್ಲ ವಂತೆ ಆ ಕಾರಣ ಬರುವುದಿಲ್ಲ- ಎಂದು ಯಾರೋ ನುಡಿದರು. ಅದನ್ನು ಕೇಳಿ ಶ್ರೀಗಳವರು ನಸುನಗುತ್ತ ಪ್ರಾಯಬಂದ ಹುಡುಗಿಯರಿಗೆ ಸಕಾಲ ದಲ್ಲಿ ಮದುವೆಯಾಗದಿರುವುದೇ ಅಸೌಖ್ಯ!—ಎಂದು ಅಪಹಾಸ್ಯವಾಗಿ ನುಡಿ ದರು. ಅದರ ಪರಿಣಾಮವಾಗಿ ಎಲ್ಲರೂ ಕೇಶವಯ್ಯನವರ ಮಗಳಿಗೆ ಈ ತನಕ ಮದುವೆಯಾಗದುದು ದೊಡ್ಡತಪ್ಪೆಂದು ಒಮ್ಮೆಗೇ ತೀರ್ಮಾನಿಸಿ ಬಿಟ್ಟರು!

ಈ ಸಂಗತಿಯು ತಿಳಿದ ಮೇಲೆ ಕೇಶವಯ್ಯನವರು—ಇವೆಲ್ಲಾ ಕುತಂತ್ರಗಳಿಗೆ ಕೇಶವನು ಜಗ್ಗುವಂತಿಲ್ಲ—ಎಂದು ನಿರ್ಧಾರವಾಗಿ ನುಡಿದರು.

ಶ್ರೀಗಳವರು ಇಷ್ಟರಿಂದಲೇ ತೃಪ್ತರಾಗಲಿಲ್ಲ. ಭಿಕ್ಷೆಯ ಸಮಯ ಜಮೀನ್ದಾರರಲ್ಲಿ ಅದೇ ಪ್ರಸ್ತಾಪವೆತ್ತಿ ಗೇಲಿಮಾಡಿದರು. ಮತ್ತೆ—ಆತ ಗಾಂಧೀ ಮತದವ. ಜಾತಿ ನೀತಿಗಳಿಗೆಲ್ಲ ಕಡು ವಿರೋಧಿ-ರಾಜದ್ರೋಹಿ! ಸಮಾಜ ಬಾಹಿರ—ಎಂದು ಅಪ್ಪಣೆ ಕೊಡಿಸಿದರು.

ಊಟವಾದ ಮೇಲೆ ಸ್ವಾಮಿಗಳು ಜಮೀನ್ದಾರರೊಡನೆ ಅಂತರ್ಯವಾಗಿ ಮಾತನಾಡುತ್ತ ಆ ವಿಚಾರ ಈ ವಿಚಾರಗಳನ್ನು ಬಳಕೆಗೆ ತಂದು ಕಟ್ಟ ಕಡೆಗೆ ಕೇಶವಯ್ಯನವರ ಕುರಿತು ಪ್ರಸ್ತಾವಿಸಿ--ನಾನೇನೂ ಆ ಆರ್ಯಸಮಾಜದವನನ್ನು ಇಷ್ಟಪಡುವುದಿಲ್ಲ. ಅಲ್ಲದೆ ಆ ಮದುವೆಯಾಗದಿರುವ ಮಗಳು ಬೇರೆ—ಇದೆಲ್ಲ ಬಹಳ ತೊಂದರೆಗೆ ಕಾರಣ! ನಾವು ಮೊನ್ನೆ ಅವರ ಮನೆಯ ಕಡೆಗೆ ಹೋದಾಗ ಅವಳು ಇದ್ದಿಲ್ಲ. ಕೊಳದ ಕಡೆಗೆ ಹೋಗಿದ್ದಾಳೆ ಎಂದಿತು ಆ ಪ್ರಾಣಿ. ನಾವು ಹೋದಾಗ ಅವಳು ಇದ್ದಿಲ್ಲವೆಂದರೆ ನಿಜವಾಗಿಯೂ ಬೇಕೆಂದೇ ಸಮಯಸಾಧಿಸಿ ದುರುದ್ದೇಶದಿಂದ ಆ ಕಡೆ ಜಾರಿದ್ದಾಳೆ ಎಂತ ಅರ್ಥವಾಗುತ್ತದೆ. ನಾನಂತೂ ನಮ್ಮ ಮಠದ ಹುಡುಗರನ್ನು ಆ ಕಡೆ ಮುಖಹಾಕಬಾರದೆಂದು ತಿಳಿಸಿಬಿಟ್ಟಿದ್ದೇನೆ—ಎಂದು ತಮ್ಮ ಕುತಂತ್ರಕ್ಕೆ ತಳಗಟ್ಟನ್ನು ಹಾಕಿದರು.—ಅಂತೂ ಅವರ ಮೇಲೆ ನಿಮಗೆ ಕೋಪಬೇಡ. ನಾವು ಕೆಲವು ದಿವಸಗಳಿಗೆ ಬಂದವರು. ಅವರ ಮೇಲೇಕೆ ದೋಷಾರೋಪಣೆ ಮಾಡಬೇಕು?—ಎಂದು ಮತ್ತೆ ತಮ್ಮ ಸಂಭಾವಿತತನವನ್ನು ತೋರಿಸುತ್ತ ಅಲ್ಲಿಂದ ದೇವಸ್ಥಾನ ಸೇರಿದರು.

ಆದರೆ ಈ ಕುತಂತ್ರದಿಂದಾಗಿ ಏನೂ ಸಾಧಿಸಲಿಲ್ಲ. ಕೆಲವರು ಗುಸು ಗುಸು ಕೇಶವಯ್ಯನವರ ವಿಚಾರವಾಗಿ ಹದತಪ್ಪಿ ಹೇಳಿಕೊಂಡರೂ ಜಮೀನ್ದಾರರು ಎರಡು ಬಾಟ್ಲಿಗಳನ್ನು ಗಂಟಲಿಗೆ ಸುರಿದುಕೊಂಡು ಎಲ್ಲವನ್ನು ಮರೆತು ಬಿಟ್ಟರು. ಎಂದಿನ ತನಕ ಜಮೀನ್ದಾರರ ಕ್ರೋಧವು ಅವರ ಮೇಲೆ ಕೆರಳದೋ ಅಂದಿನ ತನಕ ತಮ್ಮ ಆಟವೇನೂ ನಡೆಯಲಾರದೆಂದು ಸ್ವಾಮಿಗಳವರ ಜ್ಞಾನ ದೃಷ್ಟಿಗೆ ಗೋಚರವಾಯಿತು!

ಶ್ರೀಗಳವರು ಚಾತುರ್ಮಾಸ್ಯ ಕುಳಿತು ಹನ್ನೆರಡು ದಿವಸಗಳು ಕಳೆದುವು. ಈ ಹನ್ನೆರಡು ದಿನಗಳಲ್ಲೂ ಗುಂಡಾಚಾರಿಯು ಬಹಳವಾಗಿ ಯೋಚಿಸಿದನು. ಸ್ವಲ್ಪ ಸಮಯವು ದಾಟಿದರೆ ಜಮೀನ್ದಾರರ ಮಗನು ಊರಿಗೆ ಮರಳಿ ಬಂದರೆ ತಮ್ಮ ಕೆಲಸಗಳು ಸಿದ್ಧಿಸುವುದು ಬಿಟ್ಟು ಕಾಲು ಕೀಳಬೇಕಾದೀತೆಂದು ತರ್ಕಿಸಿದನು. ಜಮೀನ್ದಾರರ ಮಗನ ನೆನಪಿನೊಡನೆ ಒಂದು ಉಪಾಯವು ಅವನಿಗೆ ಗೋಚರವಾಯಿತು. ಅದರಿಂದಾಗಿ

ತಮ್ಮ ಕೆಲಸ ಕೈಗೂಡುವುದು ಖಂಡಿತವೆಂದು ನಿರ್ಧರಿಸಿ ತನ್ನ ಅಮೂಲ್ಯ ಸೂಚನೆಯನ್ನು ಶ್ರೀಗಳವರ ಮುಂದಿಟ್ಟನು. ಅದನ್ನು ಕೇಳಿ ಸಂತೋಷ ದಿಂದ-ಭಲೆ-ನಿನಗೆ ಪಾರುಪತ್ಯ ಕೊಟ್ಟದ್ದು ಸಾರ್ಥಕವಾಯಿತು-ಎಂದರು.

ಆದಿನ ಪಂಚಗ್ರಹ ಯೋಗವಿದ್ದಿತು. ಅದಕ್ಕಾಗಿ ದೇವರ ದರ್ಶನ ಕ್ಕೆಂದು ಜಮೀನ್ದಾರರಲ್ಲಿಗೆ ಜನಹೋಗಿ ಅವರನ್ನು ಕರತಂದರು. ಸಂಜೆ ಬಹಳ ಹೊತ್ತು ಮಾತಾಡುತಿದ್ದಂತೆ ಶ್ರೀಗಳವರು ತಮ್ಮ ತಂತ್ರಕ್ಕೆ ಅಡಿ ಹಾಕಿದರು—ತಮಗೆ ಬೇಸರವಿಲ್ಲವಾದರೆ ಒಂದು ಸಂಗತಿ ತಿಳಿಸುತ್ತೇನೆ. ಮೊನ್ನೆ ನಾನು ಆ ಕೇಶವಯ್ಯ–ಅವನ ಮಗಳ ವಿಷಯವಾಗಿ ಹೇಳಿದೆ ನಲ್ಲ—ಈಗ ಮತ್ತೊಂದು ವಿಚಾರವು ತಿಳಿದುಬಂದಿದೆ. ಆದರೆ—

ಆದರೆ ಏನು?

ಆದರೆ ಅದನ್ನು ನಿಮ್ಮಕೂಡೆ ತಿಳಿಸಬೇಕೋಬೇಡವೋ ಎಂಬುದಾಗಿ ಯೋಚಿಸುತ್ತಾಯಿದ್ದೇನೆ. ಏಕೆಂದರೆ ಅದು ನಿಮ್ಮ ನಿಮ್ಮೊಳಗಿನ ವಿಷಯ. ನಿಮ್ಮ ಸಂತಾನಕ್ಕೆ ಸಂಬಂಧಪಟ್ಟದ್ದು. ಆದುದರಿಂದ ಅದರಲ್ಲಿ ನಾವು ಸನ್ಯಾಸಿಗಳು ಏಕೆ ಕೈಹಾಕಬೇಕೆಂದು ಸ್ವಲ್ಪ—

ಛೇ! ನೀವು ಹಾಗೆ ಹೇಳಿದರೆ ಅರ್ಥವೇನಿದೆ? ಲೋಕ ಕ್ಷೇಮವೇ ನಿಮ್ಮ ಕ್ಷೇಮ. ಎಲ್ಲವನ್ನೂ ನಮ್ಮ ಮೇಲೆ ಅಭಿಮಾನವಿಟ್ಟು ತಿಳಿಸಲೇ ಬೇಕು.

ಹಾಗಾದರೆ ನೋಡಿ! ನಿಮ್ಮ ಮಗ ಬಹಳ ಒಳ್ಳೆಯ ಹುಡುಗನೆಂದು ಕೇಳಿದ್ದೇನೆ. ಆದರೆ ಗ್ರಹಚಾರ ಯಾರನ್ನೂ ಬಿಟ್ಟಿಲ್ಲ.

ನನ್ನ ಮಗ? ಆ ವಿಚಾರ ಬಿಟ್ಟುಬಿಡಿ. ಆತ ನನ್ನ ಮಗನೇ ಅಲ್ಲ! —ಎಂದು ಶ್ರೀನಿವಾಸರಾಯರು ಮೀಸೆಯಮೇಲೆ ಕೈಯಾಡಿಸಿದರು.

ಹಾಗಲ್ಲ. ಹಾಗೆ ಹೇಳಬಾರದು. ಸಿಂಹದ ಮರಿ ಯಾವತ್ತಿಗೂ ಸಿಂಹವೆ! ನರಿಯಾಗಲಾರದು. ಅಂತೆಯೇ ನಿಮ್ಮ ಮಗ ಬೇಡವಾದ ಕೆಲ ವರ ಮಾತುಕೇಳಿ ಹಾಗಾದನಷ್ಟೆ.

091334

ಅದು ನಿಮಗೆ ಹೇಗೆ ಗೊತ್ತು?

ನಾನು ಎಲ್ಲ ತಿಳಿದಿದ್ದೇನೆ. ಆ ಕೇಶವಯ್ಯನ ಮಗಳು—ಆ ಧಿಮಾಕಿಯ ವರ್ಚಸ್ಸು ಅವನ ಮೇಲೆ ತುಂಬಾ ಇದ್ದಿತ್ತು.

ಅದಕ್ಕೇ ನಾನು ಆಕಡೆ ಕಾಲಿಡಬಾರದೆಂದು ಅವನಿಗೆ ಕಟ್ಟಪ್ಪಣೆ ಮಾಡಿದ್ದೆ.

ಅದರಿಂದೇನು ಪ್ರಯೋಜನ? ನೋವು ಹೋಗಬೇಕಾದರೆ ಮುಳ್ಳನ್ನು ತೆಗೆಯಬೇಕೇ ಹೊರತು ಕಾಲನ್ನು ಕಡಿದರೆ ಉಪಯೋಗವಿಲ್ಲ. ನಿಮ್ಮ ಆ ಕಟ್ಟಪ್ಪಣೆಯಿಂದಲೇ ಪಾಪ! ಅವನು ಮನಸ್ಸು ನೊಂದು ಗಾಂಧೀ ಮತಕ್ಕೆ ಸೇರಿ ಜೈಲಿಗೆ ಹೋದುದು. ಅಲ್ಲವಾದರೆ ಅವನು ಎಂದೂ ಹಾಗೆ ಮಾಡುತಿದ್ದಿಲ್ಲ—ಎಂದೇ ನನ್ನ ಅಭಿಪ್ರಾಯ. ಅಲ್ಲದೆ ಇನ್ನು ಮುಂದಕ್ಕಾದರೂ ನೀವು ಈ ಮುಳ್ಳನ್ನು ಮೊದಲು ತೆಗೆಯದಿದ್ದರೆ ನಿಮಗೆ ಈ ಕಷ್ಟ ತಪ್ಪಿದ್ದೇ ಅಲ್ಲ! ಅದೂ ಅಲ್ಲದೆ ಆ ಪ್ರಾಣಿ ನಿಮ್ಮನ್ನು ಕುಡುಕ ಎಂತ ಊರೆಲ್ಲಾ ದೂರುವಾತ!—

ಜಮಿನಾನ್ದಾರರ ಮುಖ ಕೆಂಪಿಟ್ಟಿತು. ಅದನ್ನು ಕಂಡೇ ಶ್ರೀಗಳವರು ತಮ್ಮ ಬೆಸುಗೆ ಸರಿಯಾಯಿತೆಂದು ಮೆಚ್ಚಿದರು.

ಶ್ರೀನಿವಾಸರಾಯರು ಸಿಡುಕಿನಿಂದ ಮಠಬಿಟ್ಟು ಮನೆಸೇರಿದರು. ಅದನ್ನು ದೂರದಿಂದಲೇ ವಿಠಲಾಚಾರ್ಯರು ನೋಡಿ—ಇದರಲ್ಲೇನೋ ವಿಶೇಷ ಗೂಢವಿರಬೇಕೆಂದು ತರ್ಕಿಸಿದರು. ಆದುದರಿಂದಲೇ ನೇರವಾಗಿ ಕೇಶವಯ್ಯನವರ ಮನೆಗೆ ಹೋಗಿ—ಏನೋ ಒಂದು ದೊಡ್ಡ ಗಂಡಾಂತರವು ನಿಮ್ಮನ್ನು ಕಾದಿದೆ ಎಂದು ಆ ವಿಷಯಗಳನ್ನೆಲ್ಲಾ ತಿಳಿಸಿದರು.ಅಲ್ಲದೆ-ಏನೇಯಿರಲಿ. ಇಂತಹ ಸನ್ಯಾಸಿಗೆ ನಾನೇಕಷಾಯ ಕೊಡತಕ್ಕವ. ನಿಮ್ಮ ಶಾರದಮ್ಮನನ್ನು ಕಾಯುವ ಭಾರ ನನಗೆ! ನೀವೇನೂ ಹೆದರಬೇಕಾಗಿಲ್ಲ—ಎಂದು ಭರವಸೆಕೊಟ್ಟರು. ಆದರೆ ಅವುಗಳನ್ನೆಲ್ಲ ಬಯಲಿಗೆಳೆದು ಹೇಗೆ ಇದಿರಿಸಬೇಕೆಂಬುದು ಅರ್ಥವಾಗದೆ ಹುಚ್ಚನಂತೆ ಆಕಡೆ ಈಕಡೆ ಆಡ್ಡಾಡ ತೊಡಗಿದರು.

ಮುಂಜಾವವೇ ಆಕಾಶವೆಲ್ಲ ಮೋಡಕವಿದು ಕತ್ತಲು ಕೂಡಿದ್ದಿತು. ಗಂಟೆ ಎಂಟು ಕಳೆದಿದ್ದರೂ ಮೈ ಮೈ ಕಾಣದೆ ಎಲ್ಲವೂ ಮಸಕಾಗಿದ್ದಿತು. ರಾತ್ರಿ ಸುರಿದ ಮಳೆಯಿಂದಾಗಿ ಬಯಲೆಲ್ಲ ತುಂಬಿ ಜಿನುಗುತಿದ್ದಿತು. ಆಗ ಜಮೀನ್ದಾರರ ಮನೆಯಾಳು ಬೋರನು ಬಂದು ಕೇಶವಯ್ಯನವರ ಮನೆಯ ಮುಂದೆ ಹಾಜರಾದನು.

ಅವನನ್ನು ಆ ಮುಂಜಾವ ಕಂಡೇ ಕೇಶವಯ್ಯನವರು ದಿಗಿಲುಬಿದ್ದರು. ಏನುಬೋರಾ? ಏನು ಸಂಗತಿ--ಎಂದರು.

ಮತ್ತೇನಿಲ್ಲ. ರಾಯರ ಹುಕುಂ ಆಗಿದೆ. ನೀವು ಕೂಡಲೇ ಮನೆ ತೆರವು ಮಾಡಬೇಕಂತೆ. ನಾಳೆ ಸಂಜೆಯೊಳಗೆ ಎರಡೂ ಮನೆ ಬಿಟ್ಟು ಕೊಡಬೇಕಂತೆ.

ಏಕೆ? ಏನಾಯಿತು?

ಅದೆಲ್ಲ ಯಾರಿಗೆ ಗೊತ್ತಯ್ಯ. ಅದನ್ನೆಲ್ಲಾ ಕೇಳೋಕೆ ನಾವು ಕೂತಿದ್ದೇವೆಯೆ? ಅಂತೂ ಹೀಗೆ ಅಪ್ಪಣೆಯಾಯಿತು. ಅಲ್ಲವಾದರೆ ಬಾರೀ ತೊಂದರೆ ಬಂದೀತು. ರಾಯರು ತುಂಬಾ ಸಿಡಿಮುಹೋಗಿದ್ದಾರೆ. ಏಕೋ ಗೊತ್ತಿಲ್ಲ. ಅಂತೂ ಅಡ್ಡಿ ಶಿವ್ಹಾ ಬಿಟ್ಟುಹೋಗಬೇಕಂತೆ—ಎಂದು ಬೋರನು ಹೇಳಿ ಹೊರಟುಹೋದನು.

ಕೇಶವಯ್ಯನವರು ತಲೆಯಮೇಲೆ ಕೈಯಿಟ್ಟು ಸುಮ್ಮನೆ ಯೋಚಿಸುತ್ತಾ ಕುಳಿತರು. ಶಾರದೆ ಬಾಗಿಲಬಳಿಯೆ ಅಳತೊಡಗಿದಳು. ಸ್ವಲ್ಪ ಹೊತ್ತಿನತನಕ ಎಲ್ಲವೂ ಮೌನವಾಗಿದ್ದಿತು.

ಇದು ಏನನ್ಯಾಯ? ಇದನ್ನು ಅವರಲ್ಲಿ ಕೇಳಿಯೇ ಬರಬೇಕು!---ಎಂದಳು ಶಾರದೆ.

ಯಾರಲ್ಲಿ?

ಜಮೀನ್ದಾರರಲ್ಲಿ! ಅಲ್ಲವಾದರೆ ಹೀಗೆ ಒಂದೇ ತಡವೆ ಮಳೆಗಾಲದಲ್ಲಿ ಮನೆ ಬಿಡಬೇಕೆಂದರೆ ಏನು ಅರ್ಥ?

ಅರ್ಥವಿಲ್ಲ. ಆದರೆ ಸಿಟ್ಟಿಗೆದ್ದು ಪ್ರಯೋಜನವಿಲ್ಲಮ್ಮ, ಪ್ರಯೋಜನವಿಲ್ಲ. ನ್ಯಾಯಾನ್ಯಾಯಗಳನ್ನು ಯಾರು ಕೇಳುವವರು? ಧನದೌಲತ್ತಿನೊಂದಿಗೆ ನ್ಯಾಯವಿದ್ದೇ ಇದೆ. ನಾವೀಗ ಹೋಗಲೊಲ್ಲೆವೆಂದರೆ ಕೇಳುವವರಾರು? ನಮ್ಮ ಪರಿಣಾಮ ನೆಟ್ಟಗಾಗಬೇಕಾದರೆ ನಮ್ಮಷ್ಟಕ್ಕೇ ನಾವು ಹೋಗಲೇಬೇಕು.

ಆದರೂ ಒಂದು ಕೇಳುವುದು ಒಳ್ಳೆಯದಲ್ಲವೆ?

ಕೇಳುವುದೇನಿದೆ? ಹಾಗೆಕೇಳಿ ಯಾರಾದರೂ ನಮ್ಮ ಜಮೀನ್ದಾರರಿಂದ ಸುಖ ಸೌಲತ್ತುಗಳನ್ನು ಪಡೆದುದಿದೆಯೆ? ಕೇಳಹೋದರೆ ಅದು ಮತ್ತಷ್ಟು ಕಠಿಣವಾಗುವುದು. ಹೇಳದೆ ಕೇಳದೆ ನಮ್ಮ ಪಾಡಿಗೆ ನಾವು ಹೊರಟು ಹೋದರೇನೇ ಕ್ಷೇಮ. ಇದರಲ್ಲೇನೋ ಭಾರೀ ಪಿತೂರಿಯಿದೆ. ಅಲ್ಲದೆ ನಮ್ಮ ಜಮೀನ್ದಾರರು ಒಮ್ಮಿಂದೊಮ್ಮೆಗೆ ಇಷ್ಟು ರೊಚ್ಚಿಗೇಳುತಿದ್ದಿಲ್ಲ. ಹೇಗೇಯಿರಲಿ. ಈ ಠಾವಿನಿಂದ ದೂರವಾಗಿರುವುದು ನಮಗೂ ಸದ್ಯ ಹಿತವೆ!—

ಈ ವೇಳೆ ಅವರು ಇದ್ದಿದ್ದರೆ—ಎಂದು ಮೆತ್ತನೆ ಬಿಸುಸುಯ್ದಳು ಶಾರದೆ.

ಕೇಶವಯ್ಯನವರು ಅದರ ಅರ್ಥವನ್ನು ಗ್ರಹಿಸಿಕೊಂಡು ಅವಳ ಮುಖವನ್ನೇ ನೋಡುತ್ತ—

ಹಾಗಲ್ಲ ಶಾರದಮ್ಮ. ನಾವು ಅವರು ಬರುವ ಮುಂಚಿತವಾಗಿಯೇ ತೆರಳಬೇಕು. ತಂದೆ ಮಕ್ಕಳ ಮಧ್ಯದಲ್ಲಿ ನಾವು ಎಂದೂ ಬರಲಾಗದು. ಇದರಲ್ಲಿ ನಾಚಲು ಏನೂ ಕಾರಣವಿಲ್ಲ. ಇಲ್ಲಿ ನಾವು ಯಾರಿಗೂ ಕೇಡು ಎಣಿಸಿದ್ದಿಲ್ಲ. ನಾವೇನೂ ಕಳ್ಳರಾಗಿ ಈ ಕಡೆಯಿಂದ ಹೊರಬೀಳುತ್ತಿಲ್ಲ. ನಮ್ಮ ಮೇಲೆ ಅಂತಹಯಾವ ಅಪವಾದಗಳೂ ಹುಟ್ಟುವಮುಂಚಿತವಾಗಿಯೇ ನಾವೇ ಹೊರನಡೆದು ಬಿಡುವುದು ಎಷ್ಟೋ ಶ್ರೇಯಸ್ಸು! ದೊಡ್ಡವರು ಯಾವತ್ತಿಗೂ ದೊಡ್ಡವರೆ—ಬಡವರು ಬಡವರೆ! ದೊಡ್ಡವರ ಬಡವರ

ಮಧ್ಯೆ ಮಹದಂತರವಿದೆ. ದೊಡ್ಡವರು ಬಡವರನ್ನು ಪ್ರೀತಿಸಿದರೆ ಅದು ಮಾಳಿಗೆಯಲ್ಲಿ ನಿಂತು ನೂಲೇಣಿಯನ್ನು ಕೆಳಕ್ಕೆ ಬಿಟ್ಟಂತೆ. ಬಡವನೇ ಮೇಲೇರಬೇಕು. ಅದು ಕಡಿದು ಕೆಳಬಿದ್ದು ವೇದನೆಯಾದರೆ ಅದು ಬಡವನ ಪಾಲಿಗೆ. ದೊಡ್ಡವನಂತೂ ಮಾಳಿಗೆಯ ಮೇಲೇನೇಯಿದ್ದಿರುವನು. ಆದುದರಿಂದ ನಾವು ನಾಳೆಯಲ್ಲ—ಈ ದಿನವೇ ಹೊರಟು ಬಿಡೋಣ. ನಮಗೇನು ಸಿಗಬೇಕಾಗಿದೆ? ನಮ್ಮ ಈ ಚಿಲ್ಲರೆ ಸಾಮಾನುಗಳನ್ನು ಕೊಂಡೊಯ್ಯಲಿಕ್ಕೆ ನಮಗೇನು ಕಷ್ಟವಿದೆ? ಒಂದು ಗಾಡಿಹಿಡಿದು ಈ ಸಂಜೆಯೇ ಸಾಗಿಸಿ ಬಿಡೋಣ. ಹೇಗಾದರೂ ಪೇಟೆ ಸೇರಿ ಮತ್ತೆ ಮುಂದಿನ ಮಾರ್ಗದ ಕುರಿತು ಯೋಚಿಸೋಣ. ದೇವರಿದ್ದಾನೆ!—

ಸಹಜ. ದೇವರಿಲ್ಲದ ದಿನ-ವೇಳೆ-ಸ್ಥಳವಿದೆಯೆ? ಆದರೆ ದೇವರು ನೋಡುತಿದ್ದಂತೆಯೇ ಜಗತ್ತು ಹೇಗೋ ಹೇಗೋ ತಿರುಗುತ್ತಾಯಿದೆ. ಅದರ ತಿರುಗಾಟದಲ್ಲಿ ನುಚ್ಚುನೂರಾಗಿ ನವೆವ ಜೀವಿ ಒಂದು ನಿಟ್ಟುಸಿರು ಬಿಟ್ಟರೆ ಆಗಲೂ ದೇವರು ಇದ್ದೇಯಿರುವನು! ಕೇಶವಯ್ಯನವರು ಈ ಹಿಂದೆ ತನ್ನ ಮಗನನ್ನು ಕಳಕೊಂಡಾಗಲೂ ದೇವರಿದ್ದನು. ಹೆಂಡತಿಯನ್ನು ತೀರಿಸಿಕೊಂಡಾಗಲೂ ಅದೇ ದೇವರು ಕೂತಿದ್ದನು. ಆಮೇಲೆ ಮಗಳನ್ನು ವಸಲೆ ಕರೆದುಕೊಂಡು ಈ ಹಳ್ಳಿಗೆ ಬಂದಾಗಲೂ ಆ ದೇವರು ಅವರ ಬೆನ್ನು ಬಿಡಲಿಲ್ಲ. ಕೆಲವು ವರ್ಷಗಳಿಂದ ಈ ಹಳ್ಳಿಯ ಸಹಜ ಸೌಂದರ್ಯವು ಅವರ ರಕ್ತದೊಂದಿದೆ ಸೇರಿ ಜೀವಕ್ಕೆ ಕೂಡಿಹೋಗಿವೆ. ಈ ಮೂಲೆಯ ಮೊದ್ದು ಜನಾಂಗದ ಆಗುಹೋಗುಗಳು ಅವರ ಆತ್ಮೀಯವಾಗಿ ನಡೆದಂತೆ ಹಿತವಾಗಿ ಕೂಡಿಹೋಗಿವೆ. ಇಂತಹ ನಿರರ್ಗಳವಾದ ಜೀವನವೇ ತನ್ನ ಪಾಲಿಗಿದ್ದರೆ ಸಾಕೆಂದು ಅವರು ಎಷ್ಟುತಡವೆ ಅದೇ ದೇವರನ್ನು ಕೈಮುಗಿದು ಬೇಡಿದ್ದಿಲ್ಲ? ಆದರೆ ಅಂತಹ ಸಿದ್ಧಿ ಕೈಗೂಡುವ ಮುಂಚಿತವಾಗಿಯೇ ಅವರ ಅಭಿಲಾಷೆಯ ಕುಡಿಕೆ ಇಬ್ಭಾಗವಾಗಲಿದೆಯೋ ಏನೋ! ಆದರೆ ಅದಕ್ಕೇನು ಮಾಡಲು ಸಾಧ್ಯವಿದೆ? ಸಾಧ್ಯಾಸಾಧ್ಯತೆಯು ದೇವರ ಕೈಯಲ್ಲಿ. ಆದುದರಿಂದ ಅಂತಹ ಹೊಣೆಯನ್ನು ದೇವರ ತಲೆಯ ಮೇಲೆಯೇ ಹೇರಿಸಿ—ದೇವರಿದ್ದಾನೆ! ಎಂದು ಹನಿ ಕಣ್ಣೀರಿನೊಂದಿಗೆ ಕೇಶವಯ್ಯನವರು ಅರ್ಪಿಸಿಬಿಟ್ಟರು!

ಶಾರದೆಯು ಮರುಮಾತಾಡದೆ ಸಾಮಾನುಗಳನ್ನೆಲ್ಲ ಒಟ್ಟುಕೂಡಿಸ ತೊಡಗಿದಳು. ಕೇಶವಯ್ಯನವರು ತಮಗೆ ಬೇಕಾದವನಿಂದ ಗಾಡಿಯೊಂದನ್ನು ಗೊತ್ತುಮಾಡಲು ಆಕಡೆ ತೆರಳಿದರು.

ಹತ್ತುಗಂಟೆಯ ಹೊತ್ತಿಗೆ ಈ ವರ್ತಮಾನವು ಹಳ್ಳಿಯೆಲ್ಲಾ ತುಂಬಿ ಹೋಯಿತು. ಹಲಕೆಲವು ಬ್ರಾಹ್ಮಣರು ಶ್ರೀಗಳವರ ಊಟ ದಕ್ಷಿಣೆಗೆ ಕೈನೀಡಿ ಹಸ್ತಶುದ್ಧಿಗೊಂಡವರು—ಕೇಶವಯ್ಯನ ಮೇಲೆ ದೇವರೇ ಮುನಿದಿದ್ದಾನೆ. ಅವನು ಗುರುದ್ರೋಹಿ. ಇದು ಅದರ ಶಿಕ್ಷೆ!—ಎಂದರು. ಆದರೆ ಯಾವ ಒಕ್ಕಲಿಗನೂ ಹಾಗೆಣಿಸಲಿಲ್ಲ. ಈ ಎಂಟು ವರ್ಷಗಳಿಂದಲೂ ಕೇಶವಯ್ಯನವರು ಬಳಗದಂತೆ ಅವರೊಂದಿಗೆ ಕೂಡಿಹೋಗಿದ್ದರು. ಅವರ ನಿಸ್ವಾರ್ಥಸೇವೆ ಅವರ ಉಪಕಾರಗಳ ಋಣತೀರಿಸಲು ಆ ಬಡ ಒಕ್ಕಲಿಗರಿಂದ ಸಾಧ್ಯವಿದ್ದಿಲ್ಲ. ಆದುದರಿಂದ ಆ ವರ್ತಮಾನ ತಿಳಿದ ಕೆಲವೇ ಕ್ಷಣಗಳಲ್ಲಿ ಹಲವರು ಆಕಡೆ ಬಂದು ಕೂಡಿದರು. ಹಲವು ಹುಡುಗ ಹುಡುಗಿಯರು ಬಂದು ಶಾರದೆಯನ್ನು ಸುತ್ತುಗಟ್ಟಿದರು. ಆದರೆ ಯಾರು ಬಂದು ಏನು ಮಾಡಬಲ್ಲರು? ಅದು ಜಮಿನಾನ್ದಾರರ ಕಟ್ಟಪ್ಪಣೆ! ಅದನ್ನು ಯಾರಿಂದಲೂ ಮೀರಲು ಸಾಧ್ಯವಿಲ್ಲ. ಆದುದರಿಂದಲೇ ಎಲ್ಲರೂ ಮೌನವಾಗಿಯೇ ದುಃಖವನ್ನು ಅನುಭವಿಸಿದರು. ಯಾರೂ ಪಿಟ್ಟೆನ್ನಲಿಲ್ಲ. ಆದರೆ ಕೆಳಮನೆಯ ಕಾಂತಣ್ಣನೊಬ್ಬ ಸಿಡುಕಿನಿಂದ—ದೊಡ್ಡವರ ನ್ಯಾಯವೇ ಹೀಗೆ! ಇದು ದೇವರು ಮೆಚ್ಚದ ನ್ಯಾಯ—ಎಂದನು.

ಮಧ್ಯಾಹ್ನದ ಹೊತ್ತಿಗೆ ವಿಠಲಾಚಾರ್ಯರು ಆಕಡೆ ಓಡಿ ಬಂದರು. ಅವರು ದುಃಖಿಸುವುದಕ್ಕಿಂತ ಹೆಚ್ಚಾಗಿ ನಗುತಿದ್ದರು. ಅವರು ಕೇಶವಯ್ಯನವರೊಡನೆ—ಎಲ್ಲ ತಿಳಿದು ಹೋಯಿತು. ವಿಠಲಾಚಾರಿಯು ಇದರ ನೆಲೆಯರಿಯದೇ ಬಿಟ್ಟಾನೆಯೆ? ಏಕೆ-ಕೆಲವೇ ಗಂಟೆಗಳಲ್ಲಿ ಇದನ್ನೆಲ್ಲಾ ಬಯಲಿಗೆಳೆದು ಬಿಡುತ್ತೇನೆ. ಮತ್ತೆ ನೋಡಬೇಕು ರಾಯರೆ! ನಮ್ಮ ಸ್ವಾಮಿಗಳು ಈ ಊರಿನಿಂದ ಓಟಕೀಳುವ ಪರಿ!-

ಕೇಶವಯ್ಯನವರಿಗೆ ಅದಾವುದೂ ಅರ್ಥವಾಗದೆ ಕೇಳಿದರು—ಅದೇನು ಆಚಾರ್ಯರೆ ಹಾಗೆನ್ನುತ್ತೀರಿ?

ರಾಯರೆ! ನೀವೇ ನೋಡುತ್ತೀರಲ್ಲ! ಆದರೆ ಏನು ಮಾಡುವುದು ಹೇಳಿ. ನೀವು ಇಲ್ಲಿಂದ ಹೊರಬೀಳದೇ ಯಾವುದನ್ನೂ ಕಂಡುಹಿಡಿಯಲು ಬರುವುದಿಲ್ಲ. ಅದಕ್ಕಾಗಿ ನನಗೆ ತುಂಬಾ ದುಃಖವಾಗುತ್ತದೆ. ಆದರೂ ಚಿಂತಿಲ್ಲ. ನಿಮ್ಮನ್ನು ಈ ರಾತ್ರಿಯೇ ಇದೇ ಮನೆಗೆ ವಾಪಾಸು ಕರೆದು ಕೊಂಡು ಬರುವ ಭಾರ ನನ್ನ ಮೇಲೆ! ಅದಕ್ಕಾಗಿ ನೀವು ಸ್ವಲ್ಪ ಕಷ್ಟ ಪಡಬೇಕಾದೀತು. ಆದರೆ ಕೊನೆಗೆ ಎಲ್ಲವೂ ಸಸೂತ್ರವಾಗುವುದು. ನನ್ನ ಶಾರದಮ್ಮ—ಅವಳ ಕಾವಲುಗಾರ ಇವನೇ—ಈ ವಿಠಲಾಚಾರಿ! ಹುಂ! ಆ ಸನ್ಯಾಸಿಗೆ ಒಂದು ಗುಟುಕು ಕಷಾಯ ಈಗಾಗಲೇ ತಯಾರಿಸಿಟ್ಟಿದ್ದೇನೆ. ಅದನ್ನು ಬಟ್ಟೆಯಿಳಿಸಿ ಕೊಡುವುದು ಮಾತ್ರ ಬಾಕಿ! ರಾಯರೇ—ದೇವರಿದ್ದಾನೆ. ಹೆದರಬೇಡಿ! ನೀವು ಇವೊತ್ತು ರಾತ್ರಿ ಹತ್ತು ಗಂಟೆಗೆ ಸರಿಯಾಗಿ ಹೊರಡಬೇಕು. ಹೆದರಬೇಡಿ. ಅವರ ಬೇಟೆಗೆ ನನ್ನ ಬಲೆ! ಇದರಲ್ಲಿ ಯಾರು ಜಯಿಸುತ್ತಾರೋ ನೋಡಬೇಕು. ಗುಂಡಾಚಾರಿಯೋ —ವಿಠಲಾಚಾರಿಯೋ!

ಏನೋ ಆಚಾರ್ಯರೆ! ನಿಮ್ಮ ಒಗಟು ಯಾವುದೂ ನನಗೆ ಅರ್ಥ ವಾಗುವುದಿಲ್ಲ. ಏನೋ ದೈವ ಸಂಕಲ್ಪವಿದ್ದಂತೆ ಆಗುತ್ತದೆ. ಅಷ್ಟೆ!

ಅಷ್ಟರಲ್ಲಿ ಶಾರದೆಯು ಬಂದು ಆಚಾರ್ಯರ ಕಾಲಿಗೆ ನಮಸ್ಕರಿಸಿದಳು. ವಿಠಲಾಚಾರ್ಯರು ಅವಳನ್ನೆತ್ತಿ–ಮಗಳೇ–ನಿನ್ನ ಭವಿಷ್ಯವು ಉಜ್ವಲವಾಗಿದೆ. ನೀನು ಏನೂ ಚಿಂತಿಸಬೇಕಾಗಿಲ್ಲ. ನೋಡು ಈ ಬ್ರಾಹ್ಮಣನ ಮಾತು ಎಂದೂ ಸುಳ್ಳಾಗುವುದಿಲ್ಲ. ನಿನ್ನ ಸುಖವೇ ನನ್ನ ಸುಖ. ನೀನೇ ನನ್ನ ಮಗಳು—ಎಂದು ಕಣ್ಣೀರುತುಂಬಿ ಆಶೀರ್ವದಿಸಿದರು.

ಅಂತಹ ಮಮತೆಯ ಮಾತಿನೊಂದಿಗೆ ಶಾರದೆಯ ಹೃದಯವೂ ಅಮುಕಿಹೋಯಿತು. ಕೊರಳು ಬಿಗಿದು ಬಂದಿತು. ಅವಳು ಚಿಕ್ಕ ಮಕ್ಕಳಂತೆ ಗೋಳೋ ಎಂದು ಅತ್ತು ಬಿಟ್ಟಳು.

ಸ್ವಲ್ಪ ಹೊತ್ತಿನ ಮೌನವನ್ನು ಕಲಕಿ ಕೇಶವಯ್ಯನವರು ಕೇಳಿದರು. ಹಾಗಾದರೆ ಆಚಾರ್ಯರೆ! ನೀವೇಕೆ ಇದನ್ನು ಈಗಲೇ ತೀರ್ಮಾನಿಸ ಬಾರದು?

ಇಲ್ಲ ರಾಯರೇ—ಇಲ್ಲ. ಕಾಲ ಬಂದಿಲ್ಲ. ಇನ್ನೂ ಹತ್ತುಗಂಟೆಗಳ ಕಾಲ ವಿಳಂಬವಿದೆ. ಹತ್ತೇ ಹತ್ತು ಗಂಟೆಗಳ ಕಾಲ. ಮತ್ತೆ ಎಲ್ಲ ನನ್ನ ಕೈಯೊಳಗೆ!—ಎಂದು ಮುಷ್ಟಿಯನ್ನು ದೃಢವಾಗಿ ಹಿಡಿದರು. ಮತ್ತೆ ಅಲ್ಲಿ ನಿಲ್ಲದೆ ಶಾರದೆಯನ್ನು ಮತ್ತೊಮ್ಮೆ ಸಮಾಧಾನ ಪಡಿಸಿ ಜಮೀನ್ದಾರರ ಮನೆಗೆ ವೇಗವೇಗವಾಗಿ ನಡೆದರು.

ಸಂಜೆ ಬಹಳ ಹೊತ್ತಿನ ತನಕವೂ ವಿಠಲಾಚಾರ್ಯರು ಜಮೀನ್ದಾರರಲ್ಲಿ ಮಾತಾಡುತಿದ್ದರು. ಅವರು ಮಾಳಿಗೆಯಿಂದ ಕೆಳಗಿಳಿಯುವ ಹೊತ್ತಿಗೆ ಗಂಟೆ ನಾಲ್ಕುವರೆ ಹೊಡೆದಿದ್ದಿತು. ಮೆಟ್ಟಲಿಂದ ಕೆಳಗಿಳಿಯುತ್ತ ಪುನಃ ಹೇಳಿದರು—ರಾಯರೇ ನೋಡಿ—ಇವನು ಬರೇ ವಿಠಲಾಚಾರಿಯಲ್ಲ—ಚಾಣಕ್ಯ ಚಾಣಕ್ಯ! ನೀವು ಈ ತಂತ್ರವನ್ನು ನೋಡಬೇಕು. ಮತ್ತೆ ನನ್ನನ್ನು ಇದರಿಂದ ಪಾರುಮಾಡಿದಿ ಎಂತ ನೀವೇ ಮೂಗಿಗೆ ಕೈಯೇರಿಸಬೇಕು! ನೆನಪಿರಲಿ. ರಾತ್ರಿ ಬರುತ್ತೇನೆ. ಮತ್ತೆ ಎಲ್ಲ ನನ್ನ ಕೈಯೊಳಗೆ!—ಎಂದು ದೃಢಮುಷ್ಟಿಯನ್ನು ಎತ್ತಿ ಎತ್ತಿ ತೋರಿಸುತ್ತ ಅಲ್ಲಿಂದ ನೆಗೆದು ನೆಗೆದು ಹೊರಬಿದ್ದರು.

ಆ ದಿನ ರಾತ್ರಿ ಪೂಜೆಯನಂತರ ಮಠದಲ್ಲಿ ಎಂಟು ಗಂಟೆಗೇ 'ಸೀತಾ ಕಲ್ಯಾಣ' ಹರಿಕಥೆಯು ತೊಡಗಿತು. ಬಹಳ ವಾಚಾಳಿಯಾದ ಹರಿದಾಸರು ಆ ದಿನದ ಕತೆಗೆ ತುಂಬಾ ನಾಜೂಕಿನ ನಾಟಕದ ಪದಗಳನ್ನು ಬಳಸಿಕೊಳ್ಳುವರೆಂದು ಈ ಮೊದಲೇ ವರ್ತಮಾನ ತಿಳಿದ ಜನಸಂದಣಿ ಚೌಕಿಯಲ್ಲಿ ಕಿಕ್ಕಿರಿದು ಸೇರಿದ್ದಿತು. ದೇವಸ್ಥಾನದ ಸುತ್ತಿನ ಬ್ರಾಹ್ಮಣ್ಯವು ಇಂತಹ ಹರಿಕಥೆ—ನಭೂತೋ ನಭವಿಷ್ಯತಿ—ಎಂದು ಗದ್ದಲಗುಡುತಿದ್ದಿತು. ಶ್ರೀ ಶ್ರೀಗಳವರು ಇದಿರುಗಡೆಯ ಗಂಟೆಯನ್ನು ನೋಡುತ್ತ, ಆಗೊಮ್ಮೆ ಈಗೊಮ್ಮೆ ಎದ್ದುಎದ್ದು ಒಳಗಡೆ ಹೋಗುತ್ತ ಬರುತಿದ್ದರು. ಗುಂಡಾಚಾರಿ ಪದೇ ಪದೇ ಬಂದು ಅವರ ಕಿವಿಯಬಳಿ ಕೈಹಿಡಿದು ಅಂತರಂಗವಾಡುತಿದ್ದನು. ಇವನ್ನೆಲ್ಲಾ ನೋಡುತ್ತ ನೋಡುತ್ತ ದೂರದಿಂದಲೇ ಕುಳಿತು ವಿಠಲಾಚಾರ್ಯರು ಹರಿದಾಸರ ಹಾಡಿಗೆ ತಾಳ ಹಾಕುವುದರಲ್ಲಿ ಮಗ್ನರಾಗಿದ್ದಂತೆ ತೋರ್ಪಡಿಸುತಿದ್ದರು.

ಕುಸುರು ೮ ಕರೆದರೆ ದನಿ ಕೇಳದೆ

ಆ ದಿನ ಆಷಾಢ ಕೃಷ್ಣ ಚತುರ್ದಶಿ. ಮಳೆಗಾಲದ ಆ ಕತ್ತಲೆಯನ್ನು ಕೃಷ್ಣ ಚತುರ್ದಶಿಯು ಮತ್ತಷ್ಟು ಕಪ್ಪರೆದು ಕಾಳ ರಾತ್ರಿಗೊಳಿಸಿದ್ದಿತು. ದುಃಖದ ಕಾರಸ್ಥಾನದಂತೆ ಆರಾತ್ರಿಯು ಭಯಂಕರವಿದ್ದು ಅದಕ್ಕೆ ಜೀರುಂಡೆಯು ಮೇಳಗೊಟ್ಟು ಮಳೆಗಾಲದ ಕಪ್ಪೆಯು ಸ್ವರವಿಡಿದು ಅದನ್ನು ಮತ್ತಷ್ಟು ತಿದ್ದಿ ಸಾಕಾರಗೊಳಿಸಿದ್ದಿತು.

ಕೇಶವಯ್ಯನವರು ತಮ್ಮ ಸಾಮಾನುಗಳನ್ನು ಒಂದು ಹಳ್ಳಿಯ ಎತ್ತಿನ ಬಂಡಿಯಲ್ಲಿ ತುಂಬಿಸಿ—ಮಳೆಗಾಲದ ದಾರಿ. ಆದಷ್ಟು ಬೇಗನೆ ಕಾಲುವೆ ದಾಟಿಬಿಡಲಿ – ಎಂದು ಸಂಜೆಗೇ ಪೇಟೆಯತ್ತ ಕಳುಹಿದ್ದರು. ಮತ್ತೆ ತಾವು ಬೇಗನೇ ರಾತ್ರಿಯ ಊಟತೀರಿಸಿ ಹತ್ತು ಗಂಟೆಯ ವೇಳೆಗೆ ಮನೆಯಿಂದ ಹೊರ ಹೊರಟರು. ಆದರೆ ಆರಾತ್ರಿಗೆ ಏಕೆ ಹೊರಡಬೇಕೆಂಬುದು ಅವರಿಗೇ ತಿಳಿದಿದ್ದಿಲ್ಲ. ಕಾರಣ – ವಿಠಲಾಚಾರ್ಯರು ಹಾಗೆಯೇ ತಿಳಿಸಿದ್ದರು. ಸರಿ. ಆದುದರಿಂದಲೇ ಉಪಾಯವಿಲ್ಲದೆ ಒಂದು ಕಂದೀಲು ಹೊತ್ತಿಸಿಕೊಂಡು ಆ ಮನೆಯಿಂದ ಹೊರಟರು.

ಆ ಮನೆ—ಅದೊಂದು ಜೋಪಡಿಯಾದರೇನು? ಈ ಎಂಟು ವರ್ಷಗಳಲ್ಲಿ ರೆಕ್ಕೆಹರಡಿ ತನ್ನ ಮರಿಗಳಿಗೆ ಕಾವುಗೊಡುವ ಹಕ್ಕಿಯಂತೆ ದೇಹದ—ಮನಸ್ಸಿನ—ಆತ್ಮದ ಶ್ರಮಕ್ಕೆ ಪರಿಹಾರವಾಗಿ ಆಶ್ರಯವಿತ್ತು ಒದಗಿರುವ ಮನೆ! ಅವರು ಈ ಮೊದಲು ಪೇಟೆಯ ತಮ್ಮ ಸ್ವಂತ ಮನೆ

ಯಲ್ಲೇ ವಾಸಿಸಿದ್ದರೆ ಅದು ಅವರ ಜೀವನದ ಸರಳ ಧ್ಯೇಯಕ್ಕೆ ವಿರುದ್ಧವಾದ ವಾತಾವರಣದ ಕಾವು. ಆದರೆ ಈ ಜೋಪಡಿಯಲ್ಲಿ ಒಂದು ಹೊಸ ಬಾಳಿನ ಆವಿಷ್ಕರಣಕ್ಕೆ ತೊಡಗಿ ಸಿದ್ಧಿಗೊಂಡ ಸಾಧಕನ ತಪೋ ಭೂಮಿಯಂತೆ ನಿಸರ್ಗದೊಡನೆ ಕೂಡಿ ನಿಶ್ಚಿಂತೆಯಿಂದ ನಿರುಪದ್ರವವಾಗಿ ಸಮನ್ವಯಗೊಂಡ ಸಂಪೂರ್ಣತೆಯನ್ನು ಕಂಡುಕೊಂಡಿದ್ದರು ಕೇಶವಯ್ಯ ನವರು. ಆದುದರಿಂದಲೇ ಅದನ್ನು ಇಂದು ಬಿಟ್ಟುಕೊಡುವವೇಳೆ ಅವರ ಹೆಜ್ಜೆ ಹಿಂದೆಸರಿದು ಆ ನೆಲನೀರಿನ ಸಂಸರ್ಗ—ಸಂಪರ್ಕವು ಅವರನ್ನು ಕೈಹಿಡಿದು ನಿಲ್ಲಿಸುತಿದ್ದಿತು!

ಶಾರದೆಯು ಆ ಮನೆಯ ಹೊಸ್ತಿಲಿಗೆ ಬೊಗಸೆ ಹೂ ಹಾಕಿ ನಮಸ್ಕ ರಿಸಿದಳು. ಆ ದಿನವಿಡೀ ತೋಟ ತಿರುಗಿ ತಿರುಗಿ ಕೂಡಿಸಿ ಹೆಣೆದಿರುವ ಹೂಗಳನ್ನೆಲ್ಲ ತನ್ನ ನಚ್ಚಿನ ಕೃಷ್ಣವೇಣಿಯ ತಲೆಗೆ ಓರಂತೆ ಮುಡಿಸಿ ಮತ್ತು ಳಿದುದನ್ನು ನೆರೆದ ಹುಡುಗಿಯರಿಗೆಲ್ಲ ಹಂಚಿಬಿಟ್ಟಳು. ಕೊನೆಗೆ ಮೌನ ವಾಗಿ ಒಂದು ಮಸಿಯ ಚೂರಿನಿಂದ ಮನೆಯ ಇದಿರುಗಡೆ ಗೋಡೆಯ ಮೇಲೆ—೩೧–೭—೧೯೪೩. ಶಾರದೆ— ಎಂದು ಬರೆದು ಕಣ್ಣೀರು ಒರಸುತ್ತ ಈಕಡೆ ಬಂದಳು!

ಕೇಶವಯ್ಯನವರು ನಸುನಗುತ್ತ— ಅದು ಏಕೆ?— ಎಂದರು.

ಆವಳು — ಅದು ಹೆಂಗಸಿನ ಬುದ್ಧಿ ! — ಎಂದು ಗಂಟಲು ಬಿಗಿದು ಬಂದು ಹೇಳಿದಳು.

ಅಳಬೇಡಮ್ಮಣ್ಣಿ — ಅಳಬೇಡ. ಎಲ್ಲವೂ ಸರಿ ಹೋಗುವುದು. ದೇವರು ನಮ್ಮ ಕೈಬಿಡಲಾರನು.—ಎಂದು ಅಲ್ಲಿ ಕೂಡಿ ಬಳಗದವರಂತೆ ನಿಂತಿರುವ ಕೆಲಕೆಲವು ಒಕ್ಕಲಿಗರನ್ನು ಹಿಂದೆ ಬಿಟ್ಟು ತಮ್ಮ ಎಂಟು ವರ್ಷ ಗಳ ಅವಿರತ ಪರಿಶ್ರಮದ ಶಾಲೆಗೆ ಸುತ್ತು ಬಂದು ಮುಂದೆ ನಡೆದರು. ಆದರೆ ಎಲ್ಲರೂ ಅವರನ್ನು ಕಾಲುವೆಯ ತನಕ ಹಿಂಬಾಲಿಸಿಯೇ ಬಂದರು. ಅವರೆಲ್ಲ ಮೂಕ ವೇದನೆಯನ್ನು ಅನುಭವಿಸುತ್ತ ಅಲ್ಲೇ ಹಿಂದುಳಿದರೂ ಕಾಂತಣ್ಣ ಮತ್ತು ಅವನ ಮಗಳು ಕೃಷ್ಣವೇಣಿ ಇವರಿಬ್ಬರು ಮಾತ್ರ ಮತ್ತೂ ಮುಂದುವರಿದು ಬರುತ್ತಲೇಯಿದ್ದರು. ಕೇಶವಯ್ಯನವರಿಗೆ

ವಿಠಲಾಚಾರಿಯು ಕಿವಿಮಾತಾಗಿ --ರಾಯರೆ! ಯಾರನ್ನೂ ಕಾಲುವೆ ದಾಟಿ ಆಕಡೆ ಕರೆದು ಕೊಂಡು ಹೋಗಬೇಡಿರಿ—ಎಂದ ಮಾತು ನೆನಪಾಗಿ ಅವರನ್ನು ಎಂತಾದರೂ ಆಣೆಯಿಟ್ಟು ಹಿಂದೆ ಕಳುಹಿಸುವುದರಲ್ಲಿ ಬಹಳ ಹೊತ್ತು ಕಳೆದು ಹೋಯಿತು!

ಕಾಲುವೆಯಿಂದಾಚೆ ಪೇಟೆಗೆ ಸೇರುವ ಮೂರು ಮೈಲುಗಳ ದಾರಿಯಲ್ಲಿ ಒಂದು ಚಿಕ್ಕ ಪೊದರಿನ ಕಾಡಿದ್ದಿತು. ಅಲ್ಲಿಗೆ ಬಂದು ಸೇರುವ ಹೊತ್ತಿಗೆ ಮಳೆಯೂ ಹನಿಯತೊಡಗಿತು. ಕಾಲು ಜಾರುತ್ತಿರುವ ಆ ಕಿರು ದಾರಿಯಲ್ಲಿ ಕೇಶವಯ್ಯನವರು ಜಾಗ್ರತೆಯಿಂದ ಹೆಜ್ಜೆಯಿಡುತ್ತ ಮುನ್ನಡೆದಿದ್ದರು. ಅದು ಅವರಿಗೆ ಚಿರಪರಿಚಿತವಾದ ಮಾರ್ಗ. ಆದುದರಿಂದ ಯಾವ ತರದ ಅಂಜಿಕೆಯೂ ಇದ್ದಿಲ್ಲ. ಆದರೂ ಮುಂದೆ ಕೂಗುವ ಜೊತೆಗೂಗೆಗಳ ಘೂತ್ಕಾರಕ್ಕೆ--ಅಲ್ಲಿಯಿಲ್ಲಿ ಮಾರ್ಗ ದಾಟುತಿದ್ದ ನರಿಗಳ ಚೀತ್ಕಾರಕ್ಕೆ ಶಾರದೆಯು ಮೈನಡುಗಿ ನಿಂತುಬಿಟ್ಟಳು. ಗಾಢಾಂಧಕಾರದಲ್ಲಿ ಆ ಸನ್ನಿವೇಶಗಳು ಸ್ವಲ್ಪ ಕಪ್ಪಿಟ್ಟು ಬರೆದ ಕಾದಂಬರಿಯ ಭೀಕರ ವರ್ಣನೆಯಂತೆ ಕಂಡುಬಂದಿತು. ಒಂದಿಗೆ ಮೈ ನವಿರೆದ್ದು ತಂದೆಯ ಮುಖದ ಕಡೆ ನೋಡಿದಳು.

ಕೇಶವಯ್ಯನವರು ಒಮ್ಮೆ ಕಂದೀಲನ್ನು ಮೇಲೆತ್ತಿ ಹಿಡಿದು ಮಗಳ ಬೆನ್ನು ತಟ್ಟಿ—ಅಂಜಬೇಡ ಮಗಳೇ—ಎಂದು ಮಮತೆಯಿಂದ ನುಡಿದು ನಂತರ ಅವಳನ್ನು ಮುಂದಿಟ್ಟುಕೊಂಡು ತಾನು ಹಿಂದಿನಿಂದ ದೀಪಹಿಡಿದು ಕಾವಲಿನವನಂತೆ ಪಯಣ ಬೆಳಸಿದರು. ಒಮ್ಮೆಯೊಮ್ಮೆಗೆ—ಆ ಬ್ರಾಹ್ಮಣ ನಮ್ಮನ್ನೇಕೆ ಈ ನಟ್ಟಿರುಳಿನಲ್ಲಿ ಇಬ್ಬರನ್ನೇ ಇಂತಹ ಮಾರ್ಗದಲ್ಲಿ ಅಟ್ಟಬೇಕಿದ್ದಿತು?—ಎಂದು ವಿಚಾರವಶರಾಗುತಿದ್ದರು. ಕೊನೆಗೆ ಅವುಗಳನ್ನೆಲ್ಲ ಕೆಟ್ಟ ಕನಸಿನಂತೆ ಮರೆತುಬಿಟ್ಟು—ಏನೋ! ಇದರ ಕಾರಸ್ಥಾನ ನನಗಂತೂ ತಿಳಿಯುವುದಿಲ್ಲ. ದೇವರಿಗೇ ಗೊತ್ತು!--ಎಂದು ಅತಂತ್ರರಾಗುತಿದ್ದರು.

ಕಾಡಿನ ಅರ್ಧ ಮಾರ್ಗ ಕಳೆದಾಗ ಇದಿರುಗಡೆಯ ಮರದ ಗೆಲ್ಲುಗಳು ತಾವೇ ತಾವೇ ಬಾಗಿದಂತಾದುವು. ಮತ್ತೆ ಘನಪದಾರ್ಥವು ಕೆಳಗೆ

ಬಿದ್ದ ಸಪ್ಪಳ. ಕೇಶವಯ್ಯನವರು ಜಾಗ್ರತೆಗಾಗಿ ಶಾರದೆಯನ್ನು ಹಿಂದೆ ನಿಲ್ಲಿಸಿ ಕಂದೀಲನ್ನು ಮೇಲೆತ್ತಿ ಹಿಡಿದು—ಯಾರದು?—ಎಂದು ಗಂಭೀರ ವಾಗಿ ಕೇಳಿದರು.

ಅದಕ್ಕೆ ಉತ್ತರ ಬರಲಿಲ್ಲ. ಏನೋ ಕಾಡುಪ್ರಾಣಿಗಳಿರಬಹುದೆಂದು ಎಣಿಸುತಿದ್ದಾಗ ದೊಡ್ಡ ಕಲ್ಲೊಂದು ಕಂದೀಲಿನ ಮೇಲೆ ಬಿದ್ದು ಅದು ಸಿಡಿಮು ನಂದಿ ಹೋಯಿತು! ಇದರಲ್ಲೇನೋ ಗೂಢವಿದೆಯೆಂದು ಕೇಶವ ಯ್ಯನವರು ಅಂಜಿದರು. ಆದರೆ ತನಗಾಗಿಯಲ್ಲ—ತನ್ನ ಮಗಳಿಗಾಗಿ!

ಸ್ವಲ್ಪ ಹೊತ್ತಿನಲ್ಲೇ ಯಾರೋ ಪೊದರುಗಳ ನಡುವೆ ಸರಸರ ಹತ್ತಿರ ಸರಿದು ಬಂದಂತಾಗಿ ಹಿಂದಿನಿಂದ ತಬ್ಬಿ ಹಿಡಿದು ಶಾರದೆಯನ್ನು ಆ ಕಡೆ ಸೆಳೆದಂತೆ ಭಾಸವಾಯಿತು. ಆಕೆ ಒಮ್ಮೆ ಬೊಬ್ಬಿಟ್ಟಳು. ಮತ್ತೆ ಬೊಬ್ಬಿ ಡದಂತೆ ಆಕೆಯ ಬಾಯನ್ನು ಬಲವಾಗಿ ಬಿಗಿಹಿಡಿದಿದ್ದರು. ಕೇಶವಯ್ಯ ನವರೂ ಅಂತಹ ಕತ್ತಲಲ್ಲಿ ದಿಕ್ಕುಗಾಣದೆ ಬೊಬ್ಬಿಡತೊಡಗಿದರು. ಆದರೆ ಅವರ ಬೊಬ್ಬೆ ಅರ್ಧದಲ್ಲೇ ನಿಂತುಹೋಯಿತು. ದೊಣ್ಣೆಯೊಂದು ಅವರ ಕತ್ತಿನ ಮೇಲೆ ಭಾರವಾಗಿ ಬಿದ್ದು ಅವರು ಮುಗ್ಗರಿಸಿದರು. ಮತ್ತೆ ಅವರ ಕಡೆಯಿಂದ ಸದ್ದು ಹೊರಡಲಿಲ್ಲ. ಆದರೂ ಶಾರದೆಯು ಚೀರುತ್ತ ಕೈ ಕೊಸರಿಕೊಂಡು ಓಡಲು ಯತ್ನಿಸಿದಳು. ಆದರೆ ಅವಳನ್ನು ಮೂವರು ಬಿಗಿಹಿಡಿದಿದ್ದರು. ಅವಳಿಗೆ ಬೋಧ ತಪ್ಪುತ ಬಂದಿತು. ಆದರೂ ಮೆಲ್ಲ ಮೆಲ್ಲನೆ ಸ್ವಾಮಿ—ನನ್ನ ಸ್ವಾಮಿ—! ಎಂದು ಗುಣುಗುಟ್ಟಿದಳು.

ಅಷ್ಟರಲ್ಲಿ ಮುಂದುಗಡೆಯಿಂದ ಯಾರೋ ವಿದ್ಯುದ್ದೀಪದ ಬೆಳಕು ಹಾಕುತ್ತ—ಏನದು—ಯಾರದು?—ಎಂದು ಓಡಿಬಂದರು. ಆಕ್ರಮಣ ಮಾಡುತಿದ್ದ ವ್ಯಕ್ತಿಗಳು ಗಾಬರಿಯಿಂದ ಹಿಂದೆ ಸರಿದು ಪೊದರಿನ ಮರೆ ಯಲ್ಲಿ ಅಡಗಿ ಕುಳಿತರು. ಬಂದ ಜನ ದೀಪ ಹಿಡಿದು ದಾರಿಯ ಮೇಲೆ ಬಿದ್ದಿದ್ದ ಕೇಶವಯ್ಯನನ್ನು ನೋಡಿ ಹೌಹಾರಿದನು. ಮತ್ತೆ ಶಾರದೆ ಯನ್ನು ಕಂಡು—ಹಾ! ಶಾರದೆ!—ಎಂದು ದಿಗ್ಭ್ರಾಂತನಾದನು. ಆದರೆ ಅವನಿಗೆ ಅದಕ್ಕಿಂತ ಹೆಚ್ಚಿನ ಅವಕಾಶ ಸಿಗಲಿಲ್ಲ. ಅಡಗಿ ಕುಳಿತಿದ್ದವರು

ಸಹಸಾ ಹಾರಿ ಮೇಲೆ ಬಿದ್ದು ದೊಣ್ಣೆಯಿಂದ ಅವನ ತಲೆಯನ್ನು ಹೊಡೆದರು. ಅವನು ಹಾ—ಎಂದು ಅಲ್ಲಿಯೇ ಬಿದ್ದುಬಿಟ್ಟನು.

ಮತ್ತೆ ಮೂವರು ಶಾರದೆಯನ್ನು ಕೈಕಾಲು ಹಿಡಿದು ಎತ್ತುವುದರಲ್ಲಿದ್ದರು. ಆಗ ಹಿಂದಿನಿಂದ ಮತ್ತೊಮ್ಮೆ ಸದ್ದಾಯಿತು. ಎರಡು ವಿದ್ಯುದ್ದೀಪಗಳ ಬೆಳ್ಳನೆ ಬೆಳಕು ಅವರ ಮೇಲೆ ಬಿದ್ದಿತು. ಯಾರೋ ಕೈಯ ಬಂದೂಕನ್ನು ಮೇಲೆತ್ತಿ ಗಂಭೀರವಾಗಿ—ಯಾರದು ಮುತ್ಕಾಳರು-ಎಂದ ಗರ್ಜನೆಗೆ ಕಾಡೇ ನಡುಗಿಹೋಯಿತು.

ಅವರಿಗೆ ಆ ಸ್ವರವು ಚಿರಪರಿಚಿತವಾಗಿ ಕೇಳಿಸಿತು. ಮುಖದ ಮೇಲೆ ಬಟ್ಟೆಯನ್ನು ಮುಸುಕು ಹಾಕಿಕೊಂಡು ಶಾರದೆಯನ್ನು ಅಲ್ಲೇ ಬಿಟ್ಟು ಕೊಟ್ಟು ಒಂದೇ ಸವನೆ ಓಡುವ ಹವಣಿಕೆಗೆ ಬಂದರು. ಅಷ್ಟರೊಳಗೆ ಒಂದು ಕೈ ಮುಂದೆ ಬಂದು ಒಬ್ಬನ ವಸ್ತ್ರವನ್ನು ಬಿಗಿಯಾಗಿ ಹಿಡಿದಿದ್ದಿತು. ಆತನು ಆ ವಸ್ತ್ರವನ್ನು ಅಲ್ಲಿಗೇ ಕಳಚಿ ಬಿಟ್ಟುಕೊಟ್ಟು ಮುಖ ಮುಚ್ಚಿಕೊಂಡು ಓಡಿ ಬಿಟ್ಟನು. ವಸ್ತ್ರ ಹಿಡಿದಿದ್ದ ವ್ಯಕ್ತಿಯು ಅದರ ಮೇಲೆ ಬೆಳಕು ಹಾಯಿಸಿ—ನೋಡಿದಿರಾ— ಇದೇ ಕಾವಿಶಾಟಿ!— ಹೊಡಿರಿ ಸ್ವಾಮಿ ಹೊಡಿರಿ— ಎಂದು ನುಡಿದನು.

ಮಾತು ಮುಗಿದ ವೇಳೆ ಢಂ —ಎಂದು ಬಂದೂಕು ಸಿಡಿಯಿತು. ಆದರೆ ಆ ಕಾಡಿನ ಮರ ಪೊದರುಗಳ ಮಧ್ಯದಲ್ಲಿ ಆಕ್ರಮಣಕಾರರು ಬಹು ಸುಲಭವಾಗಿ ನುಸುಳಿಹೋದರು.

ಬಂದವರು ನಾಲ್ವರಿದ್ದರು. ದಾರಿಯ ಮೇಲೆ ಬಿದ್ದಿದ್ದವರ ಮೇಲೆ ಬೆಳಕು ಹಾಯಿಸುತ್ತ ನೋಡುತ್ತ ಬಂದರು. ಕೇಶವಯ್ಯನವರಿಗೆ ಹೆಚ್ಚು ಪೆಟ್ಟು ಆಗಿದ್ದಿಲ್ಲ. ಶಾರದೆಯು ಪ್ರಜ್ಞೆ ತಪ್ಪಿದ್ದಳು. ಆದರೆ ಮತ್ತೊಬ್ಬನಾರು? ದೀಪಹಿಡಿದು ನೋಡಿ —ಅರೆ—ಕೃಷ್ಣಸ್ವಾಮಿ!-ಎಂದು ಕೂಗಿಕೊಂಡರು. ಅವನ ತಲೆಗೆ ಪೂರಾ ಪೆಟ್ಟಾಗಿದ್ದಿತು.

ಬೋರಾ!—

ಜಮೀನ್ದಾರರ ದೇಹವೆಲ್ಲ ಸಿಟ್ಟಿನಿಂದ ನಡುಗುತಿದ್ದಿತು. ಕೈಯ ಬಂದೂಕನ್ನು ಮತ್ತೊಮ್ಮೆ ಮೇಲೆತ್ತಿದರು. ವಿಠಲಾಚಾರ್ಯರು ಅವರ ಕೈ ಹಿಡಿದು—ಇದು ಸಿಟ್ಟಿಗೆ ಸಮಯವಲ್ಲ. ಸದ್ಯ ಇವರನ್ನು ಮನೆಗೆ ಸಾಗಿಸಿ ತಲೆಗೆ ಪಟ್ಟಿ ಹಾಕಬೇಕಾಗಿದೆ. ಮತ್ತೆ ಆ ದಿವಾಳಿ ಸನ್ಯಾಸಿಯ ವಿಚಾರ ನೋಡೋಣ. ಏನು ಮಾಡುವುದು? ನಾವು ಬಂದುದು ಕೊಂಚ ವೇಳೆ ಯಾಗಿ ಹೋಯಿತು. ಆದುದರಿಂದಲೇ ಇದನ್ನೆಲ್ಲ ಕಾಣಬೇಕಾಯಿತು—ಎಂದರು.

ಜಮೀನ್ದಾರರು ನಾಲಗೆ ತಡವರಿಸಿ ಇಲ್ಲ ಆಚಾರ್ಯರೇ! ನನ್ನದೇ ತಪ್ಪು. ಈಗಲೇ ನಿಮ್ಮೆದಿರು ಪ್ರಮಾಣಮಾಡಿ ಹೇಳುತ್ತೇನೆ. ಈಗಿಂದೀ ಗಲೇ ಬಿಟ್ಟು ಕೊಟ್ಟೆ! ನನ್ನ ದುರಾಭ್ಯಾಸ ನನ್ನ ಮಗನ ಪಾಲಿಗೇ ಕೇಡಾಗಿ ಬಂದಿತಲ್ಲ !— ಅವರ ಮಾತಿನಲ್ಲಿ ಅನುಕಂಪದಿಂದ ಕೂಡಿದ ನಿರ್ಧಾರದ ಜಳಕವಿದ್ದಿತು!

ಜೋರನು ಕೃಷ್ಣಸ್ವಾಮಿಯನ್ನು ಹೆಗಲ ಮೇಲೆ ಹಾಕಿಕೊಂಡನು. ಮತ್ತೊಬ್ಬನು ಕೇಶವಯ್ಯನವರನ್ನು ಆಧರಿಸಿಕೊಂಡನು. ವಿಠಲಾಚಾರ್ಯರು ಶಾರದೆಯನ್ನು ಆತುಕೊಂಡರು. ಹೀಗೆ ಅವರು ಮನೆಸೇರುವ ವೇಳೆಗೆ ಗಂಟೆ ಹನ್ನೊಂದುವರೆ ಕಳೆದು ಹೋಗಿದ್ದಿತು.

ಗಂಟೆ ಹನ್ನೆರಡರ ಸಮಯ ಮೂವರು ಸೇದೆಬಿಡುತ್ತ ಜಾಗರೂ ಕತೆಯಿಂದ ಹಿಂದೆ ಮುಂದೆ ನೋಡಿಕೊಳ್ಳುತ್ತ ಮಠಸೇರಿದರು- ಶ್ರೀ ಶ್ರೀ ೧೦೮ ಧರ್ಮ ಪ್ರವಚನ ಶ್ರೀಪಾದಂಗಳವರು ತಮ್ಮ ೨೦೮ ರಾತಲಿನ ಭಾರದ ದೇಹವನ್ನು ಆಕಡೆ ಈಕಡೆ ಕೊಸರಿಕೊಂಡು ಗುಂಡಾಚಾರಿಯನ್ನು ದುರ ದುರನೆ ನೋಡುತ್ತ-ಏನು ನೋಡುತಿದ್ದೀಯೋ ಪೆದ್ದ! ಎಲ್ಲಾ ಸಾಮಾನು ಗಳನ್ನು ಕೂಡಲೇ ಮೋಟರಿಗೆ ತುಂಬಿಸಿ ಬಿಡು —ಎಂದು ಆಜ್ಞಾಪಿಸಿದರು.

ಗುಂಡಾಚಾರಿಯು ಅಂಜುತ್ತ—ಹಾಗಾದರೆ ಚಾತುರ್ಮಾಸ್ಯ —ಎಂದನು.

ಚಾತುರ್ಮಾಸ್ಯಕ್ಕೆ ಬೆಂಕಿ ಹಾಕಿದರು. ಮಂಗ! ಈಗಿಂದೀಗ ಹಾದಿ ಹಿಡಿದು ಪೇಟೆ ದಾಟದಿದ್ದರೆ ಚಾತುರ್ಮಾಸ್ಯಕ್ಕಲ್ಲ ಆಶ್ರಮಕ್ಕೇ ಬೇರೆ ಜನ

ಹುಡುಕಬೇಕಾದೀತು! ಏನೋ ಆ ಗುಂಡಿನ ಬಾಯಿಯಿಂದ ಬದುಕಿ ಬಂದುದೇ ನಮ್ಮ ಪುಣ್ಯ! ಅದು ಯಾರು ತಿಳಿಯಲಿಲ್ಲವೋ ನಿನಗೆ–ಜವಿಾನ್ದಾರರಲ್ಲವೊ?

ಮತ್ತೊಂದು?

ಮತ್ತೊಂದು ಅದೇ— ನಮ್ಮ ಶನಿ ವಿಠಲಾಚಾರಿ!

ಅವರಿಗೆ ಹೇಗೆ ತಿಳಿದು ಹೋಯಿತು?

ಅವರಿಗೆ ನಿನಗಿಂತ ಹೆಚ್ಚು ಮೆದುಳುಯಿದೆ! ಮಂಗ! ಬೇಗ ಡ್ರೈವರನ್ನು ಕರಿ. ಗಾಡಿ ತುಂಬಿಸು. ತಡಮಾಡಬೇಡ ಮತ್ತೆ ನಮ್ಮ ಎಲುಬು ಸುಣ್ಣವಾದೀತು !—ಎಂದು ಶ್ರೀಪಾದಂಗಳವರು ವ್ಯಸ್ತರಾಗಿ ಅಪ್ಪಣೆ ಕೊಡಿಸಿದರು.

ಮುಂಜಾವಕ್ಕೆ ಬಹಳ ಮೊದಲೇ ಹತ್ತು ಜನರು ದೊಣ್ಣೆ ಹಿಡಿದು ದೇವಸ್ಥಾನದತ್ತ ಬಂದರು. ಆದರೆ ಅಲ್ಲಿಯಾರೂ ಇದ್ದಿಲ್ಲ. ಸುತ್ತಮುತ್ತಲಿನ ಬ್ರಾಹ್ಮಣ್ಯವು ಆ ಗಡಿಬಿಡಿಯಿಂದ ಎಚ್ಚತ್ತು ಗಾಬರಿಯಿಂದ–ಏನಿದು! ಅರೆ- ಶ್ರೀಪಾದಂಗಳವರ ಪತ್ತೆಯೇ ಇಲ್ಲವಲ್ಲ! ನಮಗೆ ತಿಳಿಸಲೇಯಿಲ್ಲ. ಎಲ್ಲಿಗೆ ನಡೆದು ಬಿಟ್ಟರು? ಎಂದು ಆ ದಂಡಾಳುಗಳನ್ನು ಕಂಡು ಬೆದರಿ ಗುಣುಗುಟ್ಟಿದರು.

ಆ ಹತ್ತು ಮಂದಿಯೊಡನೆ ಬಂದಿದ್ದ ವಿಠಲಾಚಾರ್ಯರು ಹಾಗೆಯೇ ಜವಿಾನ್ದಾರರಲ್ಲಿಗೆ ಹಿಂದೆ ತೆರಳಿ—ಗೂಗೆಯು ನಡುರಾತ್ರಿಯಲ್ಲೇ ಪಾರಿ ಹೋಗಿದೆ. ಸನ್ಯಾಸಿಯು ಪರಾರಿ! ಕೆಲಸವು ಕೆಟ್ಟುಹೋಯಿತು. ಏನು ಮಾಡಲಿ?—ಎಂದು ಕೈಕೊಸರಿಕೊಂಡರು.

ಚಿಂತಿಲ್ಲ ಹೋಗಲಿ. ನಮ್ಮ ಹಕ್ಕಿಗಳು ನಮ್ಮ ಕೈಸೇರಿವೆಯಲ್ಲ!– ಎಂದರು ಶ್ರೀನಿವಾಸ ರಾಯರು ಆತ್ಮಸಮಾಧಾನದಿಂದ. ಆದರೂ ಅವರ ಕಣ್ಣುಗಳು ಕಿಡಿಕಾರುತಿದ್ದುವು. ಸೊಕ್ಕೇರಿದ ಮುಖವು ಬುಸುಗುಟ್ಟುತಿದ್ದಿತು—ನಾಗರ ಹಾವಿನಂತೆ!

ಕುಸುರು ೯ ಕುರುಡು ಪ್ರಪಂಚ

ಕೇಶವಯ್ಯನವರಿಗೆ ಆರಾತ್ರಿ ಮನೆ ಸೇರುವವೇಳೆ ಚೇತನವು ಬಂದಿದ್ದಿತು. ಆದರೆ ಅವರ ಕೊರಳಿಗೆ ಬಿದ್ದ ಪೆಟ್ಟು ಅಲ್ಲೇ ಹಿಡಿದು ನಿಂತುದರಿಂದ ಕತ್ತು ಅಲ್ಲಾಡಿಸಲು ಬರುತಿದ್ದಿಲ್ಲ. ಅಲ್ಲಾಡಿಸಲು ನಾಲ್ಕು ದಿನಗಳ ತೈಲ ಮರ್ದನ ಶಾಖವೂ ಬೇಕಾಯಿತು. ಶಾರದೆಗೆ ಏನೂ ಪೆಟ್ಟಾಗಿದ್ದಿಲ್ಲ. ಆದರೆ ಅಂಜಿಕೆಯಿಂದ ಅವಳ ಎದೆಯು ಹೌಹಾರಿದ್ದಿತು. ಹಿಂದೆ ಬರುತ್ತಾ ತಂಗಾಳಿಗೆ ಎಚ್ಚರ ಬಂದು ಒಮ್ಮೆ ಸ್ವಾಮಿ- ಸ್ವಾಮಿ ಎಂದು ತಡವರಿಸಿದಳು. ಪ್ರಾಯಶಃ ಆ ಸುಪ್ತ ಚೇತನದಲ್ಲೂ ಅವಳು ಕೃಷ್ಣಸ್ವಾಮಿಯ ಕನಸನ್ನೇ ಕಾಣುತಿದ್ದಳೋ ಏನೋ!

ಆದರೆ ಕೃಷ್ಣಸ್ವಾಮಿಗೆ ಪೆಟ್ಟು ಬಲವಾಗಿ ತಲೆಯ ಮೇಲೆ ಬಿದ್ದಿದ್ದಿತು. ಅಂದಿನ ಬೆಂಗಳೂರಿನ ಲಾಠೀ ಪ್ರಹಾರದಿಂದಾಗಿ ಅವನ ತಲೆಯು ಮೊದಲೇ ಪೆಟ್ಟಾಗಿದ್ದುದರಿಂದ ಅದರ ಮೇಲಣ ಮತ್ತೊಂದು ಆಘಾತವು ಸ್ವಲ್ಪ ವಿಕೋಪಕ್ಕೆ ಕಾರಣವಾಯಿತು. ತಲೆಯ ಸುರಿಸ ರಕ್ತವು ಕಟ್ಟಲು ಬಹಳಹೊತ್ತು ಹಿಡಿಯಿತು. ಆ ರಕ್ತ ಸ್ರಾವದಿಂದಾಗಿ ನಿತ್ರಾಣವು ಕೂಡಿ ಮೈ ಎಚ್ಚರ ಬಂದಾಗ ಬೆಳಗಾಗಿದ್ದಿತು. ಅವನು ಒಮ್ಮೆ ಕಣ್ಣು ಬಿಟ್ಟು— ನಾನು ಎಲ್ಲಿದ್ದೇನೆ?—ಎಂದು ಕೇಳಿದನು

ಹತ್ತಿರದಲ್ಲೇ ಶಾರದೆಯು ಕುಳಿತು ಗಾಳಿಬೀಸುತಿದ್ದಳು. ಮೃದುವಾಗಿ ಮೈದಡವಿ—ಇಲ್ಲೇ ಮನೆಯಲ್ಲಿದ್ದೀರಿ--ಎಂದಳು.

ನೀನು?

ನಾನು ಶಾರದೆ.

ಶಾರದೆ—ಶಾರದೆ—ಎಂದು ನಾಲ್ಕು ತಡವೆ ನುಡಿದು ಅರೆಗಣ್ಣಿನಿಂದ ನನಗೇಕೆ ತಲೆನೋಯುತ್ತಿದೆ?—ಎಂದನು.

ಏಕಿಲ್ಲ ಸುಮ್ಮನೆ. ನೀವು ಮಾತಾಡ ಬೇಡಿ. ಆಯಾಸವಾಗುತ್ತದೆ.-ಎಂದು ಮೈ ಪೂಸಿದಳು.

ಕೃಷ್ಣಸ್ವಾಮಿಯು ಅರೆಗಣ್ಣಿನಿಂದ ಅವಳನ್ನೇ ನೋಡುತಿದ್ದನು. ಮುಂಜಾವದಲ್ಲಿ ಪೇಟೆಯಿಂದ ಡಾಕ್ಟರರು ಬಂದು ಪರೀಕ್ಷಿಸಿ—ಏನೂ ತೊಂದರೆಯಿಲ್ಲ. ಆರಾಮುವಾಗಿರಬೇಕು. ಗುಣವಾಗುತ್ತದೆ—ಎಂದು ಮದ್ದಿಟ್ಟು ಕಟ್ಟಿ ಹೋದರು.

ಹೀಗೆ ಹದಿನೈದು ದಿನಗಳು ಕಳೆದುವು. ಅವನ ತಂದೆ ಗಂಟೆಗಂಟೆಗೆ ಆ ಕೋಣೆಯತ್ತ ಬಂದುನೋಡಿ ಉಸಿರುಬಿಟ್ಟು ಎಲ್ಲಾ ಭಾರವನ್ನು ಶಾರದೆಯ ಮೇಲೆಯೇ ಹೊರಿಸಿ ತೆರಳುತಿದ್ದರು. ಎಷ್ಟೋ ತಡವೆ ವಿಠಲಾಚಾರ್ಯರು ಅವರನ್ನೇ ಹಿಂಬಾಲಿಸುತ್ತ ಹೇಳುತಿದ್ದರು—ರಾಯರೇ—ನಿಜವಾಗಿಯೂ ನಿಮ್ಮ ಪುಣ್ಯ!

ಏನದು ಆಚಾರ್ಯರೆ?

ತಾಯಿ ಸತ್ತ ಮಕ್ಕಳನ್ನು ಯಾರು ಕಾಯಬೇಕು?

ದೇವರು ಕಾಪಾಡಬೇಕು?

ಅಲ್ಲ—ದೇವರಲ್ಲ. ತಾಯಂತಿರುವ ಹೆಣ್ಣು ಹೃದಯವು ಕಾಯಬೇಕು. ಹೊತ್ತು ಹೊತ್ತಿಗೆ ಮದ್ದನ್ನು ಯಾರೂ ಕೊಡಬಹುದು. ಆದರೆ ಮಮತೆಯನ್ನು ಕೊಡಲು ಸಾಧ್ಯವಿಲ್ಲ.

ಆದುದರಿಂದ—

ಆದುದರಿಂದ ಏನೂ ಇಲ್ಲ. ನೀವೇ ಯೋಚಿಸಿ ನೋಡಿರಿ. ನೀವೇ ಕಣ್ಣಾರೆ ನೋಡುತಿದ್ದೀರಲ್ಲ?

ಜಮೀನ್ದಾರರು ಮಾತು ತಿರುಗಿಸುತ್ತ ಕೇಳಿದರು—ಆಚಾರ್ಯರೆ—ನೀವೇಕೆ ಅಂದೇ ಮಠ ಬಿಟ್ಟುಬಿಟ್ಟರಿ?

ಮತ್ತಾವುದಕ್ಕೂ ಅಲ್ಲ. ಇದೇ ರೋಗಕ್ಕಾಗಿ!

ಈ ರೋಗಕ್ಕೆ ಮದ್ದಿಲ್ಲವೆ?

ಇದೇ ಮದ್ದು—ಇಲ್ಲಿ ನಡೆಯಿತಲ್ಲ!

ಮತ್ತೆ ನಿಮಗೆ ಹೇಗೆ ಇದೆಲ್ಲಾ ತಿಳಿದು ಹೋಯಿತು? ನಿಜವಾಗಿಯೂ ನೀವು ಆದಿನ ಬಂದು ನನ್ನಕೂಡೆ ತಿಳಿಸದೆ ಹೋಗಿದ್ದರೆ ದೊಡ್ಡ ದುರಂತವೇ ನಡೆದು ಹೋಗುತಿದ್ದಿತು!

ಅಹುದು. ನನಗೂ ಮೊತ್ತಮೊದಲಿಗೆ ಇದರ ಪತ್ತೆಯೇ ಆಗಲಿಲ್ಲ. ಇದರೆ ನಂತರ ಶಾರದಮ್ಮನನ್ನು ಕಂಡ ಮೇಲೆ ಹಾವಿನ ಕಣ್ಣು ಈ ಮಾಣಿಕ್ಯದ ಮೇಲೆಯಿದೆ ಎಂಬುದು ಖಚಿತವಾಯಿತು. ಅದಕ್ಕಾಗಿಯೇ ಆ ಗಿಂಡಿ ಮಾಣಿಯಿಂದ ಎಷ್ಟೋ ಬಾರಿ ಕೇಶವಯ್ಯನವರ ಮನವೊಲಿಸಿ ಮಠಕ್ಕೆ ಕರೆತರುವುದಕ್ಕಾಗಿ ಯತ್ನವು ನಡೆಯಿತು. ಇವೆಲ್ಲವನ್ನೂ ಕಂಡು ನಾನು ನನ್ನ ಸೇಡು ತೀರಿಸಿಕೊಳ್ಳಲು ಇದೇ ಸಮಯವೆಂದು ಬಗೆದು ಪುನಃ ಮಠದಲ್ಲೇ ಇರತೊಡಗಿದೆ. ಅದರ ಪರಿಣಾಮವಾಗಿ–

ಏನಾಯಿತು?

ಆ ಸನ್ಯಾಸಿಯು ನಿಮ್ಮ ಕೂಡೆ ಅಲ್ಲದ ಸಲ್ಲದ ಚಾಡಿ ಹೇಳಿ ಪಿತೂರಿ ನಡಿಸಿದುದು ತಿಳಿದು ಹೋಯಿತು.

ಆದರೆ ನನಗೆ ಇದೆಲ್ಲಾ ಅರ್ಥವಾಗಲಿಲ್ಲ.

ಹೇಗೆ ಅರ್ಥವಾಗಬೇಕು! ಹಾವಿನ ಹೆಜ್ಜೆಯನ್ನು ಹಾವೇ ತಿಳಿಯಬೇಕು ತಾನೇ? ನಿಮ್ಮ ಕೂಡೆ ಸನ್ಯಾಸಿಯು ಶಾರದೆಯ ಕುರಿತು ಬಹಳ ಹೇಳಿರಬಹುದು.

ಅಹುದು. ಏನೋ ಕೆಳಗಡೆ ಕೆಟ್ಟ ಸಂಪರ್ಕವಿರಬೇಕೆಂದು ಹೇಳಿದಂತಿದೆ.

ಸಹಜ. ಅದು ಏಕೆಗೊತ್ತೆ? ಹುಡುಗಿಯನ್ನು ಹಾರಿಸಿಕೊಂಡು ಹೋದಾಗ ಆ ಅಪವಾದವು ತಮ್ಮ ಮೇಲೆ ಬರದಂತೆ ಆತ್ಮರಕ್ಷಣೆಗಾಗಿ! ಅದಕ್ಕಾಗಿಯೇ ಊರವರ ಮುಂದೆ--ಪಾಪ--ಹುಡುಗಿಗೆ ಇನ್ನೂ ಮದುವೆಯಾಗಿಲ್ಲ--ಎಂದು ಸೈಗರೆದು ಕನಿಕರ ತೋರಿಸಿದುದು. ಮತ್ತೆ--

ಮತ್ತೇನು?

ಮತ್ತೆ ನಿಮ್ಮ ಕಾವಿನಲ್ಲಿರುವ ವೇಳೆ ಅವರ ಮೇಲೆ ಕೈ ಮಾಡಲು ಕಷ್ಟವಿದೆ. ಅದಕ್ಕಾಗಿಯೇ ಬೇರೆ ಏನೆಲ್ಲಾ ಹಂಚಿಕೆ ನಡಿಸಿ

ಹಾ, ಹೌದು. ಏನೋ ನಮ್ಮ ಹುಡುಗನ ತಲೆತಿರುಕತನಕ್ಕೆ ಅದೇ ಕಾರಣವೆಂದು ಹೇಳಿದ್ದ.

ಸರಿ. ಆದುದರಿಂದಲೇ ನೀವು ಕೋಪಗೊಂಡು ಅವರನ್ನು ಒಮ್ಮೆಂದೊಮ್ಮೆಗೆ ಹೊರ ಪಡಿಸಿದಿರಿ.

ಜಮೀನ್ದಾರರು ನಾಚುಗೆಯಿಂದ ತಲೆ ತಗ್ಗಿಸಿ--ನಾನು ತುಂಬಾ ತಪ್ಪು ಮಾಡಿದೆ. ಅನ್ಯಾಯವಾಗಿ ಅವರನ್ನು ಹೊರಡಿಸಿದೆ.

ಏನಾಯಿತು ಚಿಂತಿಲ್ಲ. ಅನ್ಯಾಯವಾದರೇನೇ ನ್ಯಾಯದ ಬೆಲೆ ತಿಳಿಯುವುದು. ನೋಡಿ--ಇನ್ನೂ ಬಹಳವಾಗಿ ತಿಳಿಯಲಿದೆ!

ಸಹಜ. ಆಚಾರ್ಯರು ಹೇಳಿದ ಮಾತು ಸತ್ಯ. ಅದನ್ನೇ ಜಮೀನ್ದಾರರು ಕ್ರಮೇಣ ತಿಳಿಯ ತೊಡಗಿದರು. ಕೋಣೆ ಹೊಕ್ಕುವ ವೇಳೆ ತಡೆದು ಬಾಗಿಲ ಬಳಿ ನಿಂತು ಸ್ವಲ್ಪ ಸ್ವಲ್ಪವಾಗಿ ತಿಳಿಯತೊಡಗಿದರು. ಎಷ್ಟೋ ತಡವೆ ಆಚಾರ್ಯರು ಹೇಳಿದ--ಮಮತೆಯನ್ನು ನಮ್ಮಿಂದ ಕೊಡಲು ಸಾಧ್ಯವಿಲ್ಲ--ಎಂಬ ಮಾತು ನೆನಪಿಗೆ ಬಂದು ಕೋಣೆ ಹೊಕ್ಕದೇನೆ ಸದ್ದಿಲ್ಲದೆ ಹಿಂದಿರುಗಿ ಬಿಡುತಿದ್ದರು. ಈ ಎಲ್ಲಾ ಸಂದರ್ಭಗಳಿಂದಾಗಿ ಅವರ ಹೃದಯದ ಸಿಡುಕಿನ ಸ್ಥಾನವತ್ತ ಕನಿಕರವೂ--ದುಡುಕಿನ ಕಾವಿನಲ್ಲಿ ವಿವೇಕವೂ ಉದಯವಾಗ ತೊಡಗಿತು!

ಒಂದು ತಿಂಗಳು ಕಳೆಯಿತು. ಕೃಷ್ಣಸ್ವಾಮಿಯು ಶಾರದೆಯ ಕೈಹಿಡಿದು ಆಕಡೆ ಈಕಡೆ ಮನೆಯೊಳಗೇ ಸುತ್ತಾಡತೊಡಗಿದನು. ಸುತ್ತಾಡಿ ಸಾಕಾದಾಗ ಸುಮ್ಮನೆ ಕುಳಿತು ಹರಟೆಹೊಡೆಯುತಿದ್ದನು.

ಸಂಜೆಗಾಳಿ ಹಾಯಾಗಿ ಬೀಸುತಿದ್ದಿತು. ಶ್ರಾವಣಮಾಸದ ಕೊನೆಯ ಮೋಡಗಳು ಬಾನತ್ತ ಸೆರಗುಹಾಸಿ ತೆಳ್ಳನೆತೇಲಿ ಮೂಲೆಗುಂಪಾಗುತಿದ್ದುವು. ಅಂತೆಯೇ ಅವನ ಮನಸ್ಸು ಮೇಲ ಮೇಲಕೆ ತೇಲುತಿದ್ದಿತು.

ಶಾರದೆಯು ಬಳಿಯಲ್ಲಿ ಕುಳಿತು–ಏನು ಬಹಳ ಯೋಚಿಸುತಿದ್ದೀರಿ?–ಎಂದು ಕೇಳಿದಳು.

ಏನಿಲ್ಲ. ಮನಸ್ಸು ತನ್ನಷ್ಟಕ್ಕೆ ಹಿಂದೆ ಹಿಂದೆ ಹಾರಿಹೋಗುತ್ತಿದೆ.

ಅದೇಕೆ ಮುಂದೆ ಮುಂದೆ ಹಾರಿಹೋಗಬಾರದು?–ಎಂದಳು ನಗುತ್ತ.

ಹಿಂದಿನದು ನಮ್ಮ ಅನುಭವಕ್ಕೆ ಕೂಡಿಬಂದು ನೆನಪಿನಂತಾಗಿದೆ. ಮುಂದಿನದು ಕೈಸೇರದ ಕನಸಿನಂತಿದೆ!

ಹಾಗಾದರೆ ನೆನಸಿಗಿಂತಲೂ ಕನಸು ಹಿತವಲ್ಲವೆ?

ಕನಸು ಹಿತವೇನೋ ಸಹಜ. ಆದರೆ ಬರೀ ಕನಸಿನಿಂದ ಮನಸ್ಸು ತುಂಬುವುದಿಲ್ಲ. ಅದಕ್ಕೆ ಜಾಗರಣೆಯೇ ಬೇಕು—ಸತ್ಯಸ್ವರೂಪವಾಗ ಬೇಕು; ಸ್ವಪ್ನವಲ್ಲ.

ಹಾಗಾದರೆ ಏನಂತ ಯೋಚಿಸುತಿದ್ದಿರಿ?

ಆದಿನ ನಿನ್ನ ಕೂಡೆ ಕರೆದಾಗ ಬರುತ್ತೇನೆಂದು ಹೇಳಿ ಹೋಗಿರುವೆನಲ್ಲ?

ಅಹುದು. ಆದರೆ ನೀವು ಹೋದುದು ಒಳ್ಳೆಯದಾಗಲಿಲ್ಲ–ಬಂದುದೂ ಒಳ್ಳೆಯದಾಗಲಿಲ್ಲ.

ಅದೇನು?

ನೋಡಿ. ಬಂದೀವಾಸದಿಂದಾಗಿ ನೀವು ಎಷ್ಟು ಬಡವಾಗಿದ್ದೀರಿ? ಇನ್ನೂ ಮೈ ತುಂಬಲಿಲ್ಲ!

ಅಹುದು. ಬಡವಾಗಬೇಕೆಂದೇ ಬಂದಿ ಸೇರಿರುವೆನು.—ನಾವು ಬಡವರೆಂದು ನೀನು ಆದಿನ ಹೇಳಲಿಲ್ಲವೆ?

ಅಲ್ಲವೆ ಮತ್ತೆ?

ನಿನ್ನ ಬಡತನವೆಲ್ಲಿದೆ ಹೇಳು?

ಎಲ್ಲಿಲ್ಲ?

ಎಲ್ಲಿಯೂ ಇಲ್ಲ!

ಅದು ಹೇಗೆ?

ದೊಡ್ಡತನ ಪೆಟ್ಟಿಗೆಯೊಳಗಿರುವುದಲ್ಲ.

ಮತ್ತೆಲ್ಲಿ?

ಹೃದಯದಲ್ಲಿ.

ನನ್ನ ಹೃದಯದಲ್ಲಿ ದೊಡ್ಡತನವಿದೆಯೆ?

ಸಹಜವಾಗಿಯಿದೆ!

ಅದು ಹೇಗೆ ಗೊತ್ತು ನಿಮಗೆ?

ನನಗಲ್ಲದೆ ಮತ್ತಾರಿಗೆ ಗೊತ್ತು!

ಯಾರಿಗೂ ಇಲ್ಲ

ಹಾಗಾದರೆ ನನಗೇ ಗೊತ್ತು!

ಒಪ್ಪಿದೆ. ನಿಮ್ಮ ಕೂಡೆ ವಾದಹೂಡಲು ನಾನು ಸಮರ್ಥಳಲ್ಲ. ನಾನು ಎಷ್ಟಾದರೂ ಹೆಂಗಸು!

ಹೆಂಗಸಾದುದರಿಂದಲೇ ಅಂತಹ ದೊಡ್ಡತನವನ್ನು ಹೃದಯದಲ್ಲಿರಿಸಿ ಕಾದಿರುವಿ. ಆದುದರಿಂದಲೇ ಇಷ್ಟು ಕಷ್ಟಗಳನ್ನು ಅನುಭವಿಸಿರುವಿ.

ನಾನೇನು ಕಷ್ಟ ಪಟ್ಟಿರುವೆನು?

ಕಷ್ಟ ಪಟ್ಟಿರುವುದರಿಂದಲೇ ಆದಿನ ರಾತ್ರಿ ಸ್ವಾಮಿ—ಸ್ವಾಮಿ— ಎಂದು ಕೂಗಿ ಕರೆದಿರುವಿ!

ನಾನು ಹಾಗೆ ಕರೆದಿರುವೆನೆ?

ನೀನು ಕರೆಯದೆ ನಾನು ಬಂದೇನೆ?

ಅದೇ ಬಂದುದರ ಪರಿಣಾಮವಾಯಿತಲ್ಲ?

ಏನಾಯಿತು?

ತಲೆಯೊಡೆಯಿತು

ಇದಕ್ಕೂ ಹೆಚ್ಚಿಗೆ ತಲೆಯೊಡೆದುದನ್ನು ಬೆಂಗಳೂರಲ್ಲಿ ಕಂಡಿರುವೆನು.

ಅದು ದೇಶಕ್ಕಾಗಿ—ಸ್ವಾತಂತ್ರ್ಯಕ್ಕಾಗಿ!

ಅದು ದೇಶದ ಸ್ವಾತಂತ್ರ್ಯಕ್ಕಾಗಿಯಾದರೆ ಇದು ವ್ಯಕ್ತಿಯ ಸ್ವಾತಂತ್ರ್ಯಕ್ಕಾಗಿ! ಜನರನ್ನು ರಕ್ಷಿಸದವನು ಜನತೆಯನ್ನು ರಕ್ಷಿಸಲಾರ. ನೋಡು ಶಾರದಾ! ನೋವಿನಿಂದಲೂ ಒಂದು ಸುಖವಿದೆ. ಅದನ್ನು ಅನುಭವಿಸಲು ಮಾತ್ರ ಉದಾತ್ತ ಭಾವನೆಯು ಬೇಕು. ಸಂಕುಚಿತ ದೃಷ್ಟಿಯಿಂದ ಅದರ ವೈಭವವನ್ನು ಕಾಣಲು ಸಾಧ್ಯವಿಲ್ಲ. ಅದು ಆಕಾಶಕ್ಕೂ ವಿಶಾಲವಾಗಿದೆ. ಸಮುದ್ರಕ್ಕೂ ಮಹತ್ತಾಗಿದೆ. ನಾವು ಪುರಾಣಗಳಲ್ಲಿ ವಿಶ್ವರೂಪವೆನ್ನುತ್ತೇವಲ್ಲ?—

ಎಂದರೆ ಏನದು?

ಅದೇ ಜನತಾಸ್ವರೂಪ! ಅದೇ ವಿಷ್ಣುವಿನ ಮಹತ್ ಸ್ವರೂಪ! ನಾವೇನೋ ದಿನನಿತ್ಯದಲ್ಲಿ ವಿಷ್ಣುವಿನ ದಶಾವತಾರಗಳನ್ನು ಪೂಜಿಸುತಿದ್ದೇವೆ. ಆದರೆ ಈ ಮಹತ್ವವನ್ನು ಒಂದು ಕ್ಷಣವೂ ಅರಿತು ನೋಡುವುದಿಲ್ಲ. ಜನತೆಯ ದುಃಖ ಆಕಾಂಕ್ಷೆಗಳ ಕಡೆಗೆ ಕಿವಿಗೊಡದೆ ತೆರಳುತಿದ್ದೇವೆ. ಅಂತಹ ವಿಶ್ವರೂಪವನ್ನು ಒಮ್ಮೆ ಕಣ್ಣುತೆರೆದು ಕಂಡೆವೆಂದರೆ ಮತ್ತೆ ಯಾವ ಕುರುಕ್ಷೇತ್ರದ ಭಾರತ ಯುದ್ಧಕ್ಕೂ ಅಂಜಲಾರೆವು!

ನಿಮಗೇನು ತುಂಬಾ ಹೊಡೆತ ಬಿದ್ದಿತ್ತೆ?

ಹಾಂ ಸ್ವಲ್ಪ ಸ್ವಲ್ಪ. ಆದರೂ ನನಗಿಂತಲೂ ಹೆಚ್ಚು ಹೊಡೆತ ತಿಂದವರನ್ನು ಕಂಡು ನಾನು ಧೃತಿ ತಂದುಕೊಂಡೆನು. ಮತ್ತೆ ಆದಿನ ನಾನು ನಿನಗೆ ಬರೆದಿದ್ದೆನಲ್ಲ—ಆ ಕಾಗದ—

ಕಾಗದವಲ್ಲ—ನನ್ನ ಕೈವಲ್ಯ!

ಆ ಕಾಗದ ಕಂಡು ನೀನು ಅಳಲಿಲ್ಲವಲ್ಲ?

ಶಾರದೆಯು ಕೃಷ್ಣಸ್ವಾಮಿಯ ಮುಖವನ್ನು ನೋಡುತ್ತ—ನಾನು ಅಳದೆ ಹೇಗೆಯಿರಲಿ?

ಅದೇನು?

ನೀವು ಆ ಕಾಗದವನ್ನು ನನಗೆ ಏಕೆ ಬರೆದಿರಿ?

ನಿನ್ನ ಸಹಾನುಭೂತಿಗೆ.

ಹಾಗಾದರೆ ಅದಕ್ಕೇ ನಾನು ಅತ್ತಿರುವೆನು. ಆ ಸಮಯದಲ್ಲೂ ನನ್ನ ನೆನಪಾಯಿತಲ್ಲ—ಅಷ್ಟಕ್ಕೆ!

ಹೌದು. ನಿನ್ನ ನೆನಪೇ ನನ್ನಲ್ಲಿ ಶಕ್ತಿಯನ್ನು ತುಂಬುತಿದ್ದಿತು. ನಿನಗೆ ಗೊತ್ತಿಲ್ಲವೆ? ಹೆಂಗುಸು ಯಾವಾಗಲೂ ಶಕ್ತಿ ಸ್ವರೂಪ!

ಆಕೆ ನಗುತ್ತಾ–ಆದುದರಿಂದಲೇ ಏನೋ ಹೆಂಗುಸು ಯಾವಾಗಲೂ ತೊಂದರೆಗೆ ಕಾರಣಳಾಗಿ ಅಳುತ್ತಿರುವುದು—ಎಂದಳು.

ಏನಾಯಿತು? ಅಳುವಿನಿಂದಲೇ ಯಾವಾಗಲೂ ಮನುಷ್ಯನ ಕ್ರಿಯಾ ಶಕ್ತಿಯು ಪ್ರಚೋದಿಸಲ್ಪಡುವುದು. ಹೆಂಗುಸು ಅಳದಿದ್ದರೆ ಗಂಡುಸು ಈತನಕ ಪ್ರಪಂಚದಲ್ಲಿ ಜಡನಾಗಿ ಹೋಗಿ ಬಿಡುತಿದ್ದನೋ ಏನೋ! ಹೆಂಗುಸಿನ ಕಣ್ಣಿನಲ್ಲಿ ನೀರಲ್ಲ—ಬೆಂಕಿಯಿದೆ!

ಶಾರದೆಯು ನಸುನಕ್ಕಳು.

ಏನು ನಗುತಿದ್ದಿ?

ಏನಿಲ್ಲ. ನನಗೆ ಕಣ್ಣು ತೆರೆದು ಬೆಂಕಿ ಕಾರಲು ಅಂಜಿಕೆ ಯಾಗುತ್ತಿದೆ! ಕಣ್ಣು ಮುಚ್ಚಿಕೊಳ್ಳಲೆ?

ಹೆಂಗುಸಿಗೆ ಕಣ್ಣು ಮುಚ್ಚಿಕೊಂಡರೂ ಪ್ರಪಂಚ ಕಾಣುವುದು!

ಯಾವ ಪ್ರಪಂಚ?

ನೀನೇ ಮುಚ್ಚಿಕೊಂಡು ನೋಡು—

ಶಾರದೆಯು ಕಣ್ಣು ಮುಚ್ಚಿ ಕೊಂಡಳು. ಕೃಷ್ಣಸ್ವಾಮಿಯು ಅವಳ ಕಣ್ಣುಗಳನ್ನು ಕೈಗಳಿಂದ ಹಿಡಿದು ಅವಳ ಮಿದುಗೆನ್ನೆಯ ಮೇಲೆ ಮೆತ್ತನೆ ಮುದ್ದಿಟ್ಟು—ಇದೇ ಪ್ರಪಂಚ—ಕುರುಡು ಪ್ರಪಂಚ!—ಎಂದು ನಕ್ಕನು.

ಶಾರದೆಯು ಅವನ ಕೈ ಬಿಡಿಸಿಕೊಂಡು ನಾಚಿ ಓಡಿಹೋದಳು!

ಕುಸುರು ೧೦ ಧೀರೇ ಸಮೀರೇ

ದಿನಗಳ ಮೇಲೆ ದಿನಗಳು ಉರುಳಿಹೋದುವು. ನಾಗರ ಪಂಚಮಿಯಿಂದ ತೊಡಗಿದ ಹಬ್ಬಗಳು ಒಂದೊಂದೇ ಮೇಲೆದ್ದು ಬರತೊಡಗಿದುವು. ಹಳ್ಳಿಯು ಮಳೆಗಾಲದ ಅನಂತರ ಧಾನ್ಯಸಮೃದ್ಧವಾಗಿ ನಗುತಿದ್ದಿತು. ಹಾಗೆಯೇ ಜೀವನವೂ ನಗುತಿದ್ದಿತು.

ಕೃಷ್ಣಸ್ವಾಮಿಯು ಈಗ ಸಂಪೂರ್ಣವಾಗಿ ಗುಣಹೊಂದಿ ತೊಂದರೆಯಿಲ್ಲದೆ ತಿರುಗಬಲ್ಲನು. ಹಾಗೆ ಸುಖವಾಗಿ ದಿನಗಳು ಕಳೆದಂತೆ ಶಾರದೆಯು ಭಾರ ಭಾರವಾಗಿ ಉಸಿರು ಬಿಡತೊಡಗಿದಳು. ಅವಳ ಹೃದಯದಲ್ಲಿ ಒಂದು ಆಶಂಕೆಯ ಕಣೆಯು ಮೇಲೆದ್ದು ಕೇಳುತಿದ್ದಿತು–ಎಲ್ಲವೂ ಸುಖವಾಯಿತು. ಎಲ್ಲವೂ ನೆಟ್ಟಗಾಯಿತು. ಆದರೆ ಇನ್ನು ಇಲ್ಲಿ ನಿನ್ನ ಅಗತ್ಯವೇನಿದೆ? ಆಪತ್ತಿನಲ್ಲಿ ಕೃಷ್ಣಸ್ವಾಮಿಯ ಹೃದಯವನ್ನು ತುಂಬಿದ ಮಮತೆಯು ಜಮೀನ್ದಾರರ ವಿಶಾಲವಾದ ಮನೆಯನ್ನು ತುಂಬಲು ಸಾಧ್ಯವಿದೆಯೆ? ಅವನ ಹೃದಯದಲ್ಲಿ ದೊರೆತ ಸೌಭಾಗ್ಯದಸ್ಥಾನವು ಆ ಮನೆಯಲ್ಲಿ ದೊರೆಯಲು ಸಾಧ್ಯವಿದೆಯೆ? ಹಾಗಾದರೆ ನಿನ್ನ ಸ್ಥಾನವೆಲ್ಲಿ?—

ಶಾರದೆಯು ಯಾರೂ ಇಲ್ಲದ ವೇಳೆ ಕಣ್ಣೀರುತುಂಬಿ ನಿಟ್ಟುಸಿರು ಬಿಟ್ಟಳು. ಆ ಕಣ್ಣೀರು ಅವಳ ಕೋಣೆಯ ಗೋಡೆಗಳನ್ನು ದಾಟಿ ಹೊರಗೆ ಹರಿಯಲಿಲ್ಲ. ಆದರೆ ಅವಳ ಎದೆಯ ಡಡದಡಿಕೆಯು ನಗಾರಿಯಂತೆ ಬಡಿದು ಅದನ್ನೇ ಸಾರುತಿದ್ದಿತು. ಅವಳ ಸೇದೆಯು ರಣಗಳೆಯಂತೆ

ಕೂಗುತಿದ್ದಿತು. ಕೃಷ್ಣಸ್ವಾಮಿಯ ಅಪರಿಪಕ್ವ ಹೃದಯವು ಅದನ್ನು ತಿಳಿಯಲು ಸಮರ್ಥವಾಗಲಿಲ್ಲ. ಅವನು ಅವಳ ಕಣ್ಣುಗಳಲ್ಲಿ ನಗೆಯನ್ನು ಮಾತ್ರ ಕಾಣುತಿದ್ದನು. ಹೃದಯದಲ್ಲಿ ಮಮತೆಯ ಮಂತ್ರ ಪಾಠವನ್ನು ಮಾತ್ರ ಕೇಳುತಿದ್ದನು. ಅದಕ್ಕೂ ಮಿಕ್ಕಿದ ಮೌನಭಾಷೆಯನ್ನು ಯಾರು ತಿಳಿಯಬೇಕು? ಅವನ ಅಂದಿನ ವೇದನೆಯನ್ನು ಶಾರದೆಯ ಹೆಣ್ಣು ಹೃದಯವು ಅರಿತು ತನ್ನ ವೇದನೆಯೊಂದಿಗೆ ಹೊಂದಿಸಿದ್ದಿತು. ಆದರೆ ಈಗ ಅವಳ ಮೌನಭಾಷೆಯನ್ನು ಆ ಮನೆಯಲ್ಲಿ ಯಾರೊಡನೆ ಹೇಳಬೇಕು?

ಕಟ್ಟ ಕಡೆಗೆ ವಿಠಲಾಚಾರ್ಯರು ಅದನ್ನು ಅವಳ ಕಣ್ಣಿನಾಳದಿಂದ ಹೊರಸೆಳೆದು ನೋಡಿದರು. ಉಸಿರಿನಳತೆಯಿಂದ ಅಳೆದು ನೋಡಿದರು. ಮತ್ತೆ ಒಂದುದಿನ ಯಾರೂ ಇಲ್ಲದವೇಳೆ ಮೈದಡವಿ ಕೇಳಿದರು—ಶಾರದಮ್ಮ—ಏನು ಕೊರಗುತಿದ್ದಿ?

ಆಕೆಯು ಕೈ ಬೆರಳು ಕಣ್ಣಿಗೆ ತಾಗಿದಂತೆ ಹೌಹಾರಿ—ಎಲ್ಲಿ—ಏನು ಎಂತದು? ಎಂದಳು.

ವಿಠಲಾಚಾರ್ಯರು ಕನಿಕರದಿಂದ ಎಲ್ಲಿಯೂ ಇಲ್ಲ—ಏನೂ ಇಲ್ಲ—ಎಂತದೂ ಇಲ್ಲ! ಈಗ ಹೇಳು. ಸತ್ಯವಾಗಿ ಹೇಳು. ಮಗಳು ತಾಯೊಡನೆ ಹೇಳುವಂತೆ ಹೇಳು. ನಿನಗೇನಾಯಿತು? ಮರೆಮಾಸಬೇಡ.

ಶಾರದೆಯು ಏನೂ ಹೇಳಲಿಲ್ಲ. ಆದರೆ ಕಟ್ಟೊಡೆದ ರೀತಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅವಳನ್ನು ಸಂತೈಸಿ ವಿಠಲಾಚಾರ್ಯರು ಹೇಳತೊಡಗಿದರು—ಅಳಬೇಡಮ್ಮ ನಾನೂ ಒಬ್ಬ ಸಂಸಾರಿಗ. ಸಂಸಾರದ ಸಾವು ನೋವುಗಳನ್ನು ನಾನು ಬೇಕಾದಂತೆ ಅನುಭವಿಸಿ ಪರಿಣತನಾಗಿದ್ದೇನೆ. ನಿನ್ನ ಮನಸ್ಸಿನ ನೋವು ನನಗೆ ಚೆನ್ನಾಗಿ ತಿಳಿದಿರುತ್ತದೆ. ಈ ಮುದುಕನ ಹೃದಯದಲ್ಲಿ ಬೇಕಾದಷ್ಟು ಅನುಭವವಿದೆ. ನೀನು ದುಃಖಿಸಬೇಡ. ನಾನು ಎಲ್ಲವನ್ನೂ ಸರಿಗೊಳಿಸುತ್ತೇನೆ. ಇದು ಹೀಗೆಯೇ ನಡೆಯುತ್ತಾ ಹೋದರೆ ಸಾಲದು. ನನಗೂ ತಿಳಿದಿದೆ. ಇದಕ್ಕೊಂದು ಸಿದ್ಧಾಂತವಾಗಲೇ ಬೇಕು. ಇದರ ಉಪಸಂಹಾರ ನಾನು ಬರೆಯುತ್ತೇನೆ. ಚಿಂತಿಸ ಬೇಡ!

ವಿಠಲಾಚಾರ್ಯರು ಆ ಕೋಣೆಯಿಂದ ಹೊರಬಂದವರೇ ನೇರವಾಗಿ ಶ್ರೀನಿವಾಸರಾಯರ ಕೋಣೆಯನ್ನು ಹೊಕ್ಕಿ ಅವರ ಇದಿರುಗಡೆ ಕುಳಿತು ಕೊಂಡರು. ಕುಳಿತು ಒಂದು ಚಿಟುಕೆ ನಶ್ಯವೇರಿಸಿ ಸುಮ್ಮನಿದ್ದರು.

ರಾಯರು ಅವರ ಮುಖವನ್ನು ನೋಡಿ--ಏನು ಆಚಾರ್ಯರು ಸುಮ್ಮನಿದ್ದೀರಿ.

ಈ ಹಲವು ದಿನಗಳ ಸಂಸರ್ಗದಿಂದಾಗಿ ಮತ್ತು ಅಂದಿನ ಸಂವಿಧಾನದಿಂದಾಗಿ ಜಮೀನ್ದಾರರಿಗೆ ವಿಠಲಾಚಾರ್ಯರ ಮೇಲೆ ತುಂಬಾ ಗೌರವವು ನೆಲೆಯಾಗಿದ್ದಿತು. ಎಷ್ಟೋ ವೇಳೆ ಅವರ ಸೂಕ್ತ ಸಲಹೆಗಳ ಮುಂದೆ ರಾಯರ ಸ್ವಭಾವವು ಮೃದುವಾಗುತಿದ್ದಿತು.

ವಿಠಲಾಚಾರ್ಯರು ಸ್ವಲ್ಪ ಹೊತ್ತು ಮತ್ತೂ ಸುಮ್ಮನಿದ್ದು ಹೇಳಿದರು–ಏನಿಲ್ಲ. ನಾನು ಇಷ್ಟು ದಿನಗಳ ಮೇಲೆ ಒಂದು ಅನುಭವಕ್ಕೆ ಬಂದಿದ್ದೇನೆ.

ಏನದು ಹೊಸ ಅನುಭವ ಆಚಾರ್ಯರೆ?

ಮತ್ತೇನಿಲ್ಲ. ನಾನು ನನ್ನೊಡನೆಯೇ ಈಪ್ರಶ್ನೆಯನ್ನು ಹಾಕಿಕೊಂಡಿದ್ದೇನೆ. ಹೆಂಡತಿ ಸತ್ತಾಗ ಗಂಡಸು ಬೇಕಾದಷ್ಟು ಅಳುವುದಿದೆ. ಆದರೆ ನಿಜವಾಗಿ ಆ ಕಷ್ಟವು ಅವನಿಗೋ ಅವನ ಮಕ್ಕಳಿಗೋ?

ರಾಯರು ಏನೂ ಮಾತಾಡದೆ ಆಶ್ಚರ್ಯದಿಂದ ಅವರ ಮುಖವನ್ನೇ ನೋಡುತಿದ್ದರು.

ಆಗ ಹೆಂಡತಿ ಸತ್ತರೆ ಗಂಡಸು ಬೇರೆ ಮದುವೆ ಮಾಡಿಕೊಳ್ಳಬಹುದು.

ಮಾಡಿಕೊಳ್ಳದವನಾದರೆ?—ಎಂದು ರಾಯರು ಮೀಸೆಯ ಮೇಲೆ ಕೈಯಾಡಿಸಿದರು.

ಮಾಡಿಕೊಳ್ಳದವನಾದರೂ ಚಿಂತಿಲ್ಲ. ಅವನಿಗೆ ಬೇರೆ ಮಾಡಿಕೊಳ್ಳಲು ಸಾಧ್ಯವಿದೆ ಎಂಬ ಆತ್ಮವಿಶ್ವಾಸದಿಂದಾಗಿ ಅದು ಕಷ್ಟಕ್ಕೆ ಬರುವುದಿಲ್ಲ. ಅವನ ಹೃದಯವು ಆ ಚಿಂತೆಗೆ ಅಂಜುವುದಿಲ್ಲ. ಆದರೆ ಮಕ್ಕಳು ಮಾತ್ರ ತಾಯಿಹೋಗುದರಿಂದ ಬೋನಿಗೆ ಬಿದ್ದು ಪಾರಾದ ಇಲಿಗಳಂತೆ ಎಂದೆಂದಿಗೂ ಬೆದರುತಿರುವುವು. ತಂದೆಯು ಅಂತಹ ವಿಶ್ವಾಸವನ್ನು ದೂರ

ವಿರಿಸಿ ಕಂಡಾಗಮಾತ್ರ ಮಕ್ಕಳ ಆ ಚಿಂತೆಯು ಅವನಿಗೆ ವೇದ್ಯವಾದೀತು. ಅನ್ಯಥಾ ತಿಳಿಯಲಾರದು.

ಏನು ಆಚಾರ್ಯರೇ! ನೀವು ದೊಡ್ಡ ವೇದಾಂತ ತೊಡಗಿಬಿಟ್ಟಿರಲ್ಲಿ?

ಏನಿಲ್ಲ. ಇದು ನನ್ನ ಅನುಭವ. ನಾನು ಹೆಂಡತಿಯನ್ನು ಕಳಕೊಂಡು ಮಗಳನ್ನು ಆ ದೃಷ್ಟಿಯಿಂದ ನೋಡಿದೆ. ಕೊನೆಗೆ ಮಗಳನ್ನೂ ಕಳೆದು ಕೊಂಡೆನು. ಆದರೂ ಚಿಂತಿಲ್ಲ. ಶಾರದಮ್ಮನನ್ನು ಕಂಡಾಗ ನನ್ನ ಮಗ ಳನ್ನು ಕಂಡಂತೆಯೇ ತಿಳಿದುಕೊಂಡೆನು. ಆದುದರಿಂದಲೇ ಅವಳ ಮನಸ್ಸಿನ ದುಃಖವನ್ನು ತಾಯಿಯ ಹಾಗೆ ತಿಳಿಯಲು ಸಮರ್ಥನಾದೆ.

ಇದೇನು ಬಂತು ಆಚಾರ್ಯರೆ? ನೀವು ಏನು ಹೇಳಲು ಹೊರಟಿದ್ದೀರಿ?

ಏನೂಯಿಲ್ಲ. ಎಲ್ಲರಿಗೂ ಈ ದೃಷ್ಟಿಬೇಕು. ಅದಿಲ್ಲವಾದರೆ ಹೆಂಡತಿ ಸತ್ತು ಬೇರೆ ಮದುವೆಯಾಗದೆ ಇದ್ದುದರಿಂದ ಏನು ಸಾರ್ಥಕವಾದಂತಾ ಯಿತು?

ರಾಯರು ಎದ್ದು ನಿಂತು—ಆಚಾರ್ಯರೆ! ನೀವು ಏನನ್ನು ಹೇಳಬೇಕೆಂ ದಿದ್ದೀರೋ ಅದನ್ನು ದಯೆಯಿಟ್ಟು ಸೀದಾ ಸೀದಾ ಹೇಳಬೇಕು. ನಾನು ಕೇಳಲು ತಯಾರಿದ್ದೇನೆ!

ನಾನೇನು ಹೇಳುವುದಿದೆ? ನೀವೇ ತಿಳಿದುಕೊಳ್ಳಬೇಕು. ನೀವೇ ನಿಮ್ಮ ಹೃದಯದತ್ತ ಹಣಕಿ ನೋಡಿಕೊಳ್ಳಬೇಕು. ಮತ್ತೆ ಬೇರೆಯವರ ದುಃಖದೆಡೆಗೆ ನೋಡಿ ತಿಳಿದುಕೊಳ್ಳಬೇಕು.

ಎಂದರೆ ನಾನೀಗ ಏನು ಮಾಡಬೇಕು ಹೇಳಿ !--ಎಂದು ರಾಯರು ಆ ಕಡೆ ಈ ಕಡೆ ತಿರುಗ ತೊಡಗಿದರು.

ಮತ್ತೇನಿಲ್ಲ. ಮೊತ್ತ ಮೊದಲಿಗೆ ನಿಮ್ಮ ಪುರೋಹಿತರನ್ನು ಬರ ಮಾಡಿಸಿ ಲಗ್ನಕ್ಕೆ ಒಳ್ಳೆಯ ದಿನ ಯಾವುದೆಂದು ಕೇಳಬೇಕಾಗಿದೆ.

ಎಂದರೆ ಶಾರದೆಯೊಡನೆ ನನ್ನ ಮಗನ ಲಗ್ನವಾಗಬೇಕೆಂದು ನಿಮ್ಮ ಅಭಿಪ್ರಾಯವೇನು?

ಸರಿ ಜ. ಅದನ್ನೇ ಹೇಳುತಿದ್ದೇನೆ.

ಹಾಗಾದರೆ ಈ ಸಂಬಂಧ ನಮಗೆ ಹೇಳಿಸಿದುದೆಂದು ನೀವು ಅಭಿಪ್ರಾಯ ಪಡುತ್ತೀರೇನು?

ಹಾಗೆ ಅಭಿಪ್ರಾಯ ಪಡುವುದು ಮಾತ್ರವಲ್ಲ ನೀವು ಹಾಗೆ ಮಾಡದಿದ್ದರೆ ನಿಮ್ಮ ತೀರಿಹೋದ ಹೆಂಡತಿ ಆ ಪುಣ್ಯ ತಾಯಿಯನ್ನು ಮತ್ತೊಮ್ಮೆ ಕೊಲ್ಲುತ್ತೀರೆಂದೂ ಅಭಿಪ್ರಾಯ ಪಡುತ್ತೇನೆ!

ಏನು?—ಎಂದು ರಾಯರು ಇದಿರು ನಿಂತು ವಿಠಲಾಚಾರ್ಯರನ್ನು ದುರದುರನೆ ನೋಡತೊಡಗಿದರು. ಆ ಬ್ರಾಹ್ಮಣ ಅಲುಗದೆ ಕುಳಿತಿದ್ದು—ಹೌದು ಅದನ್ನೇ ಮತ್ತೂ ಮತ್ತೂ ಹೇಳುತಿದ್ದೇನೆ—ಎಂದು ಎದ್ದು ನಿಂತು ರಾಯರನ್ನೇ ನೋಡ ತೊಡಗಿದ! ಇಬ್ಬರೂ ಕ್ಷಣಕಾಲ ಒಬ್ಬರನ್ನೊಬ್ಬರು ನೋಡಿಕೊಂಡರು. ಕೊನೆಗೆ ರಾಯರು ಮೆಲ್ಲನೆ ಮುಖ ಕೆಳಗಿಟ್ಟು ನಾಲ್ಕು ಸುತ್ತು ತಿರುಗಿ ನಿದಾನವಾಗಿ ನುಡಿದರು—ಆಚಾರ್ಯರೇ! ನಾನು ಈತನಕ ಯಾರೊಡನೆಯೂ ಸೋತಿಲ್ಲ. ಆದರೆ ಈಗ ನಿಮ್ಮೊಡನೆ ಸೋತಿದ್ದೇನೆ. ಯಾರೂ ನನ್ನ ಕೂಡೆ ಈ ರೀತಿ ಮಾತಾಡಿದುದಿಲ್ಲ .ಆಗಲಿ ನಿಮ್ಮ ಮಾತಿಗೆ ನನ್ನ ಒಪ್ಪಿಗೆ.

ವಿಠಲಾಚಾರ್ಯರು ಮುಂದಿದ್ದ ರಾಯರ ಹೆಂಡತಿಯ ಭಾವಚಿತ್ರದ ಕಡೆ ನೋಡುತ್ತ —ಈ ಮಾತಾಯಿಗೆ ಎಷ್ಟೋ ಸಂತೋಷವಾದೀತು!—ಎಂದು ಮೆಲ್ಲನೆ ಮಾಳಿಗೆಯೇರಿದರು.

ಹೆಜ್ಜೆಯ ಸಪ್ಪಳ ಕೇಳಿ ಶಾರದೆಯು ಕೃಷ್ಣಸ್ವಾಮಿಯ ಕೋಣೆಯಿಂದ ಹೊರನುಸುಳುವುದರಲ್ಲಿದ್ದಳು. ಅವಳನ್ನು ತಡೆದು ವಿಠಲಾಚಾರ್ಯರು—ಏನು ಮಕ್ಕಳೆ? ಏಕೆ ಈ ಸೆಕೆಗೆ ಈ ಕೋಣೆಯಲ್ಲಿ ಕುಳಿತು ಕಷ್ಟಬಡುತ್ತಾಯಿದ್ದೀರಿ? ಇವತ್ತು ಹುಣ್ಣಿಮೆ ಹೂವಿನಂತಿದೆ! ಆ ಮಾವಿನ ತೋಪಿನ ಕಡೆಯಾದರೂ ಹೋಗಿ ಅಡ್ಡಾಡಿ ಬರಬಾರದೆ? ಹೋಗೋ ಕೃಷ್ಣಸ್ವಾಮಿ! ಈ ಸತ್ಯಭಾಮೆಯನ್ನು ಸ್ವಲ್ಪ ಕೈಹಿಡಿದು ಕರೆದುಕೊಂಡು ಹೋಗು--ಎಂದು ಕಣ್ಣು ಮಿಟುಕಿಸಿ ಹೇಳಿದರು--

ಧೀರೇ ಸಮೀರೇ ತಟನೀ ತೀರೇ
ಚಲತಿ ವನೇ ವರನಾರೀ

ಮಾ ಕುರು ಧನುರ್ಧರ ಗಮನ ವಿಲಂಬಂ
ಅತಿ ಮೃದುಲಾ ಸುಕುಮಾರೀ!—

ಅಷ್ಟು ಹೇಳಿದುದೇ ತಡ. ಇಬ್ಬರೂ ಒಂದೊಂದು ಬಾಗಿಲಿನಿಂದ ನುಸುಳಿ ಮಾವಿನ ತೋಪಿನತ್ತ ಓಡಿಹೋಗಿ ಒಬ್ಬರನೊಬ್ಬರು ಕೂಡಿ ಕೊಂಡರು.

ಹುಣ್ಣಿಮೆಯ ದಿನ. ಪೂರ್ಣಚಂದ್ರನು ಆಕಾಶದಲ್ಲಿ ಮುಗಿಲ ಹಾಯಿಬಿಟ್ಟು ಮೆಲ್ಲಮೆಲ್ಲನೆ ಮೇಲೇರಿ ಬರುತಿದ್ದನು. ಭೂಮಿಯ ಹೊಳೆ ಬಯಲು ಬೆಟ್ಟಗಳು ಮುಗ್ಧ ಭಾವದಿಂದ ಅದನ್ನೇ ದಿಟ್ಟಿಸುತ್ತ ಮೈಮರೆ ತಿದ್ದುವು. ಮಾವಿನ ತೋಪಿನೆಡೆಯಿಂದ ಪ್ರೇಮಿಗಳಿಬ್ಬರೂ ಮಾತಿಲ್ಲದೆ ಆ ಬ್ರಹ್ಮಾನಂದವನ್ನು ಸವಿಯುತಿದ್ದರು. ಕೊಂಚ ಹೊತ್ತಿನ ಮೇಲೆ ಚಕೋರಿಯಂತೆ ಶಾರದೆಯು ಗುಣುಗುಟ್ಟಿದಳು—

ಕಣ್ಣು ತುಂಬಿದ ರೀತಿ ಮನಸು ತುಂಬಿಹುದಿಲ್ಲ
ಮನಸು ಮೌನವೆ ಮೌನ ನಿತ್ಯ ಮೌನ!
ನೆನಸಿನಲಿ ನಲಿದಾಡಿ ಕನಸಿನಲಿ ಕೊಂಡಾಡಿ
ಕಾಣುವಾದಿನವುಂಟೆ? ಎನ್ನ ರಮಣ!—
ಕೃಷ್ಣಸ್ವಾಮಿಯು ತಾನೂ ಮೆಲ್ಲ ಮೆಲ್ಲನೆ ಹಾಡಿದನು—
ಗೋಕುಲದ ಕೇರಿಯಲಿ ಕೊಳಲನೂದಲಿಕಾಗಿ
ಬನಕೆ ಬಂದಿಹ ಭವ್ಯ ಪುರುಷನಾರೆ!
ಆ ಕೊನೆಯ ಮಾರ್ಗದಲಿ ಕಾತರದ ಕಣ್ಣೈಸಿ
ಬಂದು ಬಿಗಿದಪ್ಪಿದಳು ಗೋಪಬಾಲೆ!—

ಒಂದಿಗೆ ಇಬ್ಬರೂ ನಕ್ಕರು. ಆ ನಗೆಯು ಕೆಳಗಡೆ ಬೆಳ್ಳಿಯ ರೇಖೆ ಯಂತೆ ಹರಿಯುತಿದ್ದ ಕಾಲುವೆಯ ಕಿರು ಸದ್ದಿನೊಡನೆ ಕೂಡಿಹೋಯಿತು!

ಮತ್ತೆ ಇಬ್ಬರೂ ಮೌನವಾಗಿದ್ದರು. ಮನಸ್ಸಿನ ತುಂಬುಸಂತೋಷ ವನ್ನು ಹೊರಗೆಡಹಲು ಅವರಿಗೆ ಶಬ್ದವೇ ದೊರೆಯಲಿಲ್ಲ. ಇಬ್ಬರೂ ಒಬ್ಬರ ನೊಬ್ಬರು ನೋಡುತ್ತ ಕುಳಿತರು. ಆ ನೋಟಕ್ಕೆ ಚಂದ್ರನೇ ನಾಚಿದನು!

ಕೃಷ್ಣಸ್ವಾಮಿಯು ಅವಳ ಮುದ್ದು ಮುಖವನ್ನು ಎದೆಯ ಮೇಲಿರಿಸಿಕೊಂಡು ಮೆಲ್ಲನೆ ಕರೆದನು--

ಶಾರೀ—

ಹುಂ

ನಾನು ಆ ದಿನ ನಿನ್ನ ಪೂಜೆಗೆ ಎಲ್ಲಿದ್ದರೂ ಒದಗಿ ಬರುವೆನೆಂದು ಹೇಳಿರುವೆನಲ್ಲ?

ಶಾರದೆಯು ಎಚ್ಚರಗೊಂಡವಳಂತೆ—ಹೌದು. ನಮ್ಮ ಪೂಜೆ ಬಂದೇ ಬಂದಿತಲ್ಲ!—ಎಂದಳು.

ಬಂದರೆ ಏನಾಯಿತು?

ಸಪ್ಪನಿಗೆ ಅದರ ಗೋಚರವೇ ಯಿಲ್ಲ!

ಬೇಡ. ನನಗೆ ಚೆನ್ನಾಗಿ ಗೋಚರವಿದೆತಾನೆ?

ನೀವು ಆ ದಿನ ಬರೆದು ಕೊಟ್ಟುಹೋದ ಪದ್ಯವನ್ನು ನಾನು ಕಳೆದ ವರುಷ ಬಹಳದುಃಖದಿಂದ ಹಾಡಿದ್ದೇನೆ. ಈ ವರ್ಷ ಬೇರೇನೇ ಬರೆದುಕೊಡಬೇಕು! ಹುಂ?

ಊಹೂಂ

ಅದೇನು?

ಅದೇನೆಂದರೆ ಮೊದಲಿನ ಕಾಲದಲ್ಲಿಯಾವರೆ ಕವಿತೆ ಬರೆದು ಕೊಟ್ಟ ಕವಿಗಳಿಗೆಲ್ಲಾ ಬಹಳ ಬಹುಮಾನ ಬರುತಿದ್ದಿತಂತೆ! ಬಹುಮಾನ!

ಅದೇನು ಮಹಾ! ಅವರಿಗೆಲ್ಲ ಹಣಕಾಸಿನ ತಾಪತ್ರಯದಿಂದಾಗಿ ಲಂಚ ಬೇಕಿದ್ದಿತೋ ಏನೋ!

ನೀನು ಮತ್ತೆ?

ನಾನು ಬಡವಳು. ಹಣಕಾಸಿಗೆ ಎಲ್ಲಿಗೆ ಹೋಗಲಿ? ಅಲ್ಲದೆ ನನ್ನ ಕವಿಮಹಾರಾಜರಿಗೆ ಅಂತಹ ಲಂಚವು ಬೇಕಾಗಿದೆಯೆ?

ಸರಿ. ತೀರಿ ಹೋಯಿತು! ಈ ಕವಿಮಹಾರಾಜರಿಗೆ ಇಷ್ಟೇ ಗತಿ.

ಅಲ್ಲ

ಮತ್ತೆ?

ಬೇರೇನೋ ಇದೆ.

ಏನದು ನೋಡೋಣ?.

ಊಹೂಂ. ಅದು ಈಗಲ್ಲ.

ಮತ್ತೆ ಯಾವಾಗ?

ಅದು ಶಾರದಾ ಪೂಜೆಗೆ!

ಹಾಗಾದರೆ ನನ್ನ ಶಾರದಾನು ಇದೇ—ಪೂಜೆನೂ ಇದೇ—ಎನ್ನುತಿದ್ದಂತೆ ಅವನ ತುಟಿ ಅವಳದೊಡನೆ ಬೆಚ್ಚನೆ ಕೂಡಿಹೋಯಿತು!

ಕುಸುರು ೧೧ — ಶಾರದಾ ಪೂಜೆ

ಕೇಶವಯ್ಯನವರು ಮುಂಜಾವದ ಬೆಳ್ಬಿಸಿಲಿನಲ್ಲಿ ಆಕಡೆ ಈಕಡೆ ಸುತ್ತುತ್ತಾ ಯೋಚನೆಯಲ್ಲಿ ಬಿದ್ದಿದ್ದರು. ಮೊದಲಿನಿಂದಲೂ ಅವರು ಶ್ರಮ ಜೀವಿಗಳು. ಆಲಸ್ಯ ವೃತ್ತಿಯು ಎಂದೂ ಅವರಿಗೆ ಸೇರುತಿದ್ದಿಲ್ಲ. ಎರಡು ತಿಂಗಳುಗಳ ಕಾಲ ಸುಮ್ಮನಾದರೂ ಕುಳಿತು ಕುಳಿತು ಅವರು ಸೋತುಹೋಗಿದ್ದರು. ಪಂಜರದ ಹಕ್ಕಿಯಂತೆ ಅವರ ಮನಸ್ಸು ಉದ್ವಿಗ್ನವಾಗಿದ್ದಿತು. ಆದುವರಿಂದ ಇನ್ನು ತಾನು ಇಲ್ಲೇಕೆ ಇರಬೇಕು—ಎಂಬುದರ ಭವಿತವ್ಯದ ಕುರಿತು ಯೋಚಿಸುತಿದ್ದರು. ನಿಜವಾಗಿಯೂ ಇರುವ ಅಗತ್ಯವಿದ್ದಿಲ್ಲ. ಆದರೆ ಜಮೀನ್ದಾರರು ಆ ಸಂಬಂಧವಾಗಿ ಏನೂ ಹೇಳಿದ್ದಿಲ್ಲ. ಮತ್ತೆ ಶಾರದೆಯ ವಿಚಾರ. ಇನ್ನೂ ಶಾರದೆಯನ್ನು ಅಲ್ಲಿ ಬಿಟ್ಟಿರುವುದರಲ್ಲಿ ಅರ್ಥವಿದ್ದಿಲ್ಲ. ತಾವೇಕೆ ಪೇಟೆಗೆ ಹೋಗಬಾರದು? ಅಥವಾ ತಮ್ಮ ಮೊದಲಿನ ಠಾವಿಗಾದರೂ ಏಕೆ ಸಾಗಬಾರದು?—ಈ ವಿಚಾರಗಳನ್ನು ಶ್ರೀನಿವಾಸರಾಯರಿಂದ ತಿಳಿಯ ಬೇಕೆಂದು ಅವರ ಹವಣಿಕೆಯಿದ್ದಿತು. ಆದರೆ ಅದಕ್ಕೆ ಸುಸಂದರ್ಭವು ಸಿಗಲಿಲ್ಲ. ಅಲ್ಲದೆ ಈ ವಿಷಯವನ್ನು ಅವರೊಡನೆ ಹೇಗೆ ಪ್ರಸ್ತಾವಿಸಬೇಕೆಂಬುದೂ ಅವರಿಗೆ ನೆಲೆಯಾಗಲಿಲ್ಲ. ಹೀಗಾಗಿ ಅವರು ಬಹಳ ಪೇಚಿನಲ್ಲಿ ಬಿದ್ದು ಅಡ್ಡಾಡತೊಡಗಿದ್ದರು. ಹೇಗಾದರೂ ಇದನ್ನು ವಿಠಲಾಚಾರ್ಯರೊಡನೆ ತೀರ್ಮಾನಕ್ಕೆ ಬರಬೇಕೆಂದೆಣಿಸಿ ಅವರನ್ನು ಹುಡುಕುತ್ತ ಒಳಗಡೆ ಬಂದರು.

ವಿಠಲಾಚಾರ್ಯರು ಚಾವಡಿಯಲ್ಲಿ ಪಂಚಾಗದ ಪುಟ ಮಗುಚುತ್ತ ಕುಳಿತಿದ್ದರು. ಏನನ್ನೋ ತಮ್ಮಷ್ಟಕ್ಕೆ ತಾವು ಗುಣಾಕಾರ ಹಾಕಿಕೊಳು ತಿದ್ದರು.

ಕೇಶವಯ್ಯನವರು ಅವರ ಇದಿರಿನಲ್ಲಿ ಕುಳಿತು—ಏನು ಲೆಕ್ಕ ಹಾಕು ತಿದ್ದೀರಿ ಆಚಾರ್ಯರೆ?—ಎಂದರು.

ಆಚಾರ್ಯರು ಕೈಬೆರಳು ಮಡಚುತ್ತ—ದಿನ ನೋಡುತ್ತಾ ಇದ್ದೇನೆ—ಎಂದರು.

ಹಾಗಾದರೆ ನಮಗೂ ಒಂದು ದಿನ ನೋಡಿ ಹೇಳಬೇಕಲ್ಲ!

ಏತಕ್ಕೆ?

ನಮಗೆ ನಮ್ಮ ಕಡೆ ಹೋಗಲಿಕ್ಕೆ

ಆಚಾರ್ಯರು ಲೆಕ್ಕ ಹಾಕುವುದನ್ನು ಬಿಟ್ಟು ಅವರ ಮುಖವನ್ನು ನೋಡುತ್ತ ಕುಳಿತರು.

ಕೇಶವಯ್ಯನವರು ಸ್ವಲ್ಪ ವ್ಯಸ್ತರಾಗಿ ನೋಡಿ ಆಚಾರ್ಯರೆ! ನೀವು ನಮಗಾಗಿ ಎಷ್ಟೋ ತೊಂದರೆ ಪಟ್ಟಿದ್ದೀರಿ. ನೀವಲ್ಲದಿದ್ದರೆ ನನ್ನ ಬಾಳು ನರಕವಾಗುತಿದ್ದಿತು. ನನ್ನ ಶಾರದೆಯ ಪಾಡು ಹೇಳದಂತಾಗು ತಿದ್ದಿತು. ಇವೆಲ್ಲವನ್ನು ನಾನು ಹೇಗೆ ಮರೆಯಲಿ?

ಅದಕ್ಕಾಗಿ ನೀವೀಗ ದಿನ ಕೇಳಲು ಬಂದಿರುವಿರೇನು?—ಎಂದರು ಆಚಾರ್ಯರು ಆಶ್ಚರ್ಯದಿಂದ.

ಅಲ್ಲ. ಆ ಸಂಗತಿ ಬೇರೆ. ನಿಮ್ಮನ್ನು ಕಾಣುತ್ತ ನನಗಿಷ್ಟು ಜ್ಞಾಪಕಕ್ಕೆ ಬಂದಿತು.

ಹಾಗಾದರೆ ಅಷ್ಟೆ ಸಾಕು. ರಾಯರೆ—ನಾನು ಬಡ ಬ್ರಾಹ್ಮಣ. ಬಹಳ ದುಃಖಗಳನ್ನು ಇದಿರಿಸಿದಾತ. ಪ್ರಪಂಚದ ಒಳ್ಳೆಯದು ಕೆಟ್ಟುದನ್ನು ನಾನಾವಿಧಗಳಿಂದ ಕಂಡಾತ. ಆದುದರಿಂದಲೇ ಅಂತಹ ದುಃಖವು ಬೇರೆ ಯವರಿಗೆ ಬರಲಾಗದಂತೆ ಕೈಲಾದಷ್ಟು ಯತ್ನಿಸುತಿದ್ದೇನೆ. ನಿಮ್ಮನ್ನು ಮೊದಲಿಗೆ ಕಂಡಾಗಲೇ ನಿಮ್ಮ ಸದ್ವರ್ತನೆಯೊಂದಿಗೆ ನನ್ನ ಮನಸ್ಸು

ಕೂಡಿಹೋಯಿತು. ಕಾರಣ—ನನಗೆ ದುಃಖದ ಬೆಲೆ ತಿಳಿದಿದೆ. ನಾನು ಸುಖದ ಬಂಡವಾಳದೊಂದಿಗೆ ವ್ಯಾಪಾರಕ್ಕೆ ಹೊರಟಿಲ್ಲ. ನಿಮ್ಮ ಕಷ್ಟ ನಿಮ್ಮ ಸಂಸಾರದ ಕಷ್ಟಗಳನ್ನು ಕಂಡು ಅಂತಹ ಕಷ್ಟಗಳನ್ನು ಕಿಂಚಿತ್ತಾದರೂ ಕಡಿಮೆ ಪಡಿಸುವುದು ನನ್ನ ಕರ್ತವ್ಯವೆಂದೆಣಿಸಿಕೊಂಡೆ. ಇವರಲ್ಲಿ ಉಪಕಾರವೇನು ಬಂತು? ಅದೂ ನನ್ನ ಶಾರದಮ್ಮನಿಗಾಗಿ! ಮಗಳಿಗೆ ತಂದೆಯಾದವನು ಸಹಾಯ ಮಾಡಿದರೆ ಅದಕ್ಕೆ ಸಹಾಯವೆಂದು ಹೆಸರಲ್ಲ. ಅದು ಅವನ ಕೆಲಸ. ಜೇನು ನೊಣವು ಗೂಡಿನತ್ತ ಕೈಮುಟ್ಟಿದವರಿಗೆಲ್ಲ ಕಡಿದು ಬಿಡುತ್ತದೆ. ಅದೇನೂ ಉಪಕಾರವಲ್ಲ. ರಾಯರೆ! ನಮ್ಮದೂ ಜೇನುಗೂಡು ನಮ್ಮ ಗೂಡಿನಲ್ಲಿನ ಜೇನಿನ ರಸವು ಹಿಂಗಿ ಹೋಗಿರಬಹುದು. ಆದರೂ ಮುಂದಿನ ಪೀಳಿಗೆಯು ಸಂತಾನ ಜೇನು ಬೆರಸಲಿದೆಯಲ್ಲ—ಎಂಬ ಸಮಾಧಾನದಿಂದ ನಮ್ಮ ಹೃದಯವು ಹೆಗ್ಗಳಿಸಿಕೊಳ್ಳುವುದು.

ಆದರೆ ನೀವು ಮೊದಲಿಗೆ ನಮ್ಮ ಕಡೆ ಬಂದಾಗ ನಾನು ವ್ಯತಿರೇಕವಾಗಿ ತಿಳಿದು ನಿಮ್ಮನ್ನು ಹೀಯಾಳಿಸಿದ್ದೆ--ಎಂದರು ಕೇಶವಯ್ಯನವರು.

ಅದು ವ್ಯತಿರೇಕವಲ್ಲ. ಮನುಷ್ಯ ಸಹಜವಾದ ಆತ್ಮ ರಕ್ಷಣೆ. ಕೋಟೆಯ ಬಾಗಿಲನ್ನು ತೆರೆದಿಟ್ಟಿರುವುದಕ್ಕಿಂತಲೂ ಹಾಕಿರುವುದು ಒಳ್ಳೆಯದಲ್ಲವೆ?

ಸಹಜ. ಧರ್ಮದ ವಿಚಾರದಲ್ಲಿ ನನಗೆ ತುಂಬಾ ಹೇಯ ಬುದ್ಧಿಯಿದ್ದಿತ್ತು. ಅದು ಈಗ ನಿಮ್ಮನ್ನು ಕಂಡು ಮಾಯವಾಗಿದೆ. ಒಳ್ಳೆಯದು ಕೆಟ್ಟದು ಈ ಪ್ರಪಂಚದಲ್ಲಿ ಸಮಸಮವಾಗಿದೆ. ನಾವು ಯಾವುದಾದರೊಂದನ್ನು ಕಂಡು ವ್ಯಾಖ್ಯಾನಕ್ಕೆ ಹೊರಟರೆ ಅದು ಅಕಾಲಿಕ ಅಪೂರ್ಣವಾಗುವುದು.

ಆಚಾರ್ಯರು ನಸುನಗುತ್ತ--ಇದೇನು ಧರ್ಮವಲ್ಲ. ಧರ್ಮವೆಂದರೆ ನಮ್ಮ ಕಡೆ ಇನ್ನೊಂದು ಅರ್ಥವಿದೆ - ಬೆಲೆಯಿಲ್ಲದ್ದೆಂದು. ಹಾಗೇನೇ! ಸೇವೆಗೆ ಬೆಲೆ ಕಟ್ಟ ಬಾರದು. ಅದೆಲ್ಲ ಹೋಗಲಿ ಬಿಡಿ. ಯಾವುದು ಆಗ ಬೇಕಿದ್ದಿತೋ ಅದು ವಿಳಂಬವಾಗಿಯಾದರೂ ಆಗಿಯೇ ತೀರಿದೆ. ಅದಕ್ಕಾಗಿ ನಾವು ಸಂತೋಷ ಪಡಬೇಕು.

ಕೇಶವಯ್ಯನವರು ಸ್ವಲ್ಪ ಹೊತ್ತು ಸುಮ್ಮನಿದ್ದು ಕೇಳಿದರು--ಹಾಗಾದರೆ ನಾನೀಗ ಏನು ಮಾಡಬೇಕು? ಹೇಳಿರಿ.

ಏನು ಮಾಡಬೇಕು ಎಂದರೆ?

ನನಗೆ ವೃಥಾ ಕಾಲಯಾಪನೆ ಮಾಡಲು ಇಲ್ಲಿ ಬಹಳ ಕಷ್ಟವಾಗುತ್ತಿದೆ.

ಯಾರು ಕಾಲಯಾಪನೆ ಮಾಡಬೇಕೆಂದರು? ಜಮೀನ್ದಾರರೇನೂ ಹಾಗೆ ಹೇಳಿಲ್ಲ. ಅವರು ಕೂಡ ಈಗ ವೃಥಾ ಕಾಲಹರಣಮಾಡದೆ ಪುರಾಣಶ್ರವಣಕ್ಕೆ ತೊಡಗಿದ್ದಾರೆ! ಮತ್ತೆ ನೀವೂ ಬರಬಹುದು. ಇಷ್ಟವಿಲ್ಲವಾದರೆ ನಿಮ್ಮ ಶಾಲೆಯಿದೆಯಲ್ಲ---ಅದನ್ನು ಪುನಃ ತೊಡಗಬಹುದು.

ನಾನೇ?

ನೀವೆ! ಮತ್ತೆ ಯಾರು?

ನಮ್ಮ ಶಾರದ

ನಿಮ್ಮ ಶಾರದ ಎಲ್ಲಿ? ಅವಳೀಗ ನಮ್ಮ ಶಾರದ! ನೀವೇನೋ ಅವಳನ್ನು ಆ ದಿನ ಕಾಡಿನ ಬಳಿ ಹಾಕಿದ್ದಿರಿ. ನಾವು ಹೊತ್ತು ತಂದಿರುವೆವು. ಕಾಪಾಡಿರುವೆವು. ಅಲ್ಲದೆ ಅವಳಿಂದಾಗಿ ನಮ್ಮ ಮರಿರಾಯರಿಗೆ ತಲೆಯಿಂದ ಬಹಳ ರಕ್ತ ನಷ್ಟ ಬಂದದೆ. ಅದರ ಲೆಕ್ಕಚಾರವಾಗದೆ ಅವಳನ್ನು ಬಿಟ್ಟು ಕೊಡುವಂತಿಲ್ಲ!

ಕೇಶವಯ್ಯನವರು ಏನೂ ಹೇಳಲು ತೋಚದೆ ಮೇಲೆ ಕೆಳಗೆ ನೋಡುತ್ತ ಕುಳಿತರು.

ಅದಕ್ಕಾಗಿಯೇ ನೀವು ದಿನ ಕೇಳಲು ನನ್ನ ಬಳಿ ಬಂದುದೇನು?—ಎಂದು ಕೇಳಿದರು ಆಚಾರ್ಯರು.

ಹೌದು ಅದಕ್ಕೆ.

ಹಾಗಾದರೆ ನಾನೂ ಅದನ್ನೇ ನೋಡುತ್ತಾಯಿದ್ದೇನೆ. ನಮಗೂ ಒಳ್ಳೆಯ ದಿನ ಬೇಕಾಗಿದೆ. ಯಾವುದಕ್ಕೂ ಆಶ್ವಿನ ಶುದ್ಧ ನವಮೀ ಶುಕ್ರವಾರ---ನಿಮ್ಮ ಶಾರದಾ ಪೂಜೆಯೂ ಬಂತಲ್ಲ?

ಹೌದು. ಆದರೆ—

ಆದರೇನು?

ಈ ವರ್ಷವೂ ನಡೆಯಲಿದೆಯೋ ಇಲ್ಲವೋ—ಯಾರು ಬಲ್ಲರು!

ಚೆನ್ನಾಗಿ ನಡೆಯಲಿದೆ. ಈ ವರ್ಷವು ಮಾತ್ರವಲ್ಲ. ವರ್ಷವರ್ಷಗಳಲ್ಲೂ ಚೆನ್ನಾಗಿ ನಡೆಯಲಿದೆ. ಅದಕ್ಕೆ ಸನ್ನಾಹ ಆಗಬೇಕಾಗಿದೆಯಲ್ಲ?

ಕೇಶವಯ್ಯನವರು ಆಚಾರ್ಯರ ಕೈಹಿಡಿದು ದೈನ್ಯದಿಂದ ಕೇಳಿದರು—ಆಚಾರ್ಯರೆ! ನೀವೊಂದು ದೊಡ್ಡ ಒಗಟು! ನಿಮ್ಮನ್ನು ತಿಳಿಯಲು ನನ್ನಿಂದ ಸಾಧ್ಯಬರುವುದಿಲ್ಲ.

ಆಚಾರ್ಯರು ತುಟಿಯ ಮೇಲೆ ಕೈಯಿಟ್ಟು—ಹುಶ್. ಸ್ವಲ್ಪ ಆಕಡೆ ಕಿವಿಗೊಟ್ಟು ಕೇಳಬಾರದೆ? ಮತ್ತೆ ಎಲ್ಲಾ ತಿಳಿದುಬರುತ್ತದೆ.

ಮಾಳಿಗೆಯ ಮೇಲ್ಗಡೆಯ ಕೋಣೆಯಿಂದ ಇಬ್ಬರು ಮೃದುವಾಗಿ ಕಿಲ ಕಿಲನೆ ನಗುವ ಸದ್ದು ಶ್ರಾವಣದ ಪೊದೆ ಪೊದರುಗಳಲ್ಲಿ ನಲಿದಾಡುವ ಹಕ್ಕಿಗಳ ಮೆಲ್ಲುಲಿಯಂತೆ ಮಧುರವಾಗಿ ಕೇಳಿಸುತಿದ್ದಿತು.

ಆಚಾರ್ಯರು ಪಂಚಾಂಗವನ್ನು ಮಡಚಿಬಿಟ್ಟು--ಸರಿ. ದಿನ ನೋಡಿಯಾಯಿತು—ಎಂದು ನಸುನಗುತ್ತ ಕೇಶವಯ್ಯನವರ ಕೈ ಹಿಡಿದು ಮೇಲೆದ್ದರು.

ಬನ್ನಿ. ನಾವಿನ್ನು ಶಾರದಾ ಪೂಜೆಯ ಸನ್ನಾಹಕ್ಕೆ ನಿಮ್ಮ ಧರ್ಮಶಾಲೆಯ ಕಡೆ ಹೋಗೋಣ—ಎಂದವರೇ ಇಬ್ಬರೂ ಕೈ ಕೈ ಹಿಡಿದ್ದು ನಗುತ್ತ ಹಿಂದಿರುಗಿ ನೋಡುತ್ತ ನೋಡುತ್ತ ಮುಂದೆ ಮುಂದೆ ಹೆಜ್ಜೆ ಹಾಕಿದರು.

ಮಾಳಿಗೆಯ ಮೇಲ್ಗಡೆಯಿಂದ ಮೆಟ್ಟಲಿಳಿದು ಕೆಳ ಬರುತಿದ್ದ ನಗೆಯ ಸದ್ದು ಮೆಲ್ಲ ಮೆಲ್ಲನೆ ಮುಂದೆ ಸರಿದು ಚಾವಡಿ ತುಂಬಿತೆನುವಾಗ ಜವಿಾನ್ದಾರರು ಒಮ್ಮೆ ಹುಂಕರಿಸಿ ಗಂಟಲು ಕೆರೆದುಕೊಂಡರೆಂದರೆ ಬೆಕ್ಕಿನ ಶಬ್ದಕ್ಕೆ ತಲೆಮರಸುವ ಇಲಿಯಂತ ಅದೆಲ್ಲಾ ಒಕ್ಕಟ್ಟಿಗೆ ಮೂಲೆ ಪಾಲಾಗುತಿದ್ದಿತು. ಮತ್ತೆ ಸಂಜೆಹೊತ್ತು ಬಾನಕೊನೆಯಂಚನಲ್ಲಿ ಲಂಬಿಸಿ ತಂಗಾಳಿಯ

ಸೆರಗುಹಾಸಿ ಆ ಕಡೆ ಕೆರೆಯುತ್ತಿದ್ದಾಗ ಕೂತು ಕೂತು ಸ್ಥಗಿತವಾದ ಯಾವ ಜೀವವಾದರೂ ಹೊರತೂರಿ ಹಾರಾಡ ಬಯಸುವುದರಲ್ಲಿ ಸೋಜಿಗವೇನಿದೆ? ಅಂತೆಯೇ ಕೃಷ್ಣಸ್ವಾಮಿ ಪಡು ದಿಕ್ಕಿನ ಕಡೆ ಹೊರಟರೆ ಆ ಮಾತಾಯಿ ಏನೂ ಅರಿಯದವಳಂತೆ ಚಪ್ಪಲು ಸೇರಿಸಿ ಪೂರ್ವಾಭಿಮುಖವಾಗಿ ನಡೆಯುತ್ತಿದ್ದಳು. ಆದರೆ ಹೊರಹಾರಿದ ಹಕ್ಕಿಗಳ ಜೊತೆ ಮುಟ್ಟುವ ಗುರಿ ಒಂದೇ ಎಂಬುದನ್ನು ಜಗತ್ತು ತಿಳಿದಿದ್ದರೂ ಅವುಗಳು ಮಾತ್ರ ಪಾಪ ತಮ್ಮ ಸಂಕೇತದ ಗೋಪ್ಯ ರಕ್ಷಣೆಗಾಗಿ ಏನೋ ಸುತ್ತಿ ಸುತ್ತಿ ಕಟ್ಟ ಕಡೆಗೆ ಆ ಮಾವಿನ ತೋಪಿನ ಬಳಿ ಮೇಲು ಬೆಟ್ಟದ ಬಂಡೆಯ ಪಕ್ಕದಲ್ಲಿ ಬಚ್ಚಿಕೊಳ್ಳುತ್ತಿದ್ದುವು. ಆ ಕಡೆ ಮರದಲ್ಲಿ ಚೀರುತಿರುವ ಜೀರುಂಡೆಗಳ ಜಯಕಾರದೊಂದಿಗೆ ಹೂವಿನಿಂದ ಹೂವಿಗೆ ಹಾರುವ ತುಂಬಿಗಳ ಮೇಳದೊಂದಿಗೆ ಅಥವಾ ಕೆಳಗಡೆ ಬಂಡೆಯಿಂದ ಬಂಡೆಗೆ ಚಿಮ್ಮುವ ಕಾಲುವೆಯ ನೀರಿನ ನಿರರ್ಗಳ ನಿನಾದದೊಡನೆ ಕೃಷ್ಣಸ್ವಾಮಿ ಸ್ವರಕೂಡಿಸಿ ಹಾಡಿದನು—

ಪಟ್ಟೆದುಗುಲವನುಟ್ಟು ಬೊಮ್ಮನ
ಪಟ್ಟದರಸಿಯು ಬಂದಳು
ಸತ್ಯಲೋಕದ ರಸಾಲೋಕದ
ಹೊಸತು ಸಿರಿಯನು ತಂದಳು!—

ನೋಡಿ! ನೀವು ಹಾಗೆಲ್ಲಾ ನನ್ನನ್ನು ಕೆಣಕಿದರೆ ಮತ್ತೆ ನನಗೆ ಕೋಪ ಬಂದೀತು!—ಎಂದು ಕೊರಳು ಕೊಂಕಿಸಿದಳು ಶಾರದೆ.

ಅಯ್ಯೊ ದೇವರೆ! ಶಾರದೆಯನ್ನು ಬೊಮ್ಮನ ಪಟ್ಟದರಸಿಯೆಂದರೆ ನಿನಗೆ ಕೋಪವೇಕೆ ಬರಬೇಕು?

ಅಂತಹ ಪಟ್ಟಭದ್ರೆ ನಿಮ್ಮ ಬಳಿಗೆ ಬಂದ ಮೇಲೇನೇ ನೀವು ಹಾಗೆ ಹಾಡಬೇಕು! ಈಗ ಬೇಡ.

ಇನ್ನು ಬರುವುದೇನಿದೆ? ಈಗ ಬಂದ ಸುಭದ್ರೆಯೇ ಸಾಕಲ್ಲ!

ಇಂತಹ ಚಲೋ ಸನ್ಯಾಸಿಗಳನ್ನು ನಂಬಿ ಬಳಿಗೆ ಬಂದ ಸುಭದ್ರೆಯರೆಲ್ಲ...ಎಂದು ಹೇಳಿ ಅರ್ಧದಲ್ಲೇ ಮಾತು ನಿಲ್ಲಿಸಿ ಮುಖತಗ್ಗಿಸಿದಳು. ಅವಳ ಕಣ್ಣುಗಳಲ್ಲಿ ಒಸರು ಕೂಡಿದ್ದಿತು.

ಕೃಷ್ಣಸ್ವಾಮಿ ಕ್ಷಣಹೊತ್ತು ಸುಮ್ಮನಿದ್ದು ಕೊನೆಗೆ ಅವಳ ಕೈಹಿಡಿದು ಮೆಲ್ಲನೆ ಕರೆದನು—

ಶಾರೀ

ಹೂ

ಶಾರೀ! ನನ್ನ ಆತ್ಮದ ಮೇಲೆ ನಿನಗೆ ಅಷ್ಟೂ ಸಂಶಯವಿದೆಯೆ?

ನನ್ನ ಸ್ವಾಮಿಯ ಮೇಲೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಆದರೆ—

ಆದರೇನು? ಹೇಳು.

ಶಾರದೆಯು ಸ್ವಲ್ಪಹೊತ್ತು ಸುಮ್ಮನಿದ್ದು ಮಾತು ತಡವರಿಸಿ ಹೇಳಿದಳು –ಆವರೆ ನನ್ನ ಸಂಶಯ ಈ ಪ್ರಪಂಚದ ಮೇಲೆ!

ಅದೇನು? ನನ್ನ ಪ್ರಪಂಚ ಅಷ್ಟೂ ಹಾಳೆ?

ಅದು ನಿಮ್ಮ ತಪ್ಪಲ್ಲ. ಪ್ರಪಂಚದ ತಪ್ಪು. ಅದನ್ನು ಸೃಷ್ಟಿಸಿದ ಬ್ರಹ್ಮನ ತಪ್ಪು!

ಕೃಷ್ಣಸ್ವಾಮಿ ಕುತೂಹಲದಿಂದ ಕೇಳಿದ—

ಬ್ರಹ್ಮನದೇನು ತಪ್ಪು?

ಆತ ಎಲ್ಲಾ ತಲೆಹೋಕರನ್ನೂ ಎಲ್ಲಾ ಮಣೆಗಳಲ್ಲಿ ಕುಳ್ಳಿರಿಸಿಡಲಿಲ್ಲ. ಅದೇ ತಪ್ಪು. ಆದುದರಿಂದಲೇ ಪಟ್ಟದಮಣೆಯ ಮೇಲೆ ಕೂತವರು ನಿಂತ ಜನಾಂಗವನ್ನು ಕೀಳಾಗಿ ಕಾಣಬೇಕಾಯಿತು!

ಅವನು ಉದ್ವಿಗ್ನನಾಗಿ ಹೇಳಿದನು

ಇಲ್ಲ ಶಾರದ! ನೀನು ಹಾಗೆಂದೂ ಎಣಿಸಬಾರದು. ನೀನು ಪ್ರಪಂಚವನ್ನು ತೂಗಿದ ತಕ್ಕಡಿಯೇನೋ ಸಮಂಜಸವಿರಬಹುದು. ಆದರೆ ಅದರ ತೂಕದಲ್ಲಿ ನನ್ನನ್ನು ಎಂದಿಗೂ ಸೇರಿಸಬಾರದು.

ಶಾರದೆಯು ಮೌನವಾಗಿ ಕೆಳಗಡೆ ನೋಡುತಿದ್ದಳು. ಆಕೆಯ ಕಣ್ಣುಗಳಿಂದ ಎರಡು ಹನಿ ನೀರು ಕೆಳಗುರುಳಿ ಅವನ ಪಾದವನ್ನು ತೋಯಿದ್ದಿತು.

ಅವಳು ತನ್ನ ಸೆರಗಿನ ತುದಿಯಿಂದ ಅದನ್ನು ಒರೆಸುತ್ತ ಮೃದುವಾಗಿ ಹೇಳಿದಳು—

ನನ್ನನ್ನು ಕ್ಷಮಿಸಬೇಕು.

ಇಲ್ಲ ಶಾರದ. ಇದು ಕ್ಷಮಿಸುವ ವಿಚಾರವಲ್ಲ. ನಾನೆಂದೂ ನಿನ್ನನ್ನು ಆ ದೃಷ್ಟಿಯಿಂದ ಕಂಡುದಿಲ್ಲ. ನನ್ನ ಎದೆಯ ಮೇಲೆ ಕೈಯಿಟ್ಟು ನೋಡು !

ಅವಳು ತನ್ನ ತಲೆಯನ್ನು ಅವನ ಎದೆಗಾನಿಸಿ ಉಸಿರುಬಿಟ್ಟಳು.

ಕೃಷ್ಣಸ್ವಾಮಿಯು ಮಾತು ಮುಂದುವರಿಸಿದನು—ನೋಡು, ನನ್ನ ಎದೆಯು ಹಾರುತಿರುವುದಾದರೆ ಅದು ನಿನಗಾಗಿ—ನಿನ್ನ ನಿರಂತರ ಕ್ಷೇಮಕ್ಕಾಗಿ! ಆ ದಿನನಾನು ನಿನ್ನನ್ನು ಇಲ್ಲೇ ಕೂಡಿದಾಗ– ನಿನ್ನ ಕೊನೆಯ ದರ್ಶನ ತೆಗೆದುಕೊಂಡು—

ಬೇಡ. ಆ ನೆನಪೇ ನನಗೆ ತಲೆಶೂಲವಾಗಿ ಪ್ರಾಣ ಹಿಂಡುತಿದೆ!

ಕೃಷ್ಣಸ್ವಾಮಿ ಅವಳ ಮುಂಗುರುಳು ನೇವರಿಸುತ್ತ ಹೇಳುತ್ತಲೇ ಸಾಗಿದನು–ಈ ಕಡೆಯಿಂದ ತಲೆತಪ್ಪಿಸಿಕೊಂಡು ಓಡಿಹೋಗುತಿದ್ದೀರಿ— ಎಂದ ನಿನ್ನ ಮಾತು ನನಗಿನ್ನೂ ನೆನಪಿದೆ. ಆ ನಂತರ ಬೆಂಗಳೂರಿಗೆ ಹೋದ ಮೇಲೆ ಆ ಮಾತನ್ನು ಒರೆಗೆ ಹಚ್ಚಿ ಮನನಮಾಡಿಕೊಂಡೆನು! ಸಹಜವಾಗಿಯಾದರೆ—ನಾನು ಆ ದಿನ ಹೇಡಿಯಾಗಿ ಈ ಕಡೆಯಿಂದ ನುಸುಳಿ ಹೋಗಿರುವೆನು.

ಬೇಡ, ದಮ್ಮಯ್ಯ! ಆ ಮಾತುಗಳ ಮನವರಿಕೆ ಈಗೇಕೆ ಬೇಕು?–ಎಂದಳು ಶಾರದೆ.

ಬೇಕು. ಎಂದಿಗೂ ಬೇಕೇಬೇಕು. ಅಂತಹ ಮಾತುಗಳ ನೆನಪು ಬಾರದೆಹೋದರೆ ಒಂದು ಜೀವವು ಎಂದೆಂದಿಗೂ ಹೇಡಿಯಾಗಿ ಬಾಳಿ ಬಂದೀತು. ಅದಕ್ಕಾಗಿ ಅವನ್ನೇ ದಿನ ನಿತ್ಯ ಮನನ ಮಾಡುತ್ತಾಯಿದ್ದೇನೆ. ಇನ್ನೊಮ್ಮೆ ಅಂತಹ ಸಂದರ್ಭ ಬಂದಾಗ ಅದನ್ನು ಆತ್ಮಧೃತಿಯಿಂದ ಟೊಂಕ ಕಟ್ಟಿ ಇದಿರಿಸುವ ಶಕ್ತಿ ಈ ಪ್ರಾಣಕ್ಕೆ ಬರಲೆಂದು ನಿತ್ಯವೂ

ಪ್ರಾರ್ಥಿಸುತ್ತಿದ್ದೇನೆ. ಆದಿನ ಈ ಜಾಗದಲ್ಲಿ ನಾನು ಅಂಜುಬುರುಕನಾಗಿ ನಿಂತಿದ್ದರೆ ಇಂದು ಅಂತಹ ಅಂಜಿಕೆಯು ತಲೆಮೆಟ್ಟಿ ನಿಲ್ಲಬೇಕೆಂದು ದೃಢವಾಗಿ ನಿರ್ಧಾರಕ್ಕೆ ಬಂದಿದ್ದೇನೆ. ಆದುದರಿಂದ ನಾನು ಈದಿನ ಪ್ರಪಂಚದ ಸ್ಥೂಲ ರೂಪದಲ್ಲಿ ಒಂದು ಚಿಕ್ಕ ಕಡ್ಡಿಯಾಗಿ ಹರಿದು ಹೋಗಲು ಬಯಸುವುದಿಲ್ಲ. ಅದರ ಪೂರ್ಣಪ್ರವಾಹವನ್ನು ಎದೆಯೊಡ್ಡಿ ಈಸಿ ದಾಟಬೇಕೆಂಬುದೇ ನನ್ನ ಅಭಿಲಾಷೆ! ಅದಕ್ಕಾಗಿ ನಿನ್ನ ಸಹಾಯ—

ಆಕೆ ಗದ್ಗದ ಕಂಠದಿಂದ ಅವನ ಕೊರಳು ಬಿಗಿದು ಹೇಳಿದಳು—ನನ್ನದೇನು ಸಹಾಯ? ನಾನೊಂದು ಕ್ಷುಲ್ಲಕ ಪ್ರಾಣಿ. ನನಗಾಗಿ ನೀವೀ ತನಕ ಅನುಭವಿಸಿದುದೇ ಸಾಕು!

ಇರಬಹುದು. ಆದರೆ ನನ್ನ ಬಂಗಾರವನ್ನು ನಾನೇ ಪುಟಕ್ಕೆ ಹಾಕಿ ಒರೆ ಹಿಡಿದು ನೋಡಿದ್ದೇನೆ. ಅದರ ಮಹತ್ವ ನನಗೇ ಗೊತ್ತು.

ಅಯ್ಯೋ ದೇವರೆ! ಇದೇನು ಮಹಾ! ಇದಕ್ಕೋ ಹೇರಳ ಬಂಗಾರ ಆನೆಯ ಮೇಲೆ ಅಂಬಾರಿ ಹಾಕಿಸಿಕೊಂಡು ನಿಮ್ಮ ಮನೆಗೆ ಬಂದೇ ಬಂದೀತು!

ಹಾಗೆ ಬಂದರೆ ಅಂತಹ ಆನೆ--ಅಂಬಾರಿ ಬಂಗಾರ ಇವುಗಳನ್ನೆಲ್ಲ ಬಡಬಗ್ಗರಿಗೆ ಸೂರೆಗೊಟ್ಟು ನನ್ನ ಈ ಸೀತೆಯ ಕೈಹಿಡಿದು ತಪಸ್ಸು ಮಾಡಲು ಕಾಡಿಗೆ ಹೊರಟು ಹೋದೇನು! ಏನೋ ಒಂದು ಕವಿತೆಯ ನೆನಪು ಬರುತ್ತದೆ—

ಕಟ್ಟಡವಿ ಸೇರಿದರೆ ಚಿತೆಯ ಮೇಲೇರಿದರೆ
ಏನು ಬಂದರು ಬರಲಿ ಎನುವ ಸಾಕಲ್ಯ
ಕಾಲಕಾಲದ ಕರ್ಮಶೀಲ ಸಂಪರ್ಕದಲಿ
ಮೇಲು ಕೀಳೆಂಬ ಮಾತಿರದ ಕೈವಲ್ಯ!

ಅಂತಹ ಕೈವಲ್ಯವೇ ನನ್ನ ಜೀವನದ ಪರಮಾವಧಿಯಾದರೆ ಸಾಕು!

ಮತ್ತೆ ಇಬ್ಬರೂ ಮಾತಾಡಲಿಲ್ಲ. ಅಂತಹ ಸುಖದ ಪರಮಾವಧಿಯ ಚಿಂತನೆಯಲ್ಲೇ ಬಾಳು ತೇಲಿ ಹೋದಂತೆ ಅವರ ವ್ಯಕ್ತಿತ್ವವು ಅವ್ಯಕ್ತವಾಗಿ ಒಂದು ಸಮೃದ್ಧವಾದ ಸುಂದರ ಕಲ್ಪನೆಯ ಮೂರ್ತಿಗೊಂಡು

ಅವರಿಬ್ಬರೂ ಹಗುರಾಗಿ ಸೇದೆ ಬಿಡುತಿದ್ದರು. ಅಯ್ಯೋ! ನಾನೇಕೆ ಇಂತಹ ಸಲ್ಲದ ಮಾತುಗಳನ್ನೆಲ್ಲ ಆಡಿದೆನೆಂದು ಅವಳು ಅಂಜಿ ಅಂಜಿ ಕೆಳ ನೋಡುತಿದ್ದರೆ—ನನ್ನ ಹೃದಯವನ್ನು ಕನ್ನಡಿಯಂತೆ ಹಿಡಿದು ತೋರಿಸಬಲ್ಲ ಇಂತಹ ಸಂದರ್ಭವೂ ನನ್ನ ಪಾಲಿಗೆ ಬಂದೊದಗಿತಲ್ಲ-ಎಂದು ಆತ ಅಭಿಮಾನದಿಂದ ಅವಳ ತಲೆಗೂದಲು ನೇವರಿಸುತಿದ್ದನು. ಅಂತಹ ಅವರಿಬ್ಬರ ಭಾವಸಾಂಕರ್ಯದಲ್ಲಿ ಕಾಡುತುಂಬಿ ಕರೆಮಾರಿ ಬಾನುಕವಿದಂತೆ ಸಂಜೆಯ ಕೊನೆಯ ಗಳಿಗೆಯ ರೂಪಸೌಂದರ್ಯವು ಸತ್ಯಲೋಕದಿಂದ ಧರೆಗಿಳಿದು ಬಂದಂತೆ ಭವ್ಯವಾಗಿದ್ದಿತು.

ಕತ್ತಲು ಕವಿಯುತ ಬಂದಾಗ ಅವರಿಬ್ಬರ ಭಾವ ಸಮಾಧಿಯು ದೂರದಲ್ಲಿ ಕಾಣುವ ಶಾಲೆಯ ಕಡೆಯಿಂದ ಬಂದ ಸದ್ದಿನಿಂದಾಗಿ ಭಗ್ನವಾಯಿತು. ಇಬ್ಬರು ಬಾನು ಕಂಡು ಮುಖ ನೋಡಿಕೊಂಡರು. ಕೊನೆಗೆ ಇಬ್ಬರೂ ಕೈ ಕೈ ಹಿಡಿದು ಮೇಲೆದ್ದು ನಿಂತು ಕ್ಷಣಕಾಲ ಅತೀತದೊಡನೆ ಅವ್ಯಕ್ತವಾಗುತಿರುವ ಅದೃಷ್ಟರೇಖೆಯಂತಿದ್ದ ಕಾಲುವೆಯ ದೂರದೃಶ್ಯವನ್ನು ಕಂಡು ಮೆಲ್ಲ ಮೆಲ್ಲನೆ ಹೆಜ್ಜೆ ಹಾಕುತ್ತ ಮೈತೂಗುತ್ತ ನಡೆದರು. ದಾರಿ ಹಿಡಿದಾಗ ಅದರ ಆ ಕಡೆಯಲ್ಲೆ ಕಂಡು ಬರುತಿದ್ದಿತು ಕೇಶವಯ್ಯನವರ ಗುಡಿಸಲು—ಅದರ ಪಕ್ಕದ ಶಾಲೆ! ಬೇಡವೆಂದರೂ ಶಾರದೆಯ ಹೆಜ್ಜೆ ಅಭ್ಯಾಸಗುಣವಾಗಿ ಆ ಕಡೆ ಸರಿಯಿತು.

ಆಶ್ಚರ್ಯದ ಸಂಗತಿಯೇನೆಂದರೆ ಈಗ ಹಲವು ತಿಂಗಳುಗಳಿಂದ ಹಾಳುಬಿದ್ದಿದ್ದ ಗುಡಿಸಲು ಮತ್ತು ಶಾಲೆಯು ಪುನಃ ದುರಸ್ತಿಗೆ ತೊಡಗಿದ್ದಿತು. ಅವರಿಬ್ಬರೂ ಅರ್ಥವಾಗದೆ ಮುಖ ಮುಖ ನೋಡಿಕೊಂಡರು. ಕೊನೆಗೆ ಮನೆಯ ಮುಂದುಗಡೆ ಸುಣ್ಣ ಬಳಿದಲ್ಲಿ ಸ್ಥಳಬಿಟ್ಟು ಉಳಿಸಿದ ಅಂಕೆ- ಸ್ಫುಟವಾಗಿ ಕಂಡುಬಂದಿತು—

೩೧—೭—೧೯೪೩

— ಶಾರದೆ

ಅದರ ಮುಂದೆ ನಿಂತು ನೋಡಿದಾಗ ಹಿಂದಣ ಕಹಿ ನೆನಪಿನಿಂದ ಶಾರದೆಯ ಮುಖ ಕೆಂಪೇರಿತು ಅವಳು ಮೆಲ್ಲ ಮೆಲ್ಲನೆ ಗುಣುಗುಟ್ಟಿದಳು—ಇದು ನಮ್ಮ ಇಲ್ಲಿಯ ಬಾಳುವೆಯ ಅಂತ್ಯ!—

ಅಲ್ಲ. ಇದು ನಮ್ಮ ಇಲ್ಲಿಯ ಬಾಳುವೆಯ ಪ್ರಾರಂಭ!—ಎಂದು ಕೃಷ್ಣಸ್ವಾಮಿ ಅವಳ ಕೈಹಿಡಿದನು.

ಶಾರದೆಯು ಒಮ್ಮೆ ನಿಟ್ಟುಸಿರುಬಿಟ್ಟು-ಅಂದಿಗೇ ಇದೆಲ್ಲ ತೀರ್ಮಾನ ವಾಗಿ ಹೋಗುತಿದ್ದಿತು—ಎಂದಳು.

ಆದರೆ ದೈವಸಂಕಲ್ಪವೇ ಬೇರೆ ನೋಡು! ಅಂತೆಯೇ ಇದರ ತೀರ್ಮಾನ ಇನ್ನು ಮುಂದಕ್ಕೆ ಆಗಿಯೆ ಆಗಲಿದೆ! ಆದುದರಿಂದಲೇ ಈ ಗುಡಿಸಲಿನ ದುರಸ್ತಿಯ ಕೆಲಸ ಸಾಗುತ್ತಿರಬಹುದು.

ಕೆಲಸದ ಆಳುಗಳೆಲ್ಲ ಸ್ವಲ್ಪ ಹೊತ್ತಿಗೆ ಮುಂಚೆ ಅಲ್ಲಿಂದ ಹೊರಟು ಹೋಗಿದ್ದಿರಬೇಕು. ಅವರ ಸಾಮಾನುಗಳೆಲ್ಲಾ ಆಕಡೆ ಶಾಲೆಯ ಬಳಿ ಬಿದ್ದಿದ್ದುವು. ಸುಣ್ಣ ಪೂಸಿ ಶುಭ್ರವಾಗಿ ಕಾಣುತಿದ್ದ ಆ ಧರ್ಮಶಾಲೆ ಕತ್ತಲಲ್ಲೂ ಕೈನೀಡಿ ಕರೆಯಲಿರುವ ಸದ್ಭಾವನೆಯ ಒಂದು ಪ್ರತೀಕದಂತೆ ಪ್ರಶಸ್ತವಾಗಿ ತೋರುತಿದ್ದಿತು. ಅಂತಹ ಶುಭವಾತಾವರಣದ ಸನ್ನಿಧಿ ಯಲ್ಲಿ ಶಾರದೆಯ ತುಮುಲುಗೊಳುತಿದ್ದ ಹೃದಯದ ಹಾರಿಕೆಯು ಕಳೆದು ಹೋಗಿ ಸಮುದ್ರಮಧ್ಯದಿಂದ ದಡಸೇರಲಿರುವ ಹಡಗಿನಂತೆ ಮನಸ್ಸು ಹಗುರ ಹಗುರವಾಗಿ ಹೊಂದಿಕೊಳ್ಳುತ್ತ ಬಂದಿತು. ಅಂತಹ ಸೌಮನ ಸ್ಯವೇ ಸಂಸ್ಕಾರವಂತರ ಪುಣ್ಯಜೀವನದ ಪ್ರಥಮ ಸೋಪಾನ! ಜೀವ ಜೀವಗಳ ರಸಸಾಹಚರ್ಯದ ಸಂಸಾರದ ಸಚ್ಚಿದಾನಂದ ಸ್ವರೂಪ!

× × × ×

ಸ್ವಭಾನು ಸಂವತ್ಸರದ ಆಶ್ವಿನಶುದ್ಧ ನವಮಿಯ ದಿನ—ಆ ಧರ್ಮ ಶಾಲೆಯಲ್ಲಿ ಎಂದಿಗಿಂತಲೂ ವಿಶೇಷವಾಗಿ ಶಾರದಾ ಪೂಜೆಯು ಜರಗಿತು. ಆದಿವಸದ ಕಾರ್ಯಕಲಾಪಗಳಲ್ಲಿ ವಿಶೇಷ ಸಂಭ್ರಮವಿದ್ದಿತು— ಜೀವಕಳೆ ಯಿದ್ದಿತು.

ಶಾರದೆಯು ಬಿಳಿ ಪತ್ತಲವುಟ್ಟಿದ್ದು ಎಂದಿಗಿಂತಲೂ ಚೆಲುವಾಗಿ ಕಾಣುತಿದ್ದಳು. ಕೈಯಲ್ಲಿ ತ್ರಿರಂಗೀ ಧ್ವಜವನ್ನು ಎತ್ತಿ ಹಿಡಿದು ಅವಳು ತನ್ನ ಮೃದು ಮಧುರ ಕಂಠದಿಂದ ಹಾಡಿದಳು—

ನಮೋ ನಮೋ ಶಾರದಾ—
ದೇವಿ ದಿವ್ಯ ಹಾಸಿನೀ
ನಮೋ ನಮೋ ವಿಶ್ವವಾಣಿ
ನಮೋ ಮಧುರ ಭಾಷಿಣೀ—
ಚೆಲುವು ತುಂಬಿ ಗೆಲವು ಹೊತ್ತು
ಬಂದೆವಮ್ಮ ನಿನ್ನೆಡೆ—
ಮಕ್ಕಳೆಂದು ನೋಡದಿರು
ತೊದಲು ನುಡಿಯ ಸೇರ್ಪಡೆ
ನಮ್ಮ ಪೂಜೆ ಮಕ್ಕಳಾಟ
ನಮ್ಮ ನೋಟ ನುಡಿ ನಡೆ—
ನಿನ್ನ ಕೈಯ ಬೀಣೆ ಮಿಡುಕಿ
ಕರೆವುದೆಮ್ಮ ನಾಕಡೆ

ನಮೋ ನಮೋ ಶಾರದಾ ! —

ಸೋಣ ಮಾಸದೆಲ್ಲ ಹೂವ
ನಿನ್ನ ಕಾಲಿಗಿಡುವೆವು !
ಬಾನ ಮುಡಿಯ ತುಂಬು ಸಿರಿಗೆ
ತಾರೆಗಳನೆ ತುಡುವೆವು !
ನಮ್ಮ ಪೂಜೆ ಮಕ್ಕಳಾಟ
ನಮ್ಮ ಗೈಮೆ ಗೆಲವಿಡೆ
ನಿನ್ನ ಕೊರಳ ಗೀತೆ ಹರಿಸಿ
ಕರೆವುದೆಮ್ಮ ನಾಕಡೆ !

ನಮೋ ನಮೋ ಶಾರದಾ ! —

ವಿಶ್ವವೆರೆದ ಸೊಗಸಿನತ್ತ
ನಮ್ಮದೇನು ಸಿಂಗರ ?
ಚಂದ್ರ ಸೂರ್ಯ ಸೊಡರಿನತ್ತ
ನಮ್ಮದೇನು ಸಾದರ ?

ನಮ್ಮ ಪೂಜೆ ಮಕ್ಕಳಾಟ
ಮಳಲ ಭಕ್ತಿ ಮುನ್ನಡೆ—
ನಿನ್ನ ದಯೆಯ ಕೈಯ ನೀಡಿ
ನಡೆಸು ನಮ್ಮನಾಕಡೆ !

ನಮೋ ನಮೋ ಶಾರದಾ ! —

ಯಾ ಕುಂದೇಂದು ತುಷಾರಹಾರಧವಲಾ ಯಾ ಶುಭ್ರ ವಸ್ತ್ರಾವೃತಾ
ಯಾ ವೀಣಾ ವರ ದಂಡ ಮಂಡಿತ ಕರಾ ಯಾ ಶ್ವೇತ ಪದ್ಮಾಸನಾ
ಯಾ ಬ್ರಹ್ಮಾಚ್ಯುತ ಪ್ರಭೃತಿಭಿಃ ದೇವೈಃ ಸದಾ ವಂದಿತಾ
ಸಾಮಾಂಪಾತು ಸರಸ್ವತೀ ಭಗವತೀ ನಿಶ್ಶೇಷ ಜಾಡ್ಯಾಪಹಾ।

ಅಂಬುಜಾಕ್ಷಿಯ ಕುರಿತು—

The author who is a poet of repute writing his first novel must be congratulated for his righteous indignation and enthusiasm without committing excesses of realism which seem to be the latest fashion in novels dealing with prostitution as a problem.

—**'The Sunday Standard,'**

ರಾಯಭಾರಿ—

ಕವಿಸಹಜವಾದ ಮಾರ್ದವತೆಯಲ್ಲಿ ಭಾವಪೂರ್ಣ ನಿಸರ್ಗ ಸಂಪತ್ತಿನಲ್ಲಿ ಮೋಹಕದ ರಸಝರಿಯಲ್ಲಿ ಕಾದಂಬರಿಯಿದನ್ನು—ಕಾವ್ಯಧಾರೆಯಲ್ಲಿ ತಂದಿಳಿಸಿದ್ದಾರೆ.

ನವಭಾರತ—

ಶ್ರೀ ಎಸ್. ವೆಂಕಟರಾಜರ ಈ ಪ್ರಥಮ ಸಾಮಾಜಿಕ ಕಾದಂಬರಿಯಲ್ಲಿ ಒಂದು ನವದೃಷ್ಟಿಕೋನವಿದೆ. ವೇಶ್ಯೆ ಮತ್ತು ಕುಲವಂತರೆನಿಸಿಕೊಳ್ಳುವವರ ಎರಡು ಭಿನ್ನ ಮುಖಗಳನ್ನಿಲ್ಲಿ ಉತ್ತಮವಾಗಿ ಚಿತ್ರಿಸಿದ್ದಾರೆ.

ಪ್ರಜಾವಾಣಿ—

ಉತ್ತಮಭಾಷೆ ಒಪ್ಪುವ ಘಟನೆಗಳಿಂದ ಸಹಜತೆಯಿಂದ ಕೂಡಿರುವ ಕತೆ, ಇವುಗಳು ಕಾದಂಬರಿ ಸ್ವಾಗತಾರ್ಹವಾಗುವಂತೆ ಮಾಡಿವೆ. ವ್ಯಕ್ತಿ ಚಿತ್ರಣವೂ ಉತ್ತಮವಾಗಿದೆ.

ರಾಷ್ಟ್ರಬಂಧು—

ಅಂಬುಜಾಕ್ಷಿಯಲ್ಲಿ ನಮ್ಮನ್ನು ಸೆಳೆಯುವುದು ಲೇಖಕರ ಪ್ರೌಢ ಹಾಗೂ ಭಾವನಾಪೂರ್ಣವಾದ ಶೈಲಿ.

ಯುಗಪುರುಷ—

ಇದೊಂದು ಸುಂದರವಾದ ಕಥಾವಸ್ತು. ಅದನ್ನು ಕಥಿಸಿರುವ ರೀತಿಯೂ ಸೊಗಸಾಗಿದೆ. ಮನೋಹರವಾದ ಭಾಷೆಗೆ ಇದರಿಂದ ಹತ್ತಾರು ಎಡೆಯ ಉದ್ಧರಣಗಳನ್ನು ದೃಷ್ಟಾಂತವಾಗಿ ಎತ್ತಿ ತೋರಿಸಬಹುದಾಗಿದೆ. ಪುಸ್ತಕವು ತುದಿಯಿಂದ ಕೊನೆಯವರೆಗೆ ಓದಿಸಿಕೊಂಡು ಹೋಗುತ್ತದೆ.

ಕರ್ಮವೀರ—

ಈ ಕಿರು ಕಾದಂಬರಿಯು ಈಗ ಸ್ವಲ್ಪ ಚರ್ವಿತ ಚರ್ವಣವಾದ ವೇಶ್ಯಾ ಸಮಸ್ಯೆಗೆ ಸಂಬಂಧಿಸಿದ್ದು. ಆದರೆ ಅದನ್ನು ನೋಡುವ ಈ ಲೇಖಕರ ದೃಷ್ಟಿಯು ಇಂಥ ಸಾಮಾನ್ಯ ಕಾದಂಬರಿಗಳಲ್ಲಿ ಕಾಣಬರುವುದಕ್ಕಿಂತ ಭಿನ್ನವಾಗಿದೆ. ಶ್ರೀ ವೆಂಕಟರಾಜರು ಕಥೆಯನ್ನು ಮನಸ್ಸಿಗೆ ನಾಟುವಂತೆ ಹೇಳಿದ್ದಾರೆ.

ಪ್ರಕಾಶಿನೀ—

ಶ್ರೀ ವೆಂಕಟರಾಜರು ಕನ್ನಡ ನುಡಿಯಲ್ಲಿ ಪ್ರತಿಭಾವಂತ ಕವಿ. ಕಾವ್ಯರಸ ಸೃಷ್ಟಿಯಲ್ಲಿ ಸಿದ್ಧಹಸ್ತರಾದಂತೆಯೇ ಒಳ್ಳೆಯ ಕತೆ ಕಾದಂಬರಿಗಳನ್ನು ರಚಿಸಿದ್ದಾರೆ. ಈ ಕಾದಂಬರಿಯಲ್ಲಿ ಪ್ರತಿಯೊಂದು ಸನ್ನಿವೇಶದಲ್ಲಿಯು ಸಾರ್ಥಕವಾದ ಶಬ್ದ ಸಂಪತ್ತಿನಿಂದ ಅಲ್ಲಲ್ಲಿ ಅದರ ವಿಶ್ಲೇಷಣ ಮಾಡಿ ತೋರಿಸಿರುತ್ತಾರೆ.

ನವಯುಗ—

ಇಲ್ಲಿರುವುದು ಉದಾತ್ತ ಸಂಸ್ಕಾರವುಳ್ಳ ಸ್ತ್ರೀಯ ಚರಿತ್ರ ಚಿತ್ರಣ. ಕಾವ್ಯ ಮಯವಾದ ಶೈಲಿ. ಸಹಾನುಭೂತಿಯಿಂದ ತುಂಬಿದ ದೃಷ್ಟಿಕೋನ. ಶ್ರೀ ವೆಂಕಟರಾಜರ ಲೇಖನಿ ಹೃದಯಸ್ಪರ್ಶಿಯಾಗುವಂತೆ ಈ ಕಾದಂಬರಿಯನ್ನು ಬರೆದಿದೆ.

ಸುದರ್ಶನ—

ಕಾದಂಬರಿಯುದ್ದಕ್ಕೂ ಹರಿಯುತ್ತಿರುವ ನಿರ್ಮಲವಾದ ಹಾಗೂ ರಸಮುಗ್ಧವಾದ ಮಾತುಗಾರಿಕೆ ಮನಸ್ಸನ್ನು ಪೂರ್ಣಸೆರೆಗೊಳ್ಳುವುದು.



Majestic Press, Udipi.